ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 2 ಸಂಚಿಕೆ 42

ಅಕ್ಟೋಬರ್ 19 , 2008

ಕನ್ನಡ ವಾರಪತ್ರಿಕೆ

www.janashakthi.org

ರೂ. 5/-





ಗಣಿ ಲೂಟಿ

ಹುಲಿ ಬಿಟ್ಟು ಇಲಿ ಹಿಡಿದದ್ದು !!



13ನೇ SFI ಅಖಿಲ ಭಾರತ ಸಮ್ಮೇಳನ

ವಿದ್ಯಾರ್ಥಿ ಚಳುವಳಿಯ ಮೈಲುಗಲ್ಲು






ಬಾಬಾಬುಡನ್ ಗಿರಿಯಲ್ಲಿ ಭಜರಂಗಗಿರಿ ?

ರಾಜಸ್ತಾನದ ಮೇಲೆ ಗುಜರಾತ್ ಕರಿ ನೆರಳು !



'ಗುಲಾಬಿ ಟಾಕೀಸ್' ಹೊಸ ಕಾಲದ ತಲ್ಲಣಗಳ ದಾಖಲೆ

ನೋಟ



ಡಾ. ಜಿ. ಭಾಸ್ಕರ ಮಯ್ಯ

ಪೆಂಟಗಾನ್ ಮತ್ತು ಯುದ್ಧೋನ್ಮಾದ


ದುಷ್ಟ ಅಮೆರಿಕಾದ ಶಸ್ತ್ರಾಸ್ತ್ರ ಉತ್ಪಾದನೆ, ಮಾರಾಟ ಜಾಲ, ಹಿಡಿತ, ಅದರ ಸಾಮ್ರಾಜ್ಯಶಾಹಿ ಸುಲಿಗೆಕೋರ ಉದ್ದೇಶಕ್ಕೆ, ಯುದ್ಧೋನ್ಮಾದಕ್ಕೆ ಪೂರಕವಾಗಿಯೇ ಇದೆ.

ಕಳೆದ ವಾರದಿಂದ

ಶಾಂತಿ ಒಪ್ಪಂದದ ಸಾಲ್ಟ್-2 ರ ವಿರುದ್ಧ ಅಪಪ್ರಚಾರಕ್ಕಾಗಿಯೇ 1979 ರಲ್ಲಿ ಇದು ಒಂದು ಕೋಟಿ ಡಾಲರ್ ಖರ್ಚು ಮಾಡಿತ್ತು. ಈ ಸಂಸ್ಥೆಯ ನಿರ್ದೇಶಕ ಹಾವರ್ಡ್ ಫಿಲಿಪ್ಸ್‌ನ ಪ್ರಕಾರ ಸದ್ರಿ ಒಪ್ಪಂದವನ್ನು ಸೋಲಿಸಲು 45 ಲಕ್ಷ ಪತ್ರಗಳನ್ನು ಕಾಂಗ್ರೆಸ್ ಸದಸ್ಯರಿಗೆ ಕಳುಹಿಸಲಾಗಿತ್ತಲ್ಲದೆ, ಈ ಕುರಿತು ವಾದಿಸಲು ನೂರಾರು ತಜ್ಞರನ್ನು ಅಣಿಗೊಳಿಸಲಾಗಿತ್ತು.

ನಿರುದ್ಯೋಗ ಮತ್ತು ಹದಗೆಟ್ಟ ಆರ್ಥಿಕ ಸ್ಥಿತಿ:

ನೌಕಾಪಡೆಯ ಕಾರ್ಯದರ್ಶಿ ಜಾನ್ ಲೆಹಮನ್‌ರ ಪ್ರಕಾರ- 'ಬಜೆಟ್‌ನಲ್ಲಿ ಪ್ರತಿಯೊಂದು ಶತಕೋಟಿ ಡಾಲರಿನ ಕಡಿತವೆಂದರೆ-ನಲವತ್ತು ಸಾವಿರ ನಿರುದ್ಯೋಗದ ಸೃಷ್ಟಿ' ಸೈನ್ಯವಾದಿಗಳ ತರ್ಕವೆಂದರೆ ಬಹುದೊಡ್ಡ ಪ್ರಮಾಣದಲ್ಲಿ ನಿರುದ್ಯೋಗಗಳ ಸೃಷ್ಟಿ. ಆದರೆ ಸ್ವಯಂ ಪೆಂಟಗಾನ್ ವರದಿಯ ಪ್ರಕಾರ 1961 ರಿಂದ 1973 ರ ಮಧ್ಯದಲ್ಲಿ ಸೈನ್ಯ ಕಾರ್ಯಕ್ರಮಗಳಲ್ಲಿ ಮಾಡಲಾದ ಕೆಲವೊಂದು ಕಡಿತ 82000 ಸಾವಿರ ಜನರನ್ನು ನಿರುದ್ಯೋಗಿಗಳನ್ನಾಗಿಸಿತು. ಆದರೆ ಕಡಿತ ಮಾಡಿದ ಹಣ ನಾಗರಿಕ ಕ್ಷೇತ್ರದಲ್ಲಿ ಉಪಯೋಗಿಸಲಾಗಿ ಅದು 162000 ಉದ್ಯೋಗಾವಕಾಶಗಳನ್ನು ಸೃಷ್ಟಿಸಿತು. ಇದರಿಂದ ಸ್ಪಷ್ಟವಾಗುವುದೇನೆಂದರೆ ಸಾಮ್ರಾಜ್ಯಶಾಹಿ ದೇಶಗಳು ಸೈನ್ಯ ಕ್ಷೇತ್ರದಲ್ಲಿ ನಿರಂತರವಾಗಿ ಹೆಚ್ಚು ಹೆಚ್ಚು ಸಂಪತ್ತನ್ನು ವಿನಿಯೋಗಿಸುತ್ತಾ, ನಿರುದ್ಯೋಗಿಗಳ ದೊಡ್ಡ ಪಡೆಯನ್ನೇ ನಿರ್ಮಾಣ ಮಾಡುತ್ತಿವೆ.



ಪಶ್ಚಿಮ ಜರ್ಮನಿಯಲ್ಲಿ ಶಸ್ತ್ರಾಸ್ತ್ರಗಳ ನಾಗಾಲೋಟಕ್ಕಿಂತ ಮುಂಚೆ. ನಿರುದ್ಯೋಗದ ಸಮಸ್ಯೆಯಿರಲಿಲ್ಲ. ಆದರೆ ಅಮೆರಿಕಾದ ಶಸ್ತ್ರೋನ್ಮಾದ ಹೆಚ್ಚುತ್ತಲೆ ಅಲ್ಲಿ ನಿರುದ್ಯೋಗವು ಹೆಚ್ಚಲಾರಂಭಿಸಿತು. 1979 ರಿಂದ 83 ರ ಅವಧಿಯಲ್ಲಿ ನಿರುದ್ಯೋಗವು ಶೇ 7 ರಿಂದ ಶೇ. 10 ಕ್ಕೆ ಏರಿತು. 1984 ರಲ್ಲಿ ನಿರುದ್ಯೋಗಿಗಳ ಸಂಖ್ಯೆ ಒಂದು ಕೋಟಿ ಇಪ್ಪತ್ತು ಲಕ್ಷಕ್ಕೇರಿತು. ಇದೇ ಪರಿಸ್ಥಿತಿ ಬ್ರಿಟನ್ನಿನದ್ದು ಕೂಡಾ.

ಇರಾಕ್, ಅಫಘಾನ್ ಯುದ್ಧದ ನಂತರ ಅಮೆರಿಕಾದ ಆರ್ಥಿಕ ಪರಿಸ್ಥಿತಿ ಸಂಪೂರ್ಣ ಕುಸಿದದ್ದು ಈಗ ಎಲ್ಲರಿಗೂ ತಿಳಿದಿದೆ.

ಸೈನ್ಯವಾದದ ಪ್ರಭಾವವು ಜನರ ಮೇಲೆ ಹೆಚ್ಚುತ್ತಿರುವ ತೆರಿಗೆಗಳ ರೂಪದಲ್ಲಿ ಪ್ರಕಟವಾಗುತ್ತದೆ. ಎರಡನೆಯ ಯುದ್ಧದ ಮೊದಲು ಅಮೆರಿಕಾದ ಕಾರ್ಮಿಕರ ವೇತನದ ಆರನೆಯ ಒಂದು ಭಾಗ ತೆರಿಗೆಗಳ ರೂಪದಲ್ಲಿ ಹೋಗುತ್ತಿತ್ತು. ಎಂಟನೆಯ ದಶಕದಲ್ಲಿ ಈ ತೆರಿಗೆಯು ಮೂರನೆಯ ಒಂದರಷ್ಟಾಯಿತು. ಒಂಬತ್ತನೆಯ ದಶಕದಲ್ಲಿ ಅದು ಶೇಕಡಾ ಐವತ್ತರಷ್ಟು ಏರಿತು. ಸೈನ್ಯವಾದದ ಭಾರ ಸದಾ ಕಾರ್ಮಿಕ ವರ್ಗವನ್ನು ಮೆಟ್ಟಿ ತುಳಿಯುತ್ತದೆ. ಇಷ್ಟಾದರೂ, ನಿರುದ್ಯೋಗ ಮತ್ತು ಕಾರ್ಮಿಕ ವರ್ಗದ ಸ್ಥಿತಿಗತಿಯ ಸುಧಾರಣೆಯ ಬಗೆಗೆ ಅಮೆರಿಕಾಕ್ಕೆ ಯಾವುದೇ ಯೋಚನೆಯಿಲ್ಲ. ಅದರ ಆದ್ಯತೆ-ಪ್ರಯಾರಿಟಿ ಇರುವುದು ತಾರಾ ಸಮರದ ಕಡೆಗೆ.

ಸೈನ್ಯ ಶಕ್ತಿಗೆ ವಿನಿಯೋಗಿಸಲ್ಪಡುವ ಒಟ್ಟು ಮೊತ್ತದ ಒಂದು ಸಣ್ಣ ಭಾಗ ಅಂದರೆ ಕೇವಲ ಎಂಟು ನೂರು ಕೋಟಿ ಡಾಲರ್ ಅಭಿವೃದ್ಧಿಶೀಲ ದೇಶಗಳ ಖಾದ್ಯ ಪದಾರ್ಥಗಳ ಅವಶ್ಯಕತೆಯನ್ನು ಪೂರೈಸಲು ಸಾಕಾಗುತ್ತದೆ. ಕೇವಲ 21 ನೂರು ಕೋಟಿ ಡಾಲರುಗಳನ್ನು ಪ್ರತಿವರ್ಷ ಖರ್ಚು ಮಾಡುವುದರಿಂದ ಇಡೀ ವಿಶ್ವದಲ್ಲಿ ಹಸಿವೆ, ನಿರಕ್ಷರತೆಯಂತಹ ಭಯಂಕರ ರೋಗಗಳನ್ನು ಸಂಪೂರ್ಣವಾಗಿ ನಾಶಪಡಿಸಬಹುದು. ಆದರೆ ಸಾಮ್ರಾಜ್ಯಶಾಹಿ ಲಾಭಕೋರತನ ಮಾನವತೆಯ ಎಲ್ಲಾ ಮೂಲ ಸೆಲೆಗಳನ್ನು ನಾಶ ಮಾಡಿಬಿಡುತ್ತದೆ.

ಪರದೆಯ ಹಿಂದಿರುವ ಸರಕಾರ:

ವಿಜಯವಾಡದ ಪಿ. ನಾರಾಯಣ್ ರಾವ್ ತಮ್ಮ 'ಅಮೆರಿಕಾ ಟುಡೆ' ಪುಸ್ತಕದಲ್ಲಿ ತಮ್ಮ ಅಮೆರಿಕಾ ಪ್ರವಾಸದ ಬಗ್ಗೆ ಬರೆಯುತ್ತಾ ಹೀಗೆಂದಿದ್ದರು. 'ಚಿಕಾಗೋದ ಬಸ್ ಸ್ಟಾಂಡಿನಲ್ಲಿ ಒಂದು ದೊಡ್ಡ ಡೂಮ್ ನೇತಾಡಿಕೊಂಡಿತ್ತು. ಪಕ್ಕದಲ್ಲಿರುವ ಅಮೆರಿಕನ್ನನೊಡನೆ ಈ ಬಗ್ಗೆ ಕೇಳಿದಾಗ ಆತನೆಂದ: 'ಬಿಗ್ ಬ್ರದರ್ ಈಸ್ ಲುಕ್ಕಿಂಗ್' ಕೊನೆಗೆ ಆತನಿಂದ ತಿಳಿದುದೇನೆಂದರೆ, ಒಂದು ಗುಪ್ತ ಟಿ.ವಿ. ಕೆಮರಾ ಆ ರೂಮಿಗೆ ಅಳವಡಿಸಲಾಗಿತ್ತು.

ಅಂತೆಯೆ, ಸಾಮ್ರಾಜ್ಯಶಾಹಿ ಅಮೆರಿಕಾದ ಗುತ್ತೇದಾರರು ತಮ್ಮ ಜನಗಳ ಬಗ್ಗೆ ಎಷ್ಟೊಂದು ಅವಿಶ್ವಾಸದಿಂದಿರುತ್ತಾರೆಂದರೆ ಅವರು ಸಂಗ್ರಹಿಸಿದ ಜನರ ವ್ಯಕ್ತಿಗತ ಕಂಪ್ಯೂಟರ್ ಮಾಹಿತಿಗಳೇ 15 ಕೋಟಿಗಳಷ್ಟಿವೆ. ಅವರು ಪ್ರಾಮಾಣಿಕ ಅಧಿಕಾರಿಗಳನ್ನೂ 'ಲೈವ್ ಡಿಟೆಕ್ಟರ್' ಯಂತ್ರಗಳಿಂದ ಪರೀಕ್ಷೆಗೆ ಒಳಪಡಿಸಿ ದಬ್ಬಾಳಿಕೆ ಮಾಡುತ್ತಾರೆ. 1984 ರಲ್ಲಿ ರಕ್ಷಣಾ ವಿಭಾಗದ 21000 ನೌಕರರು ಈ ಪರೀಕ್ಷೆಗೆ ಒಳಗಾಗಿದ್ದಾರೆ.

ರೇಗನ್ ಆಡಳಿತ ತನ್ನ ಹುಳುಕುಗಳನ್ನು ಮುಚ್ಚಿಡಲು 1800 ಪುಸ್ತಕಗಳ ಪ್ರಕಾಶನವನ್ನು ರದ್ದು ಮಾಡಿತ್ತು. 285 ಮುದ್ರಣಾಲಯಗಳನ್ನು (ಅಂದರೆ 2500 ನೌಕರರ ಸಹಿತ) ಕಾನೂನು ಬಾಹಿರವೆಂದು ಪ್ರತಿಬಂಧಿಸಿತ್ತು.

ಸರಕಾರದ ಕಾನೂನಿನ ಮೇರೆಗೆ ಸಿ. ಐ. ಎ. ದೇಶದ ಒಳಗೆ ಪತ್ತೆದಾರಿಕೆ ನಡೆಸುವಂತಿಲ್ಲ. ಆದರೆ 1953 ರಿಂದ 73 ರ ಅವಧಿಯಲ್ಲಿ ಅದು 25000 ವ್ಯಕ್ತಿಗತ ಪತ್ರಗಳನ್ನು ನಕಲು ಮಾಡಿದೆ. 15 ಲಕ್ಷ ಜನರನ್ನು ಸಂಶಯಾಸ್ಪದ ವ್ಯಕ್ತಿಗಳ ವಿಭಾಗಕ್ಕೆ ಸೇರಿಸಿದೆ. ಅಂತೆಯೆ ಸಿ.ಐ.ಎ. 3 ಲಕ್ಷ ಜನರನ್ನು ನಿರೀಕ್ಷಣೆಯಲ್ಲಿರಿಸಿದೆ.

1970 ರಲ್ಲಿಯೆ ಅಮೆರಿಕಾದ ಇಂಟಲಿಜೆನ್ಸ್ ವಿಭಾಗ 18 ಕೋಟಿ ಅಮೆರಿಕನ್ನರ ಬೆರಳಚ್ಚುಗಳನ್ನು ಸಂಗ್ರಹಿಸಿತ್ತು. 'ಅಮೆರಿಕನ್ ಸೆನೆಟ್ ಸ್ಪೆಶಲ್



ಇನ್‌ವೆಸ್ಟಿಗೇಶನ್ ಕಮಿಟಿ' ತನ್ನ ಜನರ ಬಗೆಗೆ ಮಾಹಿತಿಗಳ 5 ಲಕ್ಷ ಫೈಲುಗಳನ್ನು ತಯಾರಿಸಿದೆ. ತನ್ನ ಜನತೆಯ ಬಗ್ಗೆಯೆ ಇಷ್ಟೊಂದು ಅಪನಂಬಿಕೆಯಿರುವ ಅಮೆರಿಕಾ ವಿಶ್ವ ಯಜಮಾನ್ಯ ಹೊಂದಲು ಪ್ರಪಂಚದಾದ್ಯಂತ ಎಷ್ಟೊಂದು ಬೇಹುಗಾರಿಕಾ ಜಾಲವನ್ನು ಹೊಂದಿದೆ - ಎಂಬುದನ್ನು ಊಹಿಸಬಹುದು. ಆದರೆ, ಇಂದಿನ ಅಮೆರಿಕಾ ತನ್ನೊಳಗೇ ಬೆಳೆಯುತ್ತಿರುವ ಕ್ಯಾನ್ಸರ್ ಗಡ್ಡೆಯಿಂದ ಸ್ವತಃ ಪ್ರಾಣ ಕಳೆದುಕೊಳ್ಳಬಹುದು.

ಮೈಕೊ(ನಾಗನಾಥಪುರ) ಕಾರ್ಮಿಕರ ಸಂಘದ ಚುನಾವಣೆ

ಸಿಐಟಿಯು ತಂಡಕ್ಕೆ ಜಯ

'ಭಾಷ್' ಎಂಬುದು ಸುಮಾರು 50 ದೇಶಗಳಲ್ಲಿ 2.4 ಲಕ್ಷ ಕಾರ್ಮಿಕರನ್ನು ಹೊಂದಿರುವ ಜರ್ಮನ್ ಮೂಲದ ಒಂದು ಬಹುರಾಷ್ಟ್ರೀಯ ಕಂಪನಿ. ಈ ಕಂಪನಿಯ ಮೈಕೊ ಬಾಷ್ ಲಿ. ನ 5 ಘಟಕಗಳು ಭಾರತದಲ್ಲಿವೆ. ಬೆಂಗಳೂರಿನಲ್ಲಿ ಎರಡಿವೆ. ಒಂದು ಆಡುಗೋಡಿಯಲ್ಲಿ ಮತ್ತೊಂದು ನಾಗನಾಥಪುರದಲ್ಲಿ.

ಈ ಮೈಕೊ (ನಾಗನಾಥಪುರ ಘಟಕ) ಕಾರ್ಮಿಕರ ಸಂಘಕ್ಕೆ (ಎಂ.ಕೆ.ಎಫ್) ಗೆ ಇತ್ತೀಚೆಗೆ ಚುನಾವಣೆ ನಡೆದು ಸಿಐಟಿಯು ತಂಡ ಗೆದ್ದಿದೆ. ಈ ಮೊದಲು ಇಲ್ಲಿ ಐಎನ್‌ಟಿಯುಸಿ ಗೆಲುವು ಸಾಧಿಸಿತ್ತು.

ಚುನಾವಣೆಯಲ್ಲಿ ಸಂಘದ ಅಧ್ಯಕ್ಷ ಸ್ಥಾನ, ಉಪಾಧ್ಯಕ್ಷ-2 ಸ್ಥಾನ, ಸಂಘಟನಾ ಕಾರ್ಯದರ್ಶಿ ಹಾಗೂ ಸಹಾಯಕ ಕಾರ್ಯದರ್ಶಿ ಸ್ಥಾನ ಹೀಗೆ ಒಟ್ಟು 7 ಪದಾಧಿಕಾರಿಗಳಲ್ಲಿ ಒಟ್ಟು ನಾಲ್ಕು ಜನರು ಸಿಐಟಿಯುಗೆ ಸೇರಿದವರು ಆಯ್ಕೆಯಾಗಿದ್ದಾರೆ. 15 ಜನರ ಸಮಿತಿಯಲ್ಲಿ ಸಿಐಟಿಯುಗೆ ಸೇರಿದ 8ಜನರು ಆಯ್ಕೆಯಾಗಿದ್ದಾರೆ. ಉಳಿದಂತೆ ನಾಲ್ಕು ಸ್ಥಾನ ಎಐಟಿಯುಸಿ, 3 ಸ್ಥಾನ ಐಎನ್‌ಟಿಯುಸಿ ಪಾಲಾಗಿದೆ.



ಪ್ರಸನ್ನಕುಮಾರ್

ಅಧ್ಯಕ್ಷ ಸ್ಥಾನಕ್ಕೆ ಸಿಐಟಿಯು ಸಂಘಟನೆಯ ರಾಜ್ಯ ಕಾರ್ಯದರ್ಶಿ ಎಸ್.ಪ್ರಸನ್ನಕುಮಾರ್ ಅವರ ಪರವಾಗಿ ಸ್ಪರ್ಧಿಸಿದ್ದ ಮೈಕೊ ಕಾರ್ಮಿಕರಾದ ಪ್ರಕಾಶ್. ಬಿ.ಜಿ. ಯವರು ಗೆದ್ದಿದ್ದಾರೆ. ಚುನಾವಣಾ ನಿಯಮಗಳ ಅಗತ್ಯದಂತೆ ಅವರು ಪ್ರಸನ್ನಕುಮಾರ್‌ರವರ ಪರವಾಗಿ ಸ್ಪರ್ಧಿಸಿದ್ದರು. ಅಕ್ಟೋಬರ್ 15, 2008 ರಂದು ಸರ್ವಸದಸ್ಯರ ಸಭೆ ನಡೆಯಲಿದ್ದು ಪ್ರಕಾಶ್ ಬಿ.ಜಿ. ಯವರು ರಾಜಿನಾಮೆ ನೀಡಿ ಎಸ್.ಪ್ರಸನ್ನಕುಮಾರ್‌ರವರು ಅಧ್ಯಕ್ಷ ಸ್ಥಾನದ ಜವಾಬ್ದಾರಿ ವಹಿಸಿಕೊಳ್ಳಲಿದ್ದಾರೆ. ಸೆಪ್ಟೆಂಬರ್ 2 ರಂದು ನಡೆದ ಈ ಚುನಾವಣೆಗಳಲ್ಲಿ ಉಪಾಧ್ಯಕ್ಷ-2 ಸ್ಥಾನಕ್ಕೆ ಶಂಕರ ನಾರಾಯಣ ರಾವ್, ಸಂಘಟನಾ ಕಾರ್ಯದರ್ಶಿ ಸ್ಥಾನಕ್ಕೆ ಫಾಲಾಕ್ಷ, ಸಹಾಯಕ ಕಾರ್ಯದರ್ಶಿ ಸ್ಥಾನಕ್ಕೆ ಬೇಗ್ ಚುನಾಯಿತರಾಗಿದ್ದಾರೆ. ಪದಾಧಿಕಾರಿಗಳಲ್ಲಿ ಉಪಾಧ್ಯಕ್ಷ-1, ಪ್ರಧಾನ ಕಾರ್ಯದರ್ಶಿ ಇವೆರಡೂ ಸ್ಥಾನ ಎಐಟಿಯುಸಿ ಪಾಲಾಗಿದೆ. ಖಜಾಂಚಿ ಸ್ಥಾನ ಐಎನ್‌ಟಿಯುಸಿ ಪಾಲಾಗಿದೆ.

ಕ್ಯಾಂಟಿನ್ ಸಮಿತಿ: ಇದೇ ಸಮಯದಲ್ಲಿ ನಡೆದ ಕ್ಯಾಂಟಿನ್ ಸಮಿತಿ ಚುನಾವಣೆಯಲ್ಲಿ ಸಿಐಟಿಯುನ ಗಂಗರಾಜು ಅವರು ಸತತವಾಗಿ 3ನೇ ಬಾರಿ ಗೆಲುವು ಸಾಧಿಸಿದ್ದಾರೆ. ಎರಡು ಸ್ಥಾನಗಳ ಪೈಕಿ ಒಂದು ಐಎನ್‌ಟಿಯುಸಿ ಪಾಲಾಗಿದೆ.

ಬಾಬಾಬುಡನ್‌ಗಿರಿಯಲ್ಲಿ ಭಜರಂಗಗಿರಿ ನಡೆಸಲು ಅನುಮತಿ?

ಬಾಬಾಬುಡನ್‌ಗಿರಿಯಲ್ಲಿ ಯಾವುದೇ ಹೊಸ ಪರಂಪರೆಯನ್ನು ಆರಂಭಿಸಬಾರದೆಂದು ನ್ಯಾಯಾಲಯದ ಸ್ಪಷ್ಟ ಆದೇಶ ಇರುವಾಗಲೂ ಈ ಸಲ ಜಿಲ್ಲಾಡಳಿತವು ದರ್ಗಾ ಗುಹೆಯ ಹೊರ ಆವರಣದಲ್ಲಿ ಮೂರ್ತಿ ಪೂಜೆಗೆ ಅವಕಾಶ ನೀಡುವ ಜಿಲ್ಲಾಡಳಿತದ ತೀರ್ಮಾನ ಆಕ್ಷೇಪಾರ್ಹವೂ ಆತಂಕಕಾರಿಯೂ ಆಗಿದೆ. ಇದರಿಂದ ಮುಂದೆ ಆಗಬಹುದಾದ ಎಲ್ಲಾ ಅನಾಹುತಗಳಿಗೆ ಜಿಲ್ಲಾಡಳಿತವೇ ಕಾರಣವಾಗಲಿದೆ.

ಇಲ್ಲಿ ನ್ಯಾಯಾಲಯದ ಇತ್ತೀಚಿನ ಆದೇಶವನ್ನು ತಿರುಚಿ ಅದರ ದುರ್ಬಳಕೆ ಮಾಡಲು ಸಂಘ ಪರಿವಾರದ ಸಂಘಟನೆಗಳು ಹೂಡಿದ ಕುತಂತ್ರಕ್ಕೆ ಜಿಲ್ಲಾಧಿಕಾರಿ ಆರ್.ನಾರಾಯಣ ಸ್ವಾಮಿ ಕೈ ಜೋಡಿಸಿದ್ದಾರೆ. ಇದಕ್ಕೆ ರಾಜ್ಯ ಬಿಜೆಪಿ ಸರ್ಕಾರದ ಒತ್ತಡವಿದ್ದರೆ ಆಶ್ಚರ್ಯವೇನಿಲ್ಲ. ಬಾಬಾಬುಡನ್‌ಗಿರಿ ದತ್ತಪೀಠದಲ್ಲಿ ಶತಮಾನಗಳಿಂದ ನಡೆಸಿಕೊಂಡು ಬರಲಾಗಿದ್ದ ಸೂಫಿ ಪರಂಪರೆಯನ್ನು ನಾಶಮಾಡಲು ಉದ್ದೇಶಿಸಿರುವ ಸಂಘ ಪರಿವಾರದ ಶಕ್ತಿಗಳಿಗೆ ತಮ್ಮ ದುರುದ್ದೇಶವನ್ನು ಸಾಧಿಸಲು ಯಡಿಯೂರಪ್ಪ ಸರ್ಕಾರ ದಾರಿ ಸುಗಮಗೊಳಿಸಲು ಹೊರಟಿರುವುದು ಸ್ಪಷ್ಟವಾಗುತ್ತಿದೆ.


ವಿವಾದಗ್ರಸ್ತ ಗುಹೆಯಲ್ಲಿ ಹಿಂದುಗಳಿಗೂ ಪೂಜೆ ಸಲ್ಲಿಸಲು ಮೊದಲಿನಿಂದಲೂ ಅವಕಾಶವಿತ್ತು. ಗುಹೆಯ ಹೊರಗಡೆ ತೆಂಗಿನಕಾಯಿ ಒಡೆಯಲೂ ಅವಕಾಶವಿತ್ತು. ಆದರೆ ಅಲ್ಲಿ ಯಾವ ಮೂರ್ತಿ ಪ್ರತಿಷ್ಠಾಪನೆ ಮಾಡಲು, ಹೋಮ ಹವನ ಮಾಡಲು ದತ್ತಮಾಲ ಅಭಿಯಾನ ನಡೆಸಲು ಅವಕಾಶವಿಲ್ಲ. ಹಾಗೆ ಮಾಡುವುದೆಂದರೆ ಅಲ್ಲಿಯ ಸೂಫಿ ಪರಂಪರೆಯನ್ನು ನಾಶ ಮಾಡಿದಂತಾಗುತ್ತದೆ. ಹಿಂದುಗಳು ಗುಹೆಯಲ್ಲಿರುವ ಪಾದುಕೆಗಳಿಗೆ ಹಾಗೂ ಸಮಾಧಿಗಳಿಗೆ ಗೌರವ ಸಲ್ಲಿಸಬಹುದು. ಅದನ್ನು ಬಿಟ್ಟು ಬೇರೆ ಯಾವ ಕ್ರಮವೂ ಅಲ್ಲಿ ಜಾರಿಯಲ್ಲಿ ಇರಲಿಲ್ಲ. ಆದರೆ ಈಗ ಜಿಲ್ಲಾಡಳಿತ ನ್ಯಾಯಾಲಯದ ತೀರ್ಪಿಗೆ ವಿರುದ್ಧವಾಗಿ, ಅಲ್ಲಿನ ಸಂಪ್ರದಾಯಕ್ಕೆ ವಿರುದ್ಧವಾಗಿ ಮೂರ್ತಿ ಪೂಜೆಗೆ ಅವಕಾಶ ಕಲ್ಪಿಸುತ್ತಿರುವುದು ಪ್ರಶ್ನಾರ್ಹವಾಗಿದೆ.

ಈ ಹಿಂದೆ ಎಂದೂ ಗುಹೆಯ ಒಳಗಾಗಲಿ, ಅದರ ಪರಿಸರದಲ್ಲಾಗಲಿ ದತ್ತ ವಿಗ್ರಹ ಪೂಜೆಗೆ ಅವಕಾಶ ನೀಡಿರಲಿಲ್ಲ. ಈ ಸಲ ಗುಹೆಯಲ್ಲಿ ಪಾದುಕೆಗಳು ಇಲ್ಲದಿರುವುದನ್ನು ನೆಪಮಾಡಿಕೊಂಡು ಗುಹೆಯ ಹೊರ ಆವರಣದಲ್ಲಿ ಮೂರ್ತಿ ಪೂಜೆಗೆ ಅವಕಾಶ ಮಾಡಿಕೊಡುತ್ತಿರುವುದು ದೊಡ್ಡ ತಪ್ಪು. ಗುಹೆಯ ಹೊರಭಾಗ ಕುಸಿದಿರುವ ಹಿನ್ನೆಲೆಯಲ್ಲಿ, ಸುರಕ್ಷತಾ ದೃಷ್ಟಿಯಿಂದ ಅಲ್ಲಿದ್ದ ಪಾದುಕೆಗಳನ್ನು ಜಿಲ್ಲಾ ಖಜಾನೆಗೆ ಒಯ್ದು ಇಡಲಾಗಿದೆ. ದತ್ತ ಜಯಂತಿ ನಿಮಿತ್ತ ಪಾದುಕೆಗಳಿಗೆ ಗೌರವ ಸಲ್ಲಿಸಲು ಜಿಲ್ಲಾ ಖಜಾನೆಯ ವಠಾರದಲ್ಲೇ ಅವಕಾಶ ಕಲ್ಪಿಸಿದ್ದರೆ ಸರಿಯಿತ್ತು. ಆದರೆ ಜಿಲ್ಲಾಡಳಿತ ಮೂರ್ತಿ ಪ್ರತಿಷ್ಠಾಪನೆ ಮತ್ತು ಮೂರ್ತಿ ಪೂಜೆಗೆ ಅವಕಾಶ ಮಾಡಿಕೊಡುವ ಮೂಲಕ ಅನಾಹುತಕ್ಕೆ ಆಹ್ವಾನ ನೀಡದಂತಾಗಿದೆ.

ವಿಶ್ವ ಹಿಂದು ಪರಿಷತ್, ಬಜರಂಗದಳ, ಶ್ರೀ ರಾಮ ಸೇನೆಯಂತಹ ಸಂಘಟನೆಗಳು ಎಷ್ಟು ವಿಶ್ವಾಸಾರ್ಹ ಸಂಘಟನೆಗಳೆಂಬುದು ಇಂದು ಇಡೀ ದೇಶಕ್ಕೆ ಯಾಕೆ, ಇಡೀ ವಿಶ್ವಕ್ಕೆ ಗೊತ್ತಾಗಿದೆ. ಬಾಬರಿ ಮಸೀದಿಯನ್ನು ನಾಶಮಾಡಲು ಬಿಡುವುದಿಲ್ಲ ಎಂದು ದೇಶದ ಸರ್ವೋಚ್ಚ ನ್ಯಾಯಾಲಯಕ್ಕೆ ವಚನ ಕೊಟ್ಟ ಇವರು ಅದನ್ನು ಹಾಡು ಹಗಲೇ ಧ್ವಂಸಗೊಳಿಸಿದ್ದನ್ನು ನೋಡಿದ್ದೇವೆ. ತಾತ್ಕಾಲಿಕವಾಗಿ ವಿಗ್ರಹ ಪ್ರತಿಷ್ಠಾಪಿಸಲು ಇಂತಹ ವಚನ ಭ್ರಷ್ಟರಿಗೆ ಅವಕಾಶ ಮಾಡಿಕೊಡುವುದು ಎಷ್ಟು ಅಪಾಯಕಾರಿ! ಬಾಬ್ರಿ ಮಸೀದಿ ಜಾಗದಲ್ಲಿ ಪ್ರತಿಷ್ಠಾಪಿಸಿದ ರಾಮನ ವಿಗ್ರಹಗಳಿಗೆ ಈಗ ಸರ್ಕಾರವೇ ರಕ್ಷಣಾ ವ್ಯವಸ್ಥೆ ಮಾಡುತ್ತಿರುವುದು ನಮ್ಮ ಕಣ್ಣ ಮುಂದೆ ಇಲ್ಲವೆ? ಈಗ ಹೊರ ಆವರಣದಲ್ಲಿ ಸ್ಥಾಪಿಸುವ ಮೂರ್ತಿಗಳು ಮುಂದೊಂದು ದಿನ ಗುಹೆಯ ಒಳಗೆ 'ಪಾದ ಬೆಳೆಸುವ' ಪವಾಡ ನಡೆಯಲಿಕ್ಕಿಲ್ಲ ಎಂದು ಹೇಳಲು ಸಾಧ್ಯವೆ ?.

ಕಳೆದ ಕೆಲವು ತಿಂಗಳುಗಳಿಂದ ರಾಜ್ಯದ ಧಾರ್ಮಿಕ ಅಲ್ಪಸಂಖ್ಯಾತರು ಬಜರಂಗಿಗಳ ಪುಂಡಾಟಿಕೆಯಿಂದ ತತ್ತರಿಸಿ ಹೋಗಿದ್ದಾರೆ. ಈಗಾಗಲೇ ಪ್ರಕ್ಷುಬ್ಧಗೊಂಡಿರುವ ವಾತಾವರಣದಲ್ಲಿ ಚಿಕ್ಕಮಂಗಳೂರು ಜಿಲ್ಲಾಡಳಿತದ ಈ ಕ್ರಮ ಉರಿಯುವ ಬೆಂಕಿಗೆ ತುಪ್ಪಸುರಿದಂತೆ. ರಾಜ್ಯದ ನೈಜ ಹಿತ ಬಯಸುವ ಎಲ್ಲರೂ ಇದನ್ನು ವಿರೋಧಿಸಬೇಕಾಗಿದೆ. ಸೂಫಿ ಸಂತರು, ಶರಣರು ಪ್ರತಿಪಾದಿಸಿದ ಸೌಹಾರ್ದ ಪರಂಪರೆಯನ್ನು ಎತ್ತಿಹಿಡಿಯಬೇಕಾಗಿದೆ.

'ಶಂಕಿತ'ರ ಬಗೆಗೆ ಇವರೇ ತೀರ್ಪಿತ್ತರೋ !!



ಎಸ್.ವೈ.ಗುರುಶಾಂತ್

ಇತ್ತೀಚೆಗೆ ಗುಜರಾತ್, ದೆಹಲಿ, ಕರ್ನಾಟಕಗಳಲ್ಲಿ ಸಂಭವಿಸಿದ ಬಾಂಬ್ ಸ್ಫೋಟಗಳಲ್ಲಿನ ಆರೋಪಿಗಳೆಂದು ಹಲವಾರು 'ಶಂಕಿತ' ಭಯೋತ್ಪಾದಕರನ್ನು ಬಂಧಿಸಲಾಗುತ್ತಿದೆ. ಇವರಲ್ಲಿ ಅನೇಕರಿಗೆ ಕರ್ನಾಟಕದ ನಂಟಿದೆ ಎಂಬುದೂ ಪ್ರಮುಖ ಸುದ್ದಿ. ದಕ್ಷಿಣ ಕನ್ನಡ, ಮಲೆನಾಡು, ಹುಬ್ಬಳ್ಳಿ, ಧಾರವಾಡ, ಬಾಗಲಕೋಟೆ, ವಿಜಾಪುರ, ಬೆಂಗಳೂರು ಹೀಗೆ ಭಯೋತ್ಪಾದಕರ ನೆಲೆಗಳು ಎಂದೂ ಗುರುತಿಸಲಾಗಿದೆ. ಈ ಬಂಧನಗಳು ಮತ್ತು 'ಸಿಕ್ಕಿದ್ದಾವೆ' ಎನ್ನಲಾದ ಶಸ್ತ್ರಗಳು ಇತ್ಯಾದಿ ಗಮನಿಸಿದರೆ ಕರ್ನಾಟಕ ಭಯೋತ್ಪಾದಕರ ನೆಲೆಯಾಗುತ್ತಿದೆ ಎಂಬ ಬಲವಾದ ಶಂಕೆ, ಅಷ್ಟೇ ಆತಂಕವೂ ಸೃಷ್ಟಿಯಾಗುತ್ತಿದೆ. ಭಯೋತ್ಪಾದನೆಯ ಚಟುವಟಿಕೆಗಳನ್ನು ಮಟ್ಟ ಹಾಕಲು ಬೆಳೆಯದಂತೆ ತಡೆಯಲು ಅಗತ್ಯವಾದ ನಿಷ್ಠುರವಾದ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದರಲ್ಲಿ ಯಾರಿಗೂ ಎರಡು ಮಾತುಗಳಿಲ್ಲ. ಏನೋ ಇಂತಹ ಸಂದರ್ಭದಲ್ಲೋ, ಅಥವಾ ಸ್ಫೋಟಗಳು ಸಂಭವಿಸಿದಾಗಲೋ ಇಲಾಖೆಗಳು 'ಚುರುಕಾಗಿ' ಕಾರ್ಯನಿರ್ವಹಿಸಿ ಮತ್ತೆ ಯಥಾ ರೀತಿಯ ದೈನಂದಿನ ಕೆಲಸಗಳಿಗೆ ತೊಡಗುವುದು ಸಾಧಾರಣ ರೂಢಿಯಾಗಿದೆ. ಇದರ ಬದಲು ಒಂದು



ಬಾಬಾಬುಡನ್ ಗಿರಿಯಲ್ಲಿ ಭಜರಂಗಿಗಳ ಸಾಲು

ವ್ಯವಸ್ಥಿತವಾದ ಕಾರ್ಯನಿರ್ವಹಣೆ, ಅಗತ್ಯ ಸಿಬ್ಬಂದಿ, ತಾಂತ್ರಿಕ ಪರಿಕರಗಳು ಅತ್ಯಗತ್ಯ. ಇದರೊಟ್ಟಿಗೆ ಭಯೋತ್ಪಾದನೆಯ ಹುಟ್ಟಿಗೆ ಕಾರಣವಾಗುವ, ಅಂತಹದ್ದರತ್ತ ಯುವಕರು - ಮುಂತಾದವರು ಸೆಳೆಯದಂತೆ ತಡೆಯುವುದು ಮತ್ತು ಅಂತಹ ವಾತಾವರಣ, ಸೌಹಾರ್ದತೆ, ಸಮನ್ವಯ ಬೆಸೆಯುವುದೂ ಅಗತ್ಯ.

ಇಂದು ಪೊಲೀಸರು ವಿಚಾರಣೆಗೆಂದು ಬಂಧಿಸುತ್ತಿರುವ ಬಹುತೇಕರು ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯಕ್ಕೆ ಸೇರಿದವರು. 'ಹಿಂದುತ್ವ'ದ ಕೋಮುವಾದಿ ಫ್ಯಾಸಿಸ್ಟರ ಧಾಳಿಗಳಿಗೆ (ಬಾಬ್ರಿಮಸೀದಿ ನಾಶ, ಗುಜರಾತ್ ಹತ್ಯಾಕಾಂಡಗಳು ಇತ್ಯಾದಿ) ಪ್ರತೀಕಾರವಾಗಿ ಭಯೋತ್ಪಾದನೆಯ ಧಾಳಿಗಳನ್ನು ಆಯೋಜಿಸಲಾಗುತ್ತಿದೆ ಎಂಬುದು ಅವರ ವಾದ. ಅಂದರೆ ಅಲ್ಪಸಂಖ್ಯಾತರ ಮೇಲಿನ ದಾಳಿಗಳಿಂದ ಅಲ್ಪಸಂಖ್ಯಾತರಲ್ಲಿ ಮನೆ ಮಾಡಿರುವ ಆತಂಕ, ಹತಾಶೆಗಳನ್ನು ಮೂಲಭೂತವಾದಿ ಸಂಘಟನೆಗಳು, ಭಯೋತ್ಪಾದಕ ಗುಂಪುಗಳು (ಜೆಹಾದಿ, ಇಂಡಿಯನ್ ಮುಜಾಹಿದ್ದೀನ್...) ಬಳಸುತ್ತಿವೆ. ಇಂತಹ ಗುಂಪುಗಳು ಭಯೋತ್ಪಾದನೆಯಂತಹ ಕೃತ್ಯ ಎಸಗಲು ಬೇಕಾದ ಸನ್ನಿವೇಶವನ್ನು ಸಂಘ ಪರಿವಾರದ ಬಜರಂಗದಳ, ವಿ.ಹಿ.ಪ., ಶ್ರೀರಾಮಸೇನೆ ಮುಂತಾದವುಗಳು ಪೂರ್ವ ಪೀಠಿಕೆಯಾಗಿ ನಿರ್ಮಿಸಿ, ಪ್ರಚೋದಿಸುತ್ತವೆ. ಇದು ಸಹ ಭಯೋತ್ಪಾದನೆಯ ಕೃತ್ಯಗಳು. ಆದರೆ ಇವರಿಗೆ ರಾಷ್ಟ್ರಪ್ರೇಮ, ರಾಷ್ಟ್ರಭಕ್ತಿ, ರಾಷ್ಟ್ರೀಯತೆ ಮತ್ತು ಬಹುಸಂಖ್ಯಾತರ ಧರ್ಮ ಎಂದೆಲ್ಲಾ ರಕ್ಷಾ ಕವಚವಿದೆ. ಧರ್ಮರಕ್ಷಣೆಯ ಹೊದಿಕೆಯಲ್ಲಿ ಯಾವುದೇ ಧರ್ಮದ ಅನುಯಾಯಿಗಳೆಂದು ಹೇಳಿಕೊಳ್ಳುವವರು ಇಂತಹ ಕೃತ್ಯ ಎಸಗಿದರೆ ಅದು ಖಂಡನೀಯ. ಆದರೆ ಇಂತಹ ಎಚ್ಚರ ಬಹುಜನ ಸಮುದಾಯದಲ್ಲಿ ಮೂಡದಿರುವುದು ತಾತ್ಕಾಲಿಕವಾಗಿ ಬಜರಂಗದಳದಂತಹ 'ಭಯೋತ್ಪಾದನೆ' ಮಾಡುವವರಿಗೆ ರಕ್ಷಣೆ ಒದಗಿಸಿದೆ.

ಹೀಗಿರುವಾಗಲೇ ಈಗ ಬಂಧಿಸಲಾಗಿರುವ ಶಂಕಿತ ಭಯೋತ್ಪಾದಕರ ಪೂರ್ವಪರ, ಕೃತ್ಯಗಳು ಇತ್ಯಾದಿಗಳ ಬಗ್ಗೆ ಆಳವಾದ ತನಿಖೆ ನಡೆಯಬೇಕು. ಅದು ನಿಷ್ಪಕ್ಷಪಾತದಿಂದ ಕೂಡಿರಬೇಕು. ನಿಷ್ಠುರವಾಗಿಯೂ ಇರಬೇಕು. ಇದೇ ವೇಳೆ ಇನ್ನೊಂದು ಸಂಗತಿಯನ್ನು ಗಮನಿಸದೇ ಇರಲೂ ಸಾಧ್ಯವಿಲ್ಲ. ಅದೆಂದರೆ ಈಗ ಬಂಧಿತರಾಗಿರುವವರು ವಿಚಾರಣೆಗಾಗಿ ವಶಕ್ಕೆ ತೆಗೆದುಕೊಳ್ಳಲಾದವರು. ಅವರು 'ಶಂಕಿತ'ರೇ ವಿನಃ ಭಯೋತ್ಪಾದಕರೇ, ಅಲ್ಲವೇ ಎಂದು ನಿರ್ಧರಿತವಾಗಬೇಕಾದವರು - ಅದು ಇನ್ನೂ ಆಗಿಲ್ಲದವರು. ಆದರೆ ಪ್ರಜಾಪ್ರಭುತ್ವದ ಆಧಾರ ಸ್ತಂಭವೆಂದೇ, ರಕ್ಷಣೆಯ ಕೋಟೆಗಳೆಂದೇ ಕರೆಯಲಾಗುವ ಮಾಧ್ಯಮಗಳು ನ್ಯಾಯಾಲಯದ ವಿಚಾರಣೆ ಆರಂಭವಾಗುವ ಮೊದಲೇ ಅವರನ್ನು ಭಯೋತ್ಪಾದಕರೆಂದು ನಿರ್ಧರಿಸಿ ನೇಣಿನ ಕಂಬದ ಹತ್ತಿರಕ್ಕೆ ಕೊಂಡೊಯ್ದು ಬಿಟ್ಟಿರುತ್ತವೆ. ಇಂತಹವುಗಳ ಜೊತೆಗೆ ಅಥವಾ ಮುಂಚೂಣಿಯಲ್ಲಿರುವ ಸಂಘ ಪರಿವಾರದ ಪಡೆ ಇಡೀ ಅಲ್ಪಸಂಖ್ಯಾತ ಸಮುದಾಯದ ಬಗ್ಗೆಯೇ ಪೂರ್ವಗ್ರಹಪೀಡಿತ ಅನುಮಾನಗಳನ್ನು ಪ್ರಬಲವಾಗಿ ವಾದಿಸಿ, ನಂಬಿಸಿ ಬಿಟ್ಟಿರುತ್ತವೆ. ಎಲ್ಲಾದರೂ ಪಟಾಕಿ ಸಿಡಿದರೂ ಅದಕ್ಕೆ ಮುಸ್ಲಿಂ ಭಯೋತ್ಪಾದಕರು ಕಾರಣ ಇರಬಹುದೇ ಎಂದು ಅನುಮಾನಿಸುವಂತೆ ಮಾಡಿರುತ್ತವೆ. "ಹೌದಲ್ಲ ಭಯೋತ್ಪಾದಕರೆಂದು ಬಂಧಿಸಲ್ಪಟ್ಟವರೆಲ್ಲಾ ಮುಸ್ಲಿಮರೇ. ಹಾಗಾಗಿ ಮುಸ್ಲಿಮರೇ ಭಯೋತ್ಪಾದಕರು ಎಂಬುದರಲ್ಲಿ ಏನು ತಪ್ಪಿದೆ" ಎಂದೆಲ್ಲಾ ಸಾಮಾನ್ಯರಿಗೆ ಅನ್ನಿಸುತ್ತಿದೆ. ಆದರೆ ಶಸ್ತ್ರ ತರಬೇತಿ, ಬಾಂಬ್ ತಯಾರಿಕೆ, ಆತ್ಮಹತ್ಯಾ ದಳ ರಚನೆಯ ಬಗ್ಗೆ ಸಂಘ ಪರಿವಾರ ಎಷ್ಟೇ ಬಹಿರಂಗವಾಗಿ ಘೋಷಿಸಿಕೊಂಡರೂ ಅವರು ಭಯೋತ್ಪಾದಕರು ಎನ್ನಿಸಿಕೊಳ್ಳುತ್ತಿಲ್ಲ. ಇದು ಮಾಧ್ಯಮಗಳ ಲೆಕ್ಕಾಚಾರದ ಪಾತ್ರವೂ ಇಲ್ಲಿದೆ.

ಪುಟ 5 ಕ್ಕೆ

ರೋಣ ತಾಲ್ಲೂಕಿನಲ್ಲಿ ಫಲಭರಿತ ಹೋರಾಟ

ಅನ್ಯಾಯದ ವಿರುದ್ಧ ತಮ್ಮ ಪ್ರಜಾಸತ್ತಾತ್ಮಕ ಬೇಡಿಕೆಗಳಿಗೋಸ್ಕರ ರೋಣ ತಾಲ್ಲೂಕಿನ ಬೆಳವಣಿಕೆ ಗ್ರಾಮಸ್ಥರು ಕಳೆದ 10-15 ವರ್ಷಗಳಿಂದ ಸಂಘಟಿತ ಹೋರಾಟ ಮಾಡುತ್ತಲೇ ಬಂದಿದ್ದಾರೆ. ಒಂದಿಷ್ಟು ಬೇಡಿಕೆಗಳ ಸಂಬಂಧ ನ್ಯಾಯ ಪಡೆದರೆ, ಇನ್ನೂ ಬಹಳಷ್ಟು ಕೆಲಸಗಳಿಗೆ ಹೆಚ್ಚು ಸಂಘಟಿತ ಐಕ್ಯಹೋರಾಟದ ಅವಶ್ಯಕತೆಯನ್ನು ಮನಗಾಣುತ್ತಿದ್ದಾರೆ.

ವಿದ್ಯಾರ್ಥಿ ದೆಸೆಯಿಂದಲೇ ಸಂಘಟಿತ ಹೋರಾಟಕ್ಕಿಳಿದ, ಅಗಲಿದ ಸಂಗಾತಿ ಅಬ್ದುಲ್ ರಜಾಕ್‌ಮುಲ್ಲಾ, ತನ್ನ ಸ್ವಂತ ಗ್ರಾಮ ಬೆಳವಣಿಕೆಯಲ್ಲೂ ಪ್ರಗತಿಪರ ಚಳುವಳಿಯ ಹುಟ್ಟುಹಾಕಿದರು. ಅಲ್ಲಿನ ಯುವಜನರ ಮನಸಿನಲ್ಲಿ ಜಾತ್ಯಾತೀತ- ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಬಿತ್ತಿ ಬೆಳೆಸಿ ಅಕಾಲಿಕಾವಾಗಿ ಅಗಲಿ ಇದೇ ಅಕ್ಟೋಬರ್ 17ಕ್ಕೆ ಮೂರು ವರ್ಷಗಳಾದವು. ಸಂಗಾತಿಮುಲ್ಲಾನ ಆದರ್ಶ ಪರಂಪರೆಯನ್ನು ಡಿ.ವೈ.ಎಫ್.ಐ ಸಂಗಾತಿಗಳು ಮತ್ತು ಗ್ರಾಮದ ರೈತಾಪಿ ವರ್ಗ ಮುಂದುವರೆಸಿ ಹೋರಾಟಗಾರ ಮುಲ್ಲಾನನ್ನು ಜೀವಂತವಾಗಿರಿಸಿದ್ದಾರೆ.

ಈ ಭಾಗದ ಗ್ರಾಮಗಳಲ್ಲಿ ಇವತ್ತಿಗೂ ಅಗತ್ಯ ಮೂಲಭೂತ ಸೌಕರ್ಯಗಳನ್ನು ಪೂರೈಸಲಾಗಿಲ್ಲ. ಸರ್ಕಾರದ ಯೋಜನೆಗಳು ಜನರಿಗೆ ಇನ್ನೂ ತಲುಪುತ್ತಲೇ ಇಲ್ಲ. ಎಲ್ಲದಕ್ಕೂ ಹೋರಾಟ ಮಾಡಿಯೇ ಪಡೆದುಕೊಳ್ಳುವಂಥ ಪರಿಸ್ಥಿತಿಯನ್ನು ರಾಜಕೀಯ, ಸಾಮಾಜಿಕ ಪಟ್ಟಭದ್ರರು ಹಾಗೂ ಕೋಮುವಾದಿ ಶಕ್ತಿಗಳು ನಿರ್ಮಾಣ ಮಾಡಿದ್ದಾರೆ. ಇದೇ ಶಕ್ತಿಗಳ ಜನ ಚಳಿವಳಿಗಳನ್ನು ಮುರಿಯುವ ಕಾರ್ಯವನ್ನೇ ಮುಖ್ಯವಾಗಿಸಿಕೊಂಡು ಜನರನ್ನು ಜಾತಿ-ಧರ್ಮದ ಹೆಸರಿನಲ್ಲಿ ಒಡೆಯಲು ಪ್ರಯತ್ನಿಸುತ್ತಲೇ ಇವೆ. ಪ್ರಜ್ಞಾವಂತ ಯುವಕರು, ಗ್ರಾಮಸ್ಥರು ಇದಕ್ಕೆ ಪ್ರತಿರೋಧ ಒಡ್ಡುತ್ತಲೇ, ಸೌಹಾರ್ದತೆಯನ್ನು ಜನರ ಮಧ್ಯೆ ಬಿತ್ತಿದ್ದಾರೆ.

ಕೇಂದ್ರ ಸರ್ಕಾರವು ಎಡ, ಪ್ರಜಾಸತ್ತಾತ್ಮಕ ಸಂಘಟನೆಗಳ ಒತ್ತಾಯ, ಹೋರಾಟದ ಫಲವಾಗಿ ಜಾರಿಗೆ ತಂದಿರುವ ಮಹತ್ವಾಕಾಂಕ್ಷಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಜಿಲ್ಲೆಯಲ್ಲಿ ಏಪ್ರಿಲ್ 1ರಿಂದಲೇ ಜಾರಿಯ ಆದೇಶ ಹೊರಡಿಸಲಾಗಿದೆಯಾದರೂ, 6-7 ತಿಂಗಳು ಗತಿಸಿದರೂ ಜಿಲ್ಲೆಯ ಬಹುತೇಕ ಗ್ರಾಮಗಳಲ್ಲಿ ಅಧಿಕಾರಿಗಳ, ರಾಜಕಾರಣಿಗಳ ಅನಾದರಕ್ಕೆ ಈಡಾಗಿ ಯೋಜನೆ ಆರಂಭಿಸದೇ ದುಡಿಯುವ ಜನರ ಉದರಕ್ಕೆ ಒದೆ ನೀಡಲಾಗುತ್ತಿದೆ.



ಡಿವೈಎಫ್‌ಐ ನೇತೃತ್ವದ ಅಹೋರಾತ್ರಿ ಧರಣಿ

ಡಿ.ವೈ.ಎಫ್.ಐ. ನೇತೃತ್ವದಲ್ಲಿ ನಡೆದ ಹೋರಾಟದ ಫಲವಾಗಿ ಬೆಳವಣಿಕೆ, ಬೆಣಸಮಟ್ಟಿ ಮುಂತಾದ ಹಲವಾರು ಗ್ರಾಮಗಳಲ್ಲಿ ಉದ್ಯೋಗ ಖಾತ್ರಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆಯಾದರು, ನಿರಂತರ, ಸಮರ್ಪಕವಾಗಿ ಯೋಜನೆಯನ್ನು ಜಾರಿಗೊಳಿಸಲಾಗುತ್ತಿಲ್ಲ.

ಬೆಳವಣಿಕೆ ಗ್ರಾಮಸ್ಥರು ಗ್ರಾಮದ ಕುಡಿಯುವ ನೀರಿನ ಅಭಾವ, ಇಂದಿರಾ ಆವಾಸ-ಆಶ್ರಯ ಮನೆಗಳ ಹಂಚಿಕೆಯಲ್ಲಾದ ಅನ್ಯಾಯ- ತಾರತಮ್ಯ, ಉದ್ಯೋಗ ಖಾತ್ರಿ ಯೋಜನೆಯಲ್ಲಿ ದುಡಿವ ಕೂಲಿ ಕಾರ್ಮಿಕರಿಗೆ ತಿಂಗಳಾದರೂ ಕೂಲಿ ಹಣ ನೀಡದಿರುವುದು, ಸ್ಥಗಿತಗೊಳಿಸಲಾದ ಉದ್ಯೋಗ ಖಾತ್ರಿ ಯೋಜನೆಯನ್ನು ಪುನರಾರಂಭಿಸುವುದು ಸೇರಿದಂತೆ ಗ್ರಾಮದ ಮೂಲ ಸೌಕರ್ಯಗಳ ಪೂರೈಕೆಗಾಗಿ ಡಿ.ವೈ.ಎಫ್.ಐ. ನೇತೃತ್ವದಲ್ಲಿ, ಪ್ರಾಂತ ರೈತ ಸಂಘದ ಸಹಕಾರದಲ್ಲಿ ಬೆಳವಣಿಕೆ ಗ್ರಾಮ ಪಂಚಾಯತಿ ಎದರು ಧರಣಿ, ಪಂಚಾಯತಿಗೆ ಬೀಗ ಜಡೆದು ಹೋರಾಟ ಆರಂಭಿಸಲಾಯಿತು. ಅಧಿಕಾರಿಗಳು ಆಗಮಿಸಿ ಆಶ್ವಾಸನೆಯನ್ನು ನೀಡಿದರೇ ಹೊರತು, ಜನರಿಗೆ ನ್ಯಾಯ ದೊರಕಿಸಿಕೊಡಲು ಮುಂದಾಗಲೇ ಇಲ್ಲ.

ಮತ್ತೆ ಹೋರಾಟವನ್ನು ತಾಲೂಕಾ ಕೇಂದ್ರವಾದ ರೋಣ ತಾಲೂಕು ಪಂಚಾಯುತಿ ಕಛೇರಿ ಎದುರು ಗ್ರಾಮದ ಮಹಿಳೆಯರು, ಮಕ್ಕಳು, ರೈತ- ಕೂಲಿಕಾರರನ್ನೊಳಗೊಂಡ ನೂರಾರು ಜನ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿಯೇ ಬಿಟ್ಟರು. 24 ತಾಸುಗಳ ಧರಣಿ ಎಂದರಿತ ಅಧಿಕಾರಿಗಳು ವಿಚಲಿತರಾದರು. ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿ, ನರಗುಂದ ಶಾಸಕರಾದ ಸಿ.ಸಿ.ಪಾಟೀಲ್ ರೋಣ ತಾಲೂಕು ಶಾಸಕರಾದ ಕಳಕಪ್ಪ ಬಂಡಿ ಕುಮ್ಮಕ್ಕಿಗೆ ಒಳಗಾದ ತಾಲೂಕ ಪಂಚಾಯತಿ ಕಾರ್ಯನಿವಾಹಕ ಅಧಿಕಾರಿ ಗ್ರಾಮಸ್ತರ ಅಹವಾಲು ಕೇಳುವ ಬದಲು, ಹೋರಾಟ ಮುರಿಯಲು ಪ್ರಯತ್ನಪಟ್ಟರು. ಇದಕ್ಕಾಗಿ ತಾಲೂಕ ಸಿ.ಪಿ.ಐ.ಯನ್ನು ಛೂ ಬಿಟ್ಟು ರಾತ್ರಿ 10ಗಂಟೆ ಹೊತ್ತಿಗೆ ಪಂಚಾಯತಿ ಆವರಣದಿಂದ ಮಹಿಳೆಯರು-ಮಕ್ಕಳೆನ್ನದೇ ಎಲ್ಲಾ ಗ್ರಾಮಸ್ಥರನ್ನು ಹೆದರಿಸಿ, ಬೆದರಿಸಿ ಹೂರಹಾಕಲಾಯಿತು. ಇದಕ್ಕೆಲ್ಲ ಬಗ್ಗದ ಗ್ರಾಮಸ್ಥರು ಇಡೀ ರಾತ್ರಿ ಪಂಚಾಯತ್ ಎದುರಿನ ರಸ್ತೆಯಲ್ಲೇ ಮಲಗಿ ಹೋರಾಟದ ಕೆಚ್ಚು ತೋರಿಸಿದರು. ಬೆಳಗಾಗುತ್ತಲೇ ಮತ್ತೇ ಆವರಣ ಹೊಕ್ಕು ಕಛೇರಿ ಎದುರೇ ಧರಣಿ ಮುಂದುವರೆಸಿದರು. ಅಧಿಕಾರಿಗಳು, ಶಾಸಕರ ದೌರ್ಜನ್ಯ, ದಬ್ಬಾಳಿಕೆ ವಿರುದ್ಧ ಘೋಷಣೆ ಮುಂದುವರೆಸಿದರು.

ಹೋರಾಟಕ್ಕೆ ಮಣಿದವರಂತೆ ವರ್ತಿಸಿದ ತಾಲೂಕು ಪಂಚಾಯಿತಿಯ ಅಧಿಕಾರಿಗಳು, ಬೆಳವಣಿಕಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಹಾಗೂ ಕೆಲವು ಸದಸ್ಯರೊಂದಿಗೆ ಶಾಮೀಲಾಗಿ ಅಕ್ರಮ, ಅನ್ಯಾಯವೆಸಗಿದ, ಗ್ರಾಮಕ್ಕೆ ಮೂಲಭೂತ ಸೌಕರ್ಯ ಒದಗಿಸಲು ವಿಫಲವಾಗಿರುವ ಕಾರ್ಯದರ್ಶಿ ಬಿ.ಎಫ್. ಕಣವಿ ಅವರನ್ನು ಇಲಾಖಾ ವಿಚಾರಣೆ ಬಾಕಿ ಇರಿಸಿ ಸೇವೆಯಿಂದ ವಜಾ ಮಾಡಿ ಆದೇಶ ಹೂರಡಿಸಿದರು. ಉಳಿದಂತೆ ಗ್ರಾಮಕ್ಕೆ ಬಂದು ವಿಚಾರಣೆ ನಡೆಸಿ ಅನ್ಯಾಯ ಸರಿಪಡಿಸುವ, ಬೇಡಿಕೆ ಈಡೆರಿಸುವ ಭರವಸೆ ನೀಡಿದ ನಂತರ ಹೋರಾಟಕ್ಕೆ ತಾತ್ಕಾಲಿಕ ವಿರಾಮ ನೀಡಿ ತಮ್ಮ ಗ್ರಾಮಕ್ಕೆ ಗ್ರಾಮಸ್ಥರು ತೆರಳಿದ್ದಾರೆ.

ಬೆಳವಣಿಕೆ ಗ್ರಾಮದ ದಲಿತರು, ಬಡವರು, ಕೂಲಿ-ಕಾರ್ಮಿಕರಿಗೆ ಅನ್ಯಾಯವೆಸಗಿದ ಸ್ಥಳೀಯ ಗ್ರಾಮ ಪಂಚಾಯತ್ ಆಡಳಿತದ ವಿರುದ್ಧ, ಈ ಆಡಳಿತ ವರ್ಗದವರೊಂದಿಗೆ ಶಾಮೀಲಾದ ಮೇಲಧಿಕಾರಿಗಳ ವಿರುದ್ಧವೂ ಸೂಕ್ತ ರೀತಿಯ ತನಿಖೆಯಾಗಿ, ತಪ್ಪಿತಸ್ಥರಿಗೆ ಕಾನೂನು ರೀತಿಯ ಕ್ರಮವಾಗಬೇಕು. ಜನರಿಗೆ ನ್ಯಾಯ ದೂರಕಬೇಕೆಂದು ಡಿ.ವೈ.ಎಫ್.ಐ. ಮುಂಖಡರೂ, ಗ್ರಾಮ ಪಂಚಾಯಿತಿ ಸದಸ್ಯರಾದ ಬಸವರಾಜ ಮಂತೂರು, ಅಮ್ಮಾಜಾನ್, ರೋಣದ ಪಂಚಾಯತ ಒಳಗು, ಹೊರಗು ಜನರ ಮಧ್ಯೆಯೂ ಹೋರಾಟ ಮಾಡುತ್ತಲೇ ಬಂದಿದ್ದರೂ, ನಮಗೆ ಬಹುಮತವಿದೆ ಎಂಬ ಉದ್ಧಟತನ ಪ್ರದರ್ಶಿಸುತ್ತ, ಅನ್ಯಾಯವೆಸಗುತ್ತಲೇ ಇರುವ ಪಂಚಾಯತ ಆಡಳಿತವನ್ನು, ಇದಕ್ಕೆ ಬೆಂಬಲವಾಗಿ ನಿಂತಿರುವ ಶಾಸಕರಿಗೆ ಪಾಠ ಕಲಿಸಲು ಗ್ರಾಮಸ್ಥರು ಸಜ್ಜಾಗುತ್ತಿದ್ದಾರೆ.

- ರವೀಂದ್ರ ಹೊನವಾಡ

ನಗುವುದೋ ಅಳುವುದೋ ನೀವೇ ಹೇಳಿ.....

ಕೆಡಗೂ ಅಣು ಒಪ್ಪಂದದ 'ವಿಲ್'ಗೆ ಹೆಬ್ಬೆಟ್ಟು ಬಿದ್ದಿದೆ. ನಮ್ಮ ಸನ್ಮಾನ್ಯ ಪ್ರಧಾನಿ ಮನಮೋಹನ ಸರ್ದಾರ್ಜಿಯವರ ಆತ್ಮಕ್ಕೆ ಶಾಂತಿ ಸಿಕ್ಕಿರಬಹುದು! ಅಮೆರಿಕದ ಆರ್ಥಿಕ ಭೂಕಂಪಕ್ಕೆ ಇಲ್ಲಿನ ಎಲ್ಲವೂ ರಟ್ಟಿನ ಕಟ್ಟಡಗಳಂತೆ ಉರುಳುತ್ತಿರುವುದನ್ನು ಕಣ್ಣಾರೆ ಕಾಣುತ್ತಿದ್ದರೂ, ಇನ್ನೂ ಅದೇ ಉರುಳಿಗೆ ಕೊರಳೊಡ್ಡುವ ಮಾತನ್ನೇ ಆಡುತ್ತಿದ್ದಾರೆ. ಇವರನ್ನು ಕಂಡು ನಗುವುದೋ ಅಳುವುದೋ ನೀವೇ ಹೇಳಿ. ಕೋತಿ ತಾನು ಕೆಡುವುದಲ್ಲದೆ ವನವನ್ನೆಲ್ಲ ಕೆಡಿಸಿತು ಎಂಬಂತೆ, ಅಮೆರಿಕ ತನ್ನ ಜಗಹಾಳು ಆರ್ಥಿಕ ನೀತಿಯಿಂದ ತಾನು ದಿವಾಳಿ ಆಗುತ್ತಿರುವುದಲ್ಲದೆ, ಅದನ್ನು ನಂಬಿದ ವಿಶ್ವದ ಅನೇಕ ದೇಶದ ಅರ್ಥ ವ್ಯವಸ್ಥೆಗಳೂ ದಿವಾಳಿ ಏಳುತ್ತಿವೆ.

• • •

ಈ ಬಾರಿಯ ದಸರಾ ವಿಶೇಷ ಅಂದರೆ ಎಲ್ಲೆಡೆ ದಸರಾ ಉತ್ಸವವನ್ನು ಶೋಭಾಯಾತ್ರೆ ಎಂದು ಕರೆಯಲ್ಪಡುತ್ತಿರುವುದು. ಮೈಸೂರಿನಲ್ಲಂತೂ ಅಕ್ಷರಶಃ 'ಶೋಭಾ ಯಾತ್ರೆ'ಯೇ ಆಗಿತ್ತು. ಪಟ್ಟದ ಗೊಂಬೆಗಳಂತೆ ಮುಖ್ಯಮಂತ್ರಿ ಹಾಗೂ ಇವರ ಜೋಡಿ ವಿಜೃಂಭಿಸುತ್ತಿದೆ. ಇತರ ಮುಖ್ಯವಲ್ಲದ ಮಂತ್ರಿಗಳು ಕೈ ಕೈ ಹಿಸುಕಿಕೊಳ್ಳುತ್ತಿರುವ ಕೀಲು ಗೊಂಬೆಗಳಂತೆ. ಒಟ್ಟಿನಲ್ಲಿ ಬಾಂಬಿನ ಧಾಳಿ, ಚರ್ಚಿನ ಮೇಲೆ ಧಾಳಿ ಇಲ್ಲದೇ ನವರಾತ್ರಿಗಳನ್ನು ಕಳೆದದ್ದೇ ಸಮಾಧಾನ.

ಶ್ರೀ

• • •

ಇನ್ನೇನು ನ್ಯಾನೋ ಕಾರು ಹಿಡ್ಕಂಡು ಬಂದೇ ಬಿಡ್ತೇವಿ ಅಂತ ಕುಣಿದಾಡುತ್ತಿದ್ದೋರು ಅದು ಗುಜರಾತಿಗೆ ಹೋಗುತ್ತಿದ್ದಂತೆ ಟುಸ್ ಆಗಿ ಕೂತಿದ್ದಾರೆ. ಅತ್ತ ಗುಜರಾತ್ ಮುಖ್ಯಮಂತ್ರಿ ಒಪ್ಪಂದಕ್ಕೆ ಸಹಿ ಹಾಕುತ್ತಿರುವಾಗ ಇತ್ತ ನಮ್ಮ ಮುಖ್ಯ ಮಂತ್ರಿಗಳು ಯಾವ ಕಾರಣಕ್ಕೂ ನ್ಯಾನೋ ಕೈ ತಪ್ಪದಂತೆ ನೋಡಿಕೊಳ್ಳುತ್ತೇವೆ ಎಂದು ಹೇಳಿಕೆ ಕೊಡುತ್ತಿದ್ದರು. ಗುಜರಾತಲ್ಲದೇ ಬೇರೆಲ್ಲಿಗಾದರೂ ಹೋಗಿದ್ದರೆ ವಿರೋಧ ಪಕ್ಷದ ಕೈವಾಡ ಅಂತಲೂ ಹೇಳಿಕೆ ಕೊಡುತ್ತಿದ್ದರೇನೋ.., ಇಪ್ಪತ್ತ ನಾಲ್ಕು ಗಂಟೆ ವಿದ್ಯುತ್ ಕೊಡ್ತೀವಿ ಅಂತ ಹೇಳಿ ನಮ್ಮ ರೈತರಿಗೆ ಯಾಮಾರಿಸಬಹುದು. ಪಾಪ ಅವರು ವಾರಕ್ಕೆ ಇಪ್ಪತ್ತ ನಾಲ್ಕು ಗಂಟೆನೋ, ತಿಂಗಳಿಗೆ ಇಪ್ಪತ್ತ ನಾಲ್ಕು ಗಂಟೆನೋ ಅಂತ ಕೇಳಲ್ಲ. ಆದ್ರೆ ಆ ಟಾಟಾ ಬಿರ್ಲಾಗಳನ್ನ ನಮ್ಮ ರೈತರಿಗೆ ಯಾಮಾರಿಸುವ ಹಾಗೆ ಯಾಮಾರಿಸಲಾದೀತೆ?

• • •

ಸಿದ್ದುವನ್ನು ಮುದ್ದು ಮಾಡುವ ಅವರ ಬೆಂಬಲಿಗರು, ಸ್ಥಾನಾ- ಮಾನಾ, ಸ್ಥಾನಾ-ಮಾನಾ ಅಂತ ಪರದಾಡುತ್ತಿದ್ದಾರೆ. ತಮ್ಮ ಸಿದ್ದುಗೆ ಏನಾದ್ರೂ ಒಂದು ಸ್ಥಾನ- ಮಾನ ಕೊಡುಸ್ಲೇಬೇಕೆಂಬೋ ಅವಾಂತರದಲ್ಲಿ, ಮೊದ್ದು ಬೆಂಬಲಿಗನೊಬ್ಬ, 'ಅಣ್ಣಾವ್ರೇ, ಜಾತ್ಯಾತೀತ ಜನತಾ ದಳದಲ್ಲಿ ಅಧ್ಯಕ್ಷ ಸ್ಥಾನ ಖಾಲಿಯಾಯ್ತಂತೆ ಅದನ್ನಾದ್ರೂ ಕೊಡ್ರೀ ಅಂತ ಸೋನಿ ಗಾಂಧಿನ ಕೇಳನೇಣ್ರೀ?' ಅಂದನಂತೆ. ಅದಕ್ಕೆ ಇನ್ನೊಬ್ಬ ಪೆದ್ದು , 'ಲೇ ದಡ್ಡ, ಜಾತ್ಯತೀತ ಜನತಾದಳದ ಅಧ್ಯಕ್ಷ ಸ್ಥಾನನ ಸೋನಿಗಾಂಧಿನ ಯಾಕ್ಲ ಕೇಳಬೇಕು, ದ್ಯಾವೇ ಗೌಡ್ರುನಲ್ವೇ ಕೇಳಬೇಕಾಗಿದ್ದು' ಅಂದನಂತೆ. ಅದಕ್ಕೆ ಮೊದ್ದು 'ಅಲ್ಲಲೇ, ಪೆದ್ದು, ದೇಸಪಾಂಡೆನ ಕಾಂಗ್ರೆಸ್ ಸುಮ್ಮನೇ ಅಧ್ಯಕ್ಷ ಸ್ಥಾನಕ್ಕೆ ದ್ಯಾವೇಗೌಡ್ರೇ ನೇಮಕ ಮಾಡಿದ್ದು ಅಂತ ಜನ ಮಾತಾಡ್ಕತಾವ್ರೆ, ಅದ್ಕೇ ಇಂಗಂದೆ' ಅಂದನಂತೆ.

ಹಿಂದೂ ಮತಾಂಧರಿಗೆ ಎಚ್ಚರಿಕೆ

ಕೋಲಾರದಲ್ಲಿ ಎಡ, ದಲಿತ, ಪ್ರಗತಿಪರರ ರ್‍ಯಾಲಿ

ಕಳೆದ ಆಗಸ್ಟ್‌ನಲ್ಲಿ ಒರಿಸ್ಸಾದ ಕಂದಮಾಲ್‌ನಲ್ಲಿ ವಿಹೆಚ್‌ಪಿ ಮುಖಂಡ ಲಕ್ಷ್ಮಣಾನಂದ ಸ್ವಾಮಿ ಹತ್ಯೆಗೆ ಕಾರಣ ತಿಳಿಯಲು ಸಾಧ್ಯವಾಗಿಲ್ಲ. ಆದರೆ ಈ ಘಟನೆಗೆ ಪ್ರತೀಕಾರವಾಗಿ ಹಿಂದೂ ಮೂಲಭೂತವಾದಿಗಳು ದೇಶಾದ್ಯಂತ ನೂರಾರು ಚರ್ಚ್‌ಗಳನ್ನು ಧ್ವಂಸಗೊಳಿಸಿದ್ದಾರೆ. ಸಾವಿರಾರು ಕ್ರೈಸ್ತ ಅಲ್ಪಸಂಖ್ಯಾತರ ಮೇಲೆ ಹಲ್ಲೆ ನಡೆಸಿದ್ದಾರೆ. 22 ವರ್ಷದ ಮಹಿಳೆಯನ್ನು ಸಜೀವ ದಹನ ಮಾಡಿದ್ದಾರೆ. ಕ್ರೈಸ್ತ ಸನ್ಯಾಸಿನಿಯರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ ಈ ವಿಕೃತ 'ಧರ್ಮರಕ್ಷಕ'ರು ಆಕೆಯನ್ನು ಬೆತ್ತಲೆಗೊಳಿಸಿ ಮೆರವಣಿಗೆ ನಡೆಸಿರುವ ಅಮಾನವೀಯ ಘಟನೆಗಳು ನಮ್ಮ ಕಣ್ಣೆದುರಿಗೆ ನಡೆದಿವೆ. ಆಯಾ ಪ್ರದೇಶಗಳಲ್ಲಿ ಪೊಲೀಸ್ ಮತ್ತು ಜಿಲ್ಲಾ ಆಡಳಿತಗಳು ನೋಡಿಯೂ ಕಾಣದಂತೆ ವರ್ತಿಸಿವೆ. ಕೆಲವು ಘಟನೆಗಳಲ್ಲಿ ಇನ್ನೊಂದು ಹೆಜ್ಜೆ ಮುಂದೆ ಹೋಗಿರುವ ಅಧಿಕಾರಿಗಳು ಘಟನೆಗಳಿಗೆ ಬೇರೆ ಬೇರೆ ರೂಪ ನೀಡಿ ಹತ್ತಿಕ್ಕುವ ಪ್ರಯತ್ನಗಳನ್ನು ನಡೆಸಿದ್ದಾರೆ.

ಕೋಲಾರದಲ್ಲಿ ಸೈಂಟ್ ಮೇರಿ ಚರ್ಚ್ ಮೇಲೆ ದಾಳಿ ನಡೆಸಿದ ಧರ್ಮಾಂಧರು ಮೇರಿಯಮ್ಮನ ಪ್ರತಿಮೆಯನ್ನು ಭಗ್ನಗೊಳಿಸಿದರು. ಕೋಲಾರ ಜಿಲ್ಲೆಯಲ್ಲಿ ಹಿಂದೆಂದೂ ಇಂತಹ ಘಟನೆ ನಡೆದಿರಲಿಲ್ಲ. ಪ್ರಗತಿಪರ ಚಳುವಳಿಗಳು, ಎಡಪಂಥೀಯ ಮತ್ತು ದಲಿತ ಚಳುವಳಿಗಳನ್ನು ತುಂಬಿಕೊಂಡು ಸೌಹಾರ್ದತೆಯೊಂದಿಗೆ ಇತಿಹಾಸ ಸವೆಸಿದ್ದ ಕೋಲಾರ ಜಿಲ್ಲೆಯಲ್ಲಿ ಈ ಘಟನೆ ಕ್ಷಣಕಾಲ ಕಂಪನ ಮೂಡಿಸಿತು. ಎಚ್ಚೆತ್ತುಕೊಂಡ ಎಡಪಕ್ಷಗಳು, ವಿದ್ಯಾರ್ಥಿಯುವಜನ ಸಂಘಟನೆಗಳು, ದಲಿತ ಮತ್ತು ಅಲ್ಪಸಂಖ್ಯಾತ ಸಂಘಟನೆಗಳು ಸೇರಿದಂತೆ ಹಲವಾರು ಪ್ರಗತಿಪರ ಸಂಘಟನೆಗಳು ಸೆಪ್ಟೆಂಬರ್ 29 ರಂದು ನಗರದಲ್ಲಿ ಬೃಹತ್ ಮೆರವಣಿಗೆ ನಡೆಸಿ ಧರ್ಮಾಂಧ ಮೂಲಭೂತವಾದಿಗಳ ಅಟ್ಟಹಾಸಕ್ಕೆ ಅವಕಾಶ ನೀಡುವುದಿಲ್ಲ ಎಂಬ ಗಂಭೀರ ಎಚ್ಚರಿಕೆ ನೀಡಿದವು. ಹಿಂದೂ ಧರ್ಮದ ಆಂತರ್ಯದಲ್ಲಿ ಅಡಗಿರುವ ಶೋಷಣೆ, ಅಸಮಾನತೆ, ಅಸ್ಪೃಶ್ಯತೆಯ ನಿವಾರಣೆಗೆ ಧರ್ಮರಕ್ಷಕರೆಂದು ಹೇಳಿಕೊಳ್ಳುವವರು ಪ್ರಾಮಾಣಿಕ ಪ್ರಯತ್ನ ನಡೆಸಬೇಕು, ಅದರ ಹೊರತಾಗಿ ಮತಾಂತರದ ನೆಪದಲ್ಲಿ ದಾಳಿ



ನಡೆಸುವುದಲ್ಲ ಎಂದು ಎಚ್ಚರಿಕೆ ನೀಡಿದರು. ವ್ಯಕ್ತಿಯೊಬ್ಬ ಅವನಿಚ್ಛೆಗೆ ಅನುಗುಣವಾಗಿ ಮತ ಧರ್ಮವನ್ನು ಸ್ವೀಕರಿಸುತ್ತಾನೆ. ಅದು ಸಂವಿಧಾನಾತ್ಮಕ ಹಕ್ಕು ಸಹ. ಅದನ್ನು ಪ್ರಶ್ನಿಸುವ ಹಕ್ಕು ಯಾರಿಗೂ ಇಲ್ಲ ಎಂದು ಗುಡುಗಿದರು.

ರಂಜಾನ್ ಹಬ್ಬದ ಉಪವಾಸ ವ್ರತದಲ್ಲಿದ್ದರೂ ನೂರಾರು ಮಂದಿ ಮುಸ್ಲಿಮರು ಈ ಹೋರಾಟದಲ್ಲಿ ಪಾಲ್ಗೊಂಡು ತಮ್ಮ ಬೆಂಬಲ ಸೂಚಿಸಿದರು.

ಕೋಲಾರದಲ್ಲಿ ಸಾಮಾನ್ಯವಾಗಿ ಗಂಭೀರವಾದ ಹಿಂದೂ - ಮುಸ್ಲಿಂ ಗಲಭೆಗಳು ನಡೆಯುತ್ತಿದ್ದವು. ಆದರೆ ಎಂದೂ ಕ್ರೈಸ್ತರ ವಿರುದ್ಧ ಇಂತಹ ಪ್ರಕರಣಗಳು ಜರುಗಿರಲಿಲ್ಲ. ಹಿಂದೂ - ಮುಸ್ಲಿಂ ಗಲಭೆಗಳೊಂದಿಗೆ ನಮಗೇನೂ ಸಂಬಂಧ ಇಲ್ಲ ಎನ್ನುವ ಭಾವನೆಯೂ ಕ್ರೈಸ್ತರಲ್ಲಿ ಮನೆ ಮಾಡಿತ್ತು. ಮತ್ತೊಂದು ಪ್ರಮುಖ ಅಂಶ ಎಂದರೆ ಕೋಲಾರ ಜಿಲ್ಲೆಯಲ್ಲಿ ಕ್ರೈಸ್ತರ ಯುವತಿಯರನ್ನು ದಲಿತ ಅಥವಾ ಹಿಂದುಳಿದ ವರ್ಗದ ಯುವಕರು ಮದುವೆ ಮಾಡಿಕೊಂಡಿರುವ ಪ್ರಕರಣಗಳು ಯಥೇಚ್ಛವಾಗಿವೆ. ಅದೇ ರೀತಿ ದಲಿತ ಹಿಂದುಳಿದ ವರ್ಗಗಳ ಯುವತಿಯರನ್ನು ಕ್ರೈಸ್ತ ಯುವಕರು ಮದುವೆ ಮಾಡಿಕೊಂಡಿರುವ ಘಟನೆಗಳೂ ಇವೆ. ಹಾಗಾಗಿ ದಲಿತರು, ಹಿಂದುಳಿದವರು ಹಾಗೂ ಕ್ರೈಸ್ತರ ನಡುವೆ ಅನಿನಾವಾಭಾವ ಸಂಬಂಧ ಇದೆ.

ಇವರ ಮಧ್ಯೆ ಹುಳಿ ಹಿಂಡಲು ಕಾಯುತ್ತಿದ್ದ ಹಿಂದೂ ಧರ್ಮಾಂಧರು ಈ ಪ್ರಕರಣದ ಮೂಲಕ ಒಡಕುಂಟು ಮಾಡುವ ಸಂಚು ರೂಪಿಸಿದ್ದಾರೆ.

ಇದೇ ಸಂದರ್ಭದಲ್ಲಿ ಪೊಲೀಸ್ ಮತ್ತು ಜಿಲ್ಲಾಡಳಿತ ಬೇಜವಾಬ್ದಾರಿಯಿಂದ ವರ್ತಿಸಿದೆ. ಬೇಜವಾಬ್ದಾರಿ ಎನ್ನುವುದಕ್ಕಿಂತಲೂ ಉರಿಯುವ ಬೆಂಕಿಗೆ ಪೆಟ್ರೋಲ್ ಸುರಿಯುವ ಕುತಂತ್ರ ಮಾಡುವತ್ತಲೂ ಮುಂದಾಗಿತ್ತು.

ಸೆಪ್ಟೆಂಬರ್ 29 ರ ರ್‍ಯಾಲಿ ಕೋಲಾರ ಜಿಲ್ಲೆಯಲ್ಲಿ ತನ್ನದೇ ಆದ ದಾಖಲೆಯನ್ನು ನಿರ್ಮಿಸಿದೆ. ಇದೇ ಜಿಲ್ಲೆಯ ರಾಜಕೀಯ ವ್ಯವಸ್ಥೆಯಲ್ಲಿ ಹೊಸ ಸಂಚಲನ ಮೂಡಿಸಿರುವದರೊಂದಿಗೆ ವಿನೂತನ ರಾಜಕೀಯ ಧ್ರುವೀಕರಣಕ್ಕೆ ನಾಂದಿಯಾಗಿದೆ. ಬಿಜೆಪಿ ವಿರುದ್ಧ ಅಲ್ಪಸಂಖ್ಯಾತರು, ದಲಿತರು, ಹಿಂದುಳಿದ ವರ್ಗಗಳು, ಪ್ರಗತಿಪರರು ಐಕ್ಯತೆಯಿಂದ ಕಾರ್ಯಪ್ರವೃತ್ತರಾಗಲೇಬೇಕಾದ ಪರಿಸ್ಥಿತಿಯನ್ನು ಉಂಟು ಮಾಡಿದೆ. ಮುಂದಿನ ಚುನಾವಣೆಗಳಲ್ಲಿ ಈ ಹೊಸ ಧ್ರುವೀಕರಣ ತನ್ನ ಪರಿಣಾಮವನ್ನು ಬೀರುವ ಸ್ಪಷ್ಟ ಲಕ್ಷಣಗಳು ಗೋಚರಿಸುತ್ತಿವೆ.

ಈ ವಾಸನೆ ಅರಿತ ಅಧಿಕಾರಿಗಳು ಬಿಜೆಪಿ ವಿರುದ್ಧ ಐಕ್ಯಗೊಳ್ಳುವುದನ್ನು ತಪ್ಪಿಸಲು ಸಂಚು ರೂಪಿಸಿದರು. ಕ್ರೈಸ್ತ ಮುಖಂಡರೊಂದಿಗೆ ಮೂರು ಬಾರಿ ಸಭೆಗಳನ್ನು ನಡೆಸಿದರು. ಎಡಪಕ್ಷಗಳು, ದಲಿತ ಸಂಘಟನೆಗಳು ಮತ್ತು ಪ್ರಗತಿಪರ ಸಂಘಟನೆಗಳು 29 ರ ರ್‍ಯಾಲಿಗೆ ಬೆಂಬಲ ಸೂಚಿಸಿರುವುದರಿಂದ ಘಟನೆ ರಾಜಕೀಯ ಬಣ್ಣ ಪಡೆಯಲಿದ್ದು ಬಹುಸಂಖ್ಯಾತ ಹಿಂದೂಗಳ ವಕ್ರದೃಷ್ಟಿಗೆ ಗುರಿಯಾಗುತ್ತೀರಿ ಎಂಬ ಎಚ್ಚರಿಕೆ ನೀಡಿದರು. ರ್‍ಯಾಲಿ ನಡೆಸದಂತೆ ಒತ್ತಡ ನಿರ್ಮಿಸುವ, ಬೆದರಿಸುವ ಯತ್ನವೂ ನಡೆಯಿತು.

ಕ್ರೈಸ್ತ ಮುಖಂಡರು ಸಾರಸಗಟಾಗಿ ಇದನ್ನು ತಿರಸ್ಕರಿಸಿದರು. ಎಡಪಕ್ಷಗಳು, ದಲಿತ ಸಂಘಟನೆಗಳು ಹತ್ತಾರು ವರ್ಷಗಳಿಂದ ಚಳುವಳಿಗಳನ್ನು ಮುಂದುವರೆಸಿಕೊಂಡು ಬಂದಿದ್ದು, ಎಂದೂ ಸಹ ಧರ್ಮದ ಆಧಾರದಲ್ಲಿ ರಾಜಕೀಯ ಮಾಡಿಲ್ಲ. ಇಲ್ಲಸಲ್ಲದ ವದಂತಿಗಳನ್ನು ಜಿಲ್ಲಾಡಳಿತವೇ ಹಬ್ಬಿಸುತ್ತಿದೆ ಎಂದು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು. 29ರಂದು ಬೃಹತ್ ರ್‍ಯಾಲಿ ನಡೆಸುವ ನಿರ್ಧಾರದಿಂದ ಹಿಂದೆಸರಿಯಲಿಲ್ಲ. ಸಾವಿರಾರು ಮಂದಿ ಬೃಹತ್ ರ್‍ಯಾಲಿಯತ್ತ ಹೆಜ್ಜೆ ಇಡುತ್ತಿದ್ದಂತೆ ಜಿಲ್ಲಾಡಳಿತ ಮತ್ತು ಹಿಂದೂ ಧರ್ಮಾಂಧರು ಬಿಟ್ಟ ಕಣ್ಣು ಬಿಟ್ಟಂತೆ ನೋಡುತ್ತಿದ್ದರೂ ಅವರ ಕಣ್ಣು ಕೆಂಪೇರಿದ್ದರೂ ಏನೂ ಮಾಡುವ ಪರಿಸ್ಥಿತಿಯಲ್ಲಿ ಅವರಿರಲಿಲ್ಲ. 29 ರ ರ್‍ಯಾಲಿ ಕೋಲಾರ ಜಿಲ್ಲೆಯ ಧರ್ಮಾಂಧ ಮೂಲಭೂತವಾದಿಗಳಿಗೆ ಗಂಭೀರ ಎಚ್ಚರಿಕೆ ನೀಡಿದೆ.

■ ಅಪ್ಪು, ಕೋಲಾರ.

'ಶಂಕಿತ'ರ ಬಗೆಗೆ ಇವರೇ ತೀರ್ಪಿತ್ತರೋ !!

ಪುಟ 3 ರಿಂದ

ಈಗ ನೋಡಿ ಮೊನ್ನೆ ಕುಂದಾಪುರದ ಗಂಗೊಳ್ಳಿ ಬಳಿ ಕರಾವಳಿಗೆ ಬಂದ ಮೂವರು ಪ್ರವಾಸಿ ಯುವಕರು ಒಬ್ಬ ಗೆಳೆಯನ (ಹಿಂದೂ) ಮನೆಯಲ್ಲಿ ತಂಗಿದ್ದಾಗ ಶಂಕಿತ ಭಯೋತ್ಪಾದಕರೆಂದು ನಡು ರಾತ್ರಿಯಲ್ಲಿ ಬಂಧಿಸಿ, 'ಸೂಕ್ತ ವಿಚಾರಣೆ' (ಲಾಠಿ, ಬೂಟುಗಳಿಂದ) ನಡೆಸಿ 'ಶಂಕೆ' ನಿವಾರಿಸಿಕೊಂಡು.... ಹೊರಗೆ ಕಳಿಸಿದ್ದಾರೆ. ಅದೇ ರೀತಿ ಶ್ರೀರಂಗಪಟ್ಟಣಕ್ಕೆ ಪ್ರವಾಸಕ್ಕೆಂದು ಬಂದಿದ್ದ ಯುವಕರನ್ನು ದ್ವಿಚಕ್ರವಾಹನದಾರಿ ಅಡ್ಡಗಟ್ಟಿ ಹಲ್ಲೆ ನಡೆಸಿ ಪೊಲೀಸರಿಗೆ ಒಪ್ಪಿಸಿ, ರಾಷ್ಟ್ರರಕ್ಷಣೆ ಮಾಡಿದ್ದಾರೆ. ಭಯೋತ್ಪಾದಕರಿಗಾಗಿ ಹುಡುಕಾಡಿದ ಪೊಲೀಸರಿಗೆ ಅಲ್ಲಿ ಸಿಕ್ಕಿದ್ದು ಶೂನ್ಯವೇ! ಈ ಒಂದು ತಿಂಗಳ ಹಿಂದೆ ಮಂಡ್ಯದ ಕೆ.ಆರ್. ಪೇಟೆಗೆ ಬಂದಿದ್ದ ಉತ್ತರ ಭಾರತದ ಮುಸ್ಲಿಂ ಮುಲ್ಲಾಗಳನ್ನು ಭಯೋತ್ಪಾದಕರೆಂದು ಗುಲ್ಲೆಬ್ಬಿಸಿದ ಚೆಡ್ಡಿ ಸಂತತಿ ಕ್ರಮದ ಬಳಿಕ ಅವರು ಅಲ್ಲವೆಂದು ಪೊಲೀಸರು ವಿಚಾರಣೆ ನಡೆಸಿ ಸಾರಿದರೂ, ಬಜರಂಗದಳ ಪಡೆ ಎಷ್ಟೆಲ್ಲಾ ರಾದ್ಧಾಂತ, ಗಲಭೆ ಸೃಷ್ಟಿಸಿತೆಂಬುದನ್ನು ಇತ್ತೀಚೆಗೆ ನೋಡಿದ್ದೇವೆ. ಇವೆಲ್ಲಾ ಶಂಕಿತ ಭಯೋತ್ಪಾದಕರನ್ನು ವಿಚಾರಣೆಗೆ ಮೊದಲೇ 'ಭಯೋತ್ಪಾದಕ'ರನ್ನಾಗಿಸುತ್ತಿವೆ. ಅದೇ ರೀತಿ ಭಯೋತ್ಪಾದನೆಯ ಹೆಸರಿನಲ್ಲಿ ಪೊಲೀಸರು ಭೇಟಿಯಾಡಿದ ಪ್ರಕರಣದಲ್ಲಿ ಎನ್‌ಕೌಂಟರ್‌ನಲ್ಲಿ ಹತ್ಯೆಗೀಡಾದವರು ಭಯೋತ್ಪಾದಕರೆ ಅಲ್ಲ ಎಂಬುದು ಬೆಳಕಿಗೆ ಬಂದದ್ದು ಗುಜರಾತ್, ಮುಂತಾದೆಡೆ ಇದೆ.

ಇಂತಹ ಸಂದರ್ಭದಲ್ಲಿ ಭಯೋತ್ಪಾದನೆಯನ್ನು ನಿರ್ಮೂಲಗೊಳಿಸಬೇಕಾದರೆ, ಭಯೋತ್ಪಾದಕರು ಜನಸಾಮಾನ್ಯರಿಂದ ದೂರ ಸರಿಸಲ್ಪಟ್ಟು ಸೋಲಿಸಬೇಕೆಂದರೆ ಇಂದು ಅತ್ಯಂತ ಸಮಚಿತ್ತದ, ನಿಷ್ಪಕ್ಷಪಾತದ ತನಿಖೆ, ನಿರ್ಣಯ ಅತ್ಯಗತ್ಯ. ಈ ದಿಶೆಯಲ್ಲಿ ಕರ್ನಾಟಕದ ಪೊಲೀಸರಿಗೆ ಇವೆಲ್ಲ ಹೊಸತು ಇರಬಹುದು. ಆದರೆ ಬಿಜೆಪಿ ಸರ್ಕಾರ, ಸಂಘ ಪರಿವಾರ ಅವರಿಗೆಲ್ಲಾ ಹಂತಹಂತವಾಗಿ ತರಬೇತಿ ಆಯೋಜಿಸಿರುವ ಬಗ್ಗೆ ಅನುಮಾನವಿಲ್ಲ. ಆದರೂ ಇಲಾಖೆಗಳು ನ್ಯಾಯ ನಿಷ್ಠುರಿಯಾಗಿರುವವೇ? ನಿಜವಾಗಿಯೂ ಎಲ್ಲಾ ಬಗೆಯ ಭಯೋತ್ಪಾದನೆಯನ್ನು ತಡೆಯಲು ಸಮರ್ಥವಾಗುವವೇ? ○



ದಕ್ಷಿಣ ಕನ್ನಡ : ಚರ್ಚ್‌ಗಳ ಮೇಲಿನ ಧಾಳಿ ನಡೆದಾಗ...

ಒರಿಸ್ಸಾ, ದಾವಣಗೆರೆಗಳ ಸ್ಫೂರ್ತಿಯೊಂದಿಗೆ ಕರ್ನಾಟಕದಲ್ಲಿಯೂ ಭಜರಂಗದಳವು ಚರ್ಚ್‌ಗಳ ಮೇಲೆ ದಾಳಿ ಮಾಡಿದ್ದು ನಾಡಿಗೆಲ್ಲಾ ತಿಳಿದ ವಿಷಯ. ಜಾತ್ಯಾತೀತತೆ, ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ತತ್ವಗಳಲ್ಲಿ ನಂಬಿಕೆ ಇರುವವರು ಇಂತಹ ಧಾಳಿಗಳನ್ನು ನೋಡಿಕೊಂಡು ನೆಮ್ಮದಿಯಾಗಿ ಇರಬಹುದೆ?. ಇಂತಹ ಸಂದರ್ಭದಲ್ಲಿ ಜವಾಬ್ದಾರಿಯುತ ರಾಜಕೀಯ ಪಕ್ಷವೊಂದು ಏನು ಮಾಡಬೇಕು ? ತತ್‌ಕ್ಷಣ ವಿಷಯದಲ್ಲಿ ಮಧ್ಯಪ್ರವೇಶಿಸಿ, ಅನ್ಯಾಯಕ್ಕೊಳಗಾದ ಜನರ ರಕ್ಷಣೆಗೆ ಮುಂದಾಗುವುದಲ್ಲವೇ ನಿಜವಾದ ಬದ್ಧತೆ.

ಕರ್ನಾಟಕದ ಕರಾವಳಿಯಲ್ಲಿ ಇಂತಹ ಪ್ರಕರಣ ಗಮನಕ್ಕೆ ಬಂದಕೂಡಲೇ ತತ್‌ಕ್ಷಣ ಸ್ಪಂದಿಸಿದ್ದಲ್ಲದೇ ದಕ್ಷಿಣ ಕನ್ನಡ ಜಿಲ್ಲೆಯ ಸಿಪಿಐ(ಎಂ)ನಿಂದ ಕೂಡಲೇ ಖಂಡನೆ ಹೇಳಿಕೆ ಪತ್ರಿಕೆಗಳಿಗೆ ನೀಡಲಾಯಿತು. ಸೆಪ್ಟೆಂಬರ್ 20 ರಂದು ರಾಜ್ಯಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ: ಜಿ.ಎನ್.ನಾಗರಾಜ್‌ರವರು ಜಿಲ್ಲಾ ಸಮಿತಿಯ ನಿಯೋಗದೊಂದಿಗೆ ದಾಳಿಗೊಳಗಾದ ಕ್ರೈಸ್ತ ಪ್ರಾರ್ಥನಾ ಮಂದಿರಗಳಿಗೆ ಭೇಟಿ ನೀಡಿ ವಾಸ್ತವಿಕ ಅಂಶಗಳನ್ನು ಸಮೀಕ್ಷೆ ನಡೆಸಿ ಸಾಂತ್ವಾನ ಹೇಳಿದರು.


ಚರ್ಚ್‌ಗಳ ಮೇಲಿನ ದಾಳಿ ಖಂಡಿಸಿ ಕುಂದಾಪುರದಲ್ಲಿ ಸಿಪಿಐ(ಎಂ) ಪ್ರತಿಭಟನೆ

ಪತ್ರಿಕಾಗೋಷ್ಠಿಯನ್ನು ಉದ್ದೇಶೀಸಿ ಮಾತನಾಡಿದರು. ಟಿ.ವಿ.. ಚಾನಲ್ ಒಂದರಲ್ಲಿ ಮುಖಾಮುಖಿ ಚರ್ಚೆಯಲ್ಲಿ ಪಾಲ್ಗೊಂಡು ಭಜರಂಗಿಗಳನ್ನು ತರಾಟೆಗೆ ತೆಗೆದುಕೊಂಡರು. ಗೂಂಡಾಗಿರಿಯಲ್ಲಿ ಭಾಗಿಯಾದ ಎಲ್ಲಾ ಭಜರಂಗಿ ಮತ್ತು ಸಂಘ ಪರಿವಾರದ ಪಡೆಯನ್ನು ಜೈಲಿಗೆ ತಳ್ಳಬೇಕು ಎಂದು ಆಗ್ರಹಿಸಿದರು. ಯಡಿಯೂರಪ್ಪ ಸರ್ಕಾರದ ನೂರು ದಿನಗಳ ಆಡಳಿತದ ನಿಜಸ್ವರೂಪ ಇದಾಗಿದೆ. ಲೋಕಸಭಾ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನಗಳನ್ನು ಪಡೆಯಲು ಪೂರ್ವಭಾವಿಯಾಗಿ ಅಲ್ಪಸಂಖ್ಯಾತರ ಮೇಲೆ ಪ್ರಯೋಗ ಮಾಡುವ ಕಸರತ್ತು ನಡೆಸಿದೆ. ಹಿಂದುತ್ವದಿಂದ ದೂರಸರಿದಿರುವ ಹಿಂದೂಗಳನ್ನು ತಮ್ಮತ್ತ ಸೆಳೆಯುವ ಹುನ್ನಾರ ಎಂದು ಆರೋಪಿಸಿ, ಗೃಹ ಸಚಿವ ಆಚಾರ್ಯ ಕೂಡಲೇ ರಾಜೀನಾಮೆ ನೀಡಬೇಕು. ಇಲ್ಲದಿದ್ದರೆ ಅವರನ್ನು ವಜಾಮಾಡಿ ಆರ್‌ಎಸ್‌ಎಸ್ ನವರಲ್ಲದ ಗೃಹಮಂತ್ರಿಯನ್ನು ನೇಮಿಸಬೇಕೆಂದರು. ಎಷ್ಟೋ ದಶಕಗಳ ಹಿಂದೆ ಪ್ರಕಟಿಸಲ್ಪಟ್ಟಿದ್ದ ಸತ್ಯದರ್ಶನಿ ಪುಸ್ತಕ ಇವರಿಗೆ ಲೋಕಸಭಾ ಚುನಾವಣೆ ಹತ್ತಿರಬಂದಾಗ ಕಣ್ಣಿಗೆ ಬಿತ್ತೇ? ಎಂದು ಪ್ರಶ್ನಿಸಿದರು.

ಪ್ರತಿಭಟನಾ ಸಭೆ

ಸೆಪ್ಟೆಂಬರ್ 25 ರಂದು ಜಿಲ್ಲಾಧಿಕಾರಿಗಳ ಕಛೇರಿ ಮುಂದುಗಡೆ ಬೃಹತ್ ಸಭೆಯನ್ನು ಆಯೋಜಿಸಲಾಗಿತ್ತು. ಜಿಲ್ಲಾಡಳಿತದಿಂದ ಪದೇ ಪದೇ 144 ಸೆಕ್ಷನ್ ವಿಸ್ತರಣೆ, ಪೋಲೀಸರ ಹಸ್ತಕ್ಷೇಪಗಳಿಂದಾಗಿ ಬಹಿರಂಗ ಸಭೆಯನ್ನು ನಗರದ ಡಾನ್‌ಬಾಸ್ಕೋ ಹಾಲಿಗೆ ವರ್ಗಾವಣೆ ಮಾಡಲಾಯಿತು. ಹಾಲ್ ತುಂಬಿ ಕಿಕ್ಕಿರಿದ ಪ್ರತಿಭಟನಾ ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಕಾರ್ಯದರ್ಶಿ ಬಿ.ಮಾಧವ ವಹಿಸಿದ್ದರು. ವೇದಿಕೆಯಲ್ಲಿ ಜಿಲ್ಲಾ ಮುಖಂಡರುಗಳಾದ ವಸಂತ ಆಚಾರಿ, ರಾಮಚಂದ್ರ ಉಚ್ಚಿಲ, ಯಾದವಶೆಟ್ಟಿ, ಯು.ಬಿ.ಲೋಕಯ್ಯ, ಜೆ.ಬಾಲಕೃಷ್ಣಶೆಟ್ಟಿ, ಉಪಸ್ಥಿತರಿದ್ದರು.

ಗಲಭೆ ಮುಗಿದ ಬಳಿಕ ಸಿ.ಎಂ.ಗೆ ನಾಚಿಕೆ : ಶ್ರೀರಾಮರೆಡ್ಡಿ

'ಕ್ರೈಸ್ತ ಮಂದಿರಗಳ ಮೇಲೆ ಸಂಘ ಪರಿವಾರ ದಾಳಿ ನಡೆಸಿ ಗಲಭೆ ಸೃಷ್ಟಿಸಿ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಗೆಲ್ಲುವ ಸಂಚು ರೂಪಿಸಿದೆ. ಎಲ್ಲಾ ಮುಗಿದ ಮೇಲೆ ಮುಖ್ಯಮಂತ್ರಿಯವರು ನಾಚಿಕೆಯಾಗುತ್ತಿದೆ ಎನ್ನುತ್ತಿದ್ದಾರೆ. ನಿಜವಾಗಿ ನಾಚಿಕೆ ಅಂತಿದ್ದಿದ್ದರೆ ಪರಿಸ್ಥಿತಿ ಹೀಗಿರುತ್ತಿರಲಿಲ್ಲ ಎಂದು ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಹಾಗೂ ಮಾಜಿ ಶಾಸಕ ಜಿ.ವಿ.ಶ್ರೀರಾಮರೆಡ್ಡಿ ಪ್ರತಿಭಟನಾ ಸಭೆಯಲ್ಲಿ ಹೇಳಿದರು.

ಬಹಳ ವರ್ಷಗಳ ಹಿಂದಿನಿಂದಲೂ ಸಿಪಿಐ(ಎಂ) ಪಕ್ಷವು ಬಿಜೆಪಿ ಅಧಿಕಾರಕ್ಕೆ ಬಂದರೆ ಏನಾಗಬಹುದೆಂದು ಎಚ್ಚರಿಕೆ ನೀಡುತ್ತಾ ಬಂದಿದೆ. ಹಾಗೆಯೇ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ 4 ತಿಂಗಳಲ್ಲೇ ಅವರು ಸಾಬೀತುಪಡಿಸಿದ್ದಾರೆ. ಕರ್ನಾಟಕದ ಇತಿಹಾಸದಲ್ಲಿ ಇಂತಹ ಒಂದು ಪರಿಸ್ಥಿತಿ ಯಾವತ್ತೂ ನಿರ್ಮಾಣವಾಗಿರಲಿಲ್ಲ. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಬದುಕುವ ಹಾಗೂ ಪ್ರತಿಭಟಿಸುವ ಹಕ್ಕನ್ನು ಕಸಿಯುವ ಅಮಾಯಕರ ಮೇಲೆ ದಬ್ಬಾಳಿಕೆಯನ್ನು ನಡೆಸಿ ತನ್ನ ಬೇಳೆ ಬೇಯಿಸಿಕೊಳ್ಳಲು ಕೋಮುವಾದಿ ಪಕ್ಷ ಬಿಜೆಪಿ ನೋಡುತ್ತಿದೆ ಎಂದರು.

ಹಿಂದುತ್ವವೇ ಬಿಜೆಪಿಯ ಸಿದ್ಧಾಂತವಾಗಿದೆ. ಅಲ್ಪಸಂಖ್ಯಾತರ ಮೇಲೆ ನಿರಂತರ ದಾಳಿ ನಡೆಸುತ್ತಿದೆ. ಇವರು ಅಧಿಕಾರ ಕಳೆದುಕೊಂಡರೂ ಇವರು ಬಿತ್ತಿರುವ ವಿಷ ಬೀಜ ಬೆಳೆದು ಹೆಮ್ಮರವಾದರೆ ಏನಾಗಬಹುದು ಎಂದು ಹೇಳಲು ಸಾಧ್ಯವಿಲ್ಲ ಎಂದ ಅವರು, ಒರಿಸ್ಸಾದಲ್ಲಿ ಕ್ರೈಸ್ತರ ಮೇಲೆ ನಡೆದ ದಾಳಿಯಂತೆ ಕರ್ನಾಟಕದಲ್ಲೂ ಮರುಕಳಿಸಿದೆ. ಲಜ್ಜೆಗೆಟ್ಟ ಬಿಜೆಪಿ ಸರ್ಕಾರ ಹಾಗೂ ಪೇಜಾವರ ಮಠಾಧೀಶರು ಇದನ್ನು ಸಮರ್ಥನೆ ಮಾಡಿ ಮಾತನಾಡುತ್ತಿದ್ದಾರೆ. ಇವರಿಗೆ ಹಿಂದೂ ಧರ್ಮವನ್ನು ಗುತ್ತಿಗೆ ಕೊಟ್ಟವರು ಯಾರು ಎಂದು ಪ್ರಶ್ನಿಸಿದರು.

ಮತಾಂತರವನ್ನು ಯಾರೂ ಬಲವಂತವಾಗಿ ಮಾಡಲು ಸಾಧ್ಯವೇ ಇಲ್ಲ. ಸಾಮಾನ್ಯವಾಗಿ ಉನ್ನತ ವರ್ಗ, ಜಾತಿಯವರು ಮತಾಂತರಗೊಳ್ಳುವುದಿಲ್ಲ. ಅಸ್ಪೃಶ್ಯರು, ಶೂದ್ರರು, ಪಂಚಮರು ಎಂದೂ ಯಾರನ್ನೂ ದೂರ ಇಟ್ಟಿದ್ದಾರೋ ಅವರು ಮತಾಂತರಗೊಳ್ಳುತ್ತಾರೆ. ವೈಯಕ್ತಿಕ ಭಾವನೆಯಿಂದ ಯಾರೂ ಬೇಕಾದರೂ ಯಾವ ಧರ್ಮವನ್ನು ಆಚರಣೆ ಮಾಡಬಹುದು. ಇದಕ್ಕೆ ಸಂಪೂರ್ಣ ಸ್ವಾತಂತ್ರ್ಯ ಇದೆ. ಮುಸ್ಲಿಮರು, ಜೈನರು, ಬೌದ್ಧರು, ಹಿಂದೂಗಳೂ ಧರ್ಮ ಪ್ರಚಾರ ಮಾಡುವುದಿಲ್ಲವಾ ಎಂದ ಅವರು, ಇದನ್ನು ಬೇಡ ಅನ್ನಲು ಪೇಜಾವರರು ಯಾರು ಎಂದು ಪ್ರಶ್ನಿಸಿದರು.

ಜನಸಾಮಾನ್ಯರಿಗೆ ರಕ್ಷಣೆ ನೀಡಬೇಕಾದ ಕಾನೂನು ಪಾಲಕರೇ ಇಲ್ಲಿ ಪೈಶಾಚಿಕವಾಗಿ ವರ್ತಿಸಿದ್ದಾರೆ ಸನ್ಯಾಸಿನಿಯರ ಮೇಲೆ ಲಾಠಿ ಬೀಸಿದ್ದಾರೆ. ಪೇಜಾವರರು ಅವರು ಮಾತ್ರ ಸನ್ಯಾಸಿ ಎಂದು ತಿಳಿದುಕೊಂಡಿದ್ದಾರೆ. ಅಂಥವರಿಗೆ ಏಟು ಬಿದ್ದಿದ್ದರೆ ಅವರಿಗೆ ಅರ್ಥವಾಗುತ್ತಿತ್ತು. ಸನ್ಯಾಸಿಗಳು ಸರ್ವ ಸಂಘ ಪರಿತ್ಯಾಗಿಗಳು. ಎಲ್ಲರನ್ನೂ ಒಂದೇ ದೃಷ್ಟಿಯಲ್ಲಿ ಕಾಣಬೇಕಾದ ಇವರೇ ರಾಜ್ಯಪಾಲರಿಗೆ ನೀಡಿದ ಮನವಿಯಲ್ಲಿ ಮತಾಂತರ ನಿಷೇಧಿಸುವ ಕಾನೂನುಗಳನ್ನು ತರಬೇಕು ಎಂದು ಭಜರಂಗಿಗಳು ಹೇಳಿದ್ದನ್ನೇ ಹೇಳಿದ್ದಾರೆ.

ಒಳ್ಳೆಯವರು ಕೆಟ್ಟವರು ಎನ್ನದೆ ಕಾಲಿಗೆ ಬಿದ್ದ ಎಲ್ಲರಿಗೂ ಆಶೀರ್ವಾದ ಮಾಡುವ ನೀವು ಹೆಸರಿಗಾದರೂ ಚರ್ಚುಗಳಿಗೆ ಭೇಟಿ ನೀಡಿ ಸಾಂತ್ವಾನ ಹೇಳಬೇಕಿತ್ತು. ಇದನ್ನು ಮಾಡದ ನಿಮ್ಮನ್ನು ಸರ್ವಸಂಗ ಪರಿತ್ಯಾಗಿಗಳೆನ್ನುವುದು ಹೇಗೆ? ಎಂದು ಪ್ರಶ್ನಿಸಿದರು.

ಗೃಹಮಂತ್ರಿ ವಿ.ಎಸ್.ಆಚಾರ್ಯ ತನ್ನ ಪತ್ನಿಗೆ ಮಾತ್ರ ಗೃಹಮಂತ್ರಿ, ಆ ಹುದ್ದೆಗಿರಬೇಕಾದ ಲವಲೇಶದ ಅರ್ಹತೆಯೂ ಇಲ್ಲದ ಇವರನ್ನು ಯಾರೂ ಮಂತ್ರಿ ಎಂದು ಒಪ್ಪುವುದಿಲ್ಲ. ಇಂಥವರನ್ನೂ ಗೃಹಮಂತ್ರಿಯಾಗಿ ಪಡೆದಿದ್ದು ನಮ್ಮ

ಪುಟ 7 ಕ್ಕೆ


ಸಿಪಿಐ(ಎಂ) ನಿಯೋಗದ ಚರ್ಚ್ ಭೇಟಿ

ಸಂಸತ್ ಸದಸ್ಯರ ನಿಯೋಗ ಭೇಟಿ

ಸೆಪ್ಟೆಂಬರ್ 22 ರಂದು ಕೇರಳ ರಾಜ್ಯದ ಸಂಸತ್ ಸದಸ್ಯರುಗಳಾದ ಕಾಂ. ಸುರೇಶ್ ಕುರೂಪ್, ಪಿ.ಕರುಣಾಕರಣ್, ಸತಿದೇವಿ, ಡಾ. ಮನೋಜ್ ಹಾಗೂ ಮಂಜೇಶ್ವರ ಶಾಸಕ ಕುಂಞಬು ರವರು ಬೆಳಗ್ಗೆ 9.00 ಗಂಟೆಯಿಂದ ರಾತ್ರಿ 8.30 ರತನಕ ಮಿಲಾಗ್ರೆಸ್, ಪೆಮಾನ್ನರು, ಉಜಿರೆ, ಕುಲಶೇಖರ, ವಾಮಂಜೂರು ಪ್ರಾರ್ಥನಾ ಕೇಂದ್ರಗಳಿಗೆ ಭೇಟಿ ನೀಡಿ ಭಜರಂಗಿಗಳ ಗೂಂಡಾಗಿರಿಯನ್ನು ಕಣ್ಣಾರೆ ಕಂಡು ಖಂಡಿಸಿದರು. ನೊಂದವರಿಗೆ ಸಾಂತ್ವಾನ ಹೇಳಿದರು. ರಾಜ್ಯ ಸಕಾರದ ನಿಷ್ಕ್ರಿಯತೆಯನ್ನು ಆಕ್ಷೇಪಿಸಿದರು. ಸಂಸತ್ತಿನಲ್ಲಿ ಧ್ವನಿಯೆತ್ತುವುದಾಗಿ ಭರವಸೆ ನೀಡಿದರು. ರಕ್ಷಣೆ ಕೊಡಬೇಕಾದ ಪೋಲೀಸರು ವರ್ತಿಸಿದ ಅಮಾನವೀಯ ರೀತಿಯನ್ನು ಕಟುವಾಗಿ ಟೀಕಿಸಿದರು. ನಿಯೋಗದಲ್ಲಿ ಜಿಲ್ಲಾ ಕಾರ್ಯದರ್ಶಿ ಬಿ.ಮಾಧವ, ಜಿಲ್ಲಾ ಮುಂದಾಳುಗಳಾದ ವಸಂತ ಆಚಾರಿ, ಜೆ.ಬಾಲಕೃಷ್ಣಶೆಟ್ಟಿ, ರಾಮಚಂದ್ರ ಉಚ್ಚಿಲ್, ಯಾದವಶೆಟ್ಟಿ, ಸುಕುಮಾರ್, ಸುನೀತ್‌ಕುಮಾರ್, ಶಿವಕುಮಾರ್, ಬಿ.ಎಂ.ಭಟ್, ಹರಿದಾಸ್, ಕೃಷ್ಣಪ್ಪ ಸಾಲಿಯಾನ್, ಪ್ರಧಾಮ ಶೆಟ್ಟಿ, ಜಯಂತಿ ಶೆಟ್ಟಿ, ಮುನೀರ್ ಕಾಟಿಪಳ್ಳ ಹಾಗೂ ಇತರ ನಾಯಕರು ಉಪಸ್ಥಿತರಿದ್ದರು.

ಹಿಟ್ಲರ್‌ನ ಪ್ರತಿರೂಪ ಕಲ್ಲಡ್ಕ ಪ್ರಭಾಕರ ಭಟ್ಟ

ಹಿಂದುತ್ವದ ಮಂಗಳೂರು ಸಭೆಯೊಂದನ್ನು ಉದ್ದೇಶಿಸಿ ಭಾಷಣ ಮಾಡಿದ ಕಲ್ಲಡ್ಕ ಪ್ರಭಾಕರ ಭಟ್ ಉಪದೇಶ ಕೇಳಿದ್ದೀರಾ?.... ಈ ಬಾರಿಯ ಆಯುಧಪೂಜೆ ವೇಳೆ ಬಸ್ಸು, ಜೀಪು, ಲಾರಿ ಪೂಜೆ ಮಾಡಬೇಡಿ. ತಲವಾರು, ಕತ್ತಿ ಪೂಜೆ ಮಾಡಿ.... ಮುಂದಿನ ದಿನಗಳಲ್ಲಿ ಸಾಧ್ಯವಾದಷ್ಟು ಹಿಂದೂಗಳು ಪಿಸ್ತೂಲ್ ಖರೀದಿಯತ್ತ ಮನಸ್ಸು ಮಾಡಬೇಕು. ಬೆಂಗಳೂರಿನ ಆರ್ಚ್ ಬಿಷಪ್ ಬೆರ್ನಾಡಿ ಮೋರಸ್ ಯಡಿಯೂರಪ್ಪರವರಲ್ಲಿ ಪ್ರಶ್ನಿಸುತ್ತಾನೆ. 'ಗರ್ಭಗುಡಿಯನ್ನು ಧ್ವಂಸ ಮಾಡಿದರೆ ನೀವೇನು ಮಾಡುತ್ತೀರಿ' ಎಂದು ಆತ ಗರ್ಭಗುಡಿಯನ್ನು ಧ್ವಂಸ ಮಾಡಿ ನೋಡಲಿ. ನಾವೇನು ಮಾಡಲ್ಲ. ಇಡೀ ಊರೇ ಬೆಂಕಿ ಹಚ್ಚಿ ಬಿಡ್ತೇವೆ ಅಷ್ಟೇ...

ಈಗ ಪೋಲಿಸರಿಗೆ ಕಿವಿ ಇಲ್ಲ. ಕಣ್ಣು ಇಲ್ಲ...

ಜನಶಕ್ತಿ
ಕನ್ನಡ ವಾರಪತ್ರಿಕೆ

ರಾಜಸ್ತಾನವಾದರೇನು, ಒರಿಸ್ಸಾ ಆದರೇನು? ಕರ್ನಾಟಕವಾದರೆ ತಾನೆ ಏನು? ಬಿಜೆಪಿ ಅಧಿಕಾರದಲ್ಲಿದೆ ಎಂದರೆ ಒಂದೇ ಅರ್ಥ. ಅದು ಅಧಿಕಾರ ದುರುಪಯೋಗ. ಅಲ್ಪಸಂಖ್ಯಾತರ ಮೇಲೆ ದಾಳಿಗೆ ಅದರ ಉಪಯೋಗ.

ರಾಜಸ್ತಾನದಲ್ಲೂ ಅದೇ ಕಥೆ ವಿಹೆಚ್‌ಪಿ-ಭಜರಂಗ ದಳದ ಒತ್ತಡದಲ್ಲಿ ಆಡಳಿತ

ರಾಜಸ್ತಾನದ ದುಂಗಾರ್ಪುರ ಪಟ್ಟಣದಲ್ಲಿ ಅಕ್ಟೋಬರ್ 2 ಹಾಗೂ 3ರಂದು ನಡೆದ ಘಟನೆಗಳನ್ನು ನೋಡಿದರೆ ಬಿಜೆಪಿ ಇಲ್ಲಿಯೂ ಗುಜರಾತ್ ಮಾದರಿಯ ಪುನರಾವರ್ತನೆಗೆ ಇಳಿದಂತೆ ಕಾಣುತ್ತದೆ. ಇಲ್ಲಿ ಬಿಜೆಪಿ ಸರಕಾರವಿದ್ದು ಸದ್ಯದಲ್ಲೇ ವಿಧಾನ ಸಭಾ ಚುನಾವಣೆಗಳು ಇಲ್ಲಿ ನಡೆಯಬೇಕಾಗಿದೆ.

ಅಕ್ಟೋಬರ್ 2ರಂದು ನಗರದ ಪುರಾನೀ ಮಡಿಯಲ್ಲಿರುವ ಹನುಮಂತ ದೇವಸ್ಥಾನದ ಬಳಿ ಎರಡು ಮತೀಯ ಗುಂಪುಗಳ ವ್ಯಕ್ತಿಗಳ ನಡುವೆ ಜಗಳವಾಯಿತು. ಮರುದಿನ ಬಂದ್‌ಗೆ ಕರೆ ನೀಡಲಾಯಿತು. ಅಂದು ಸೆಕ್ಷನ್ 144 ಇದ್ದರೂ ದೊಂಬಿ, ಅಗ್ನಿಸ್ಪರ್ಶ ಮುಂತಾದವು ನಡೆದವು. ಇವು ಪೋಲೀಸರ ಸಮ್ಮುಖದಲ್ಲೇ ನಡೆದವು ಎಂದು ವರದಿಯಾಗಿದೆ. ಅಲ್ಪಸಂಖ್ಯಾತರ ಅಂಗಡಿಗಳಿಗೆ ಬೆಂಕಿ ಹಚ್ಚಲಾಯಿತು, ಕೆಲವು ವ್ಯಕ್ತಿಗಳ ಮೇಲೆ, ಮನೆಗಳ ಮೇಲೆ ದಾಳಿಗಳು ನಡೆದವು.

ಆಡಳಿತ ಮತ್ತು ಪೋಲೀಸಿನ ಶಾಮೀಲು ಮತ್ತು ಪ್ರೋತ್ಸಾಹ ಸ್ಪಷ್ಟವಾಗಿ ಕಾಣುತ್ತಿತ್ತು ಎಂದು ರಾಜಸ್ತಾನದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಹೇಳಿದೆ. ಇತ್ತೀಚೆಗೆ ಇಂತಹ ಘಟನೆಗಳು ನಡೆಯುತ್ತಿದ್ದು ಬಿಜೆಪಿ ರಾಜ್ಯ ಸರಕಾರದ ಒತ್ತಡಗಳಿಂದಾಗಿ ಆಡಳಿತ ಅಸ್ತವ್ಯಸ್ತಗೊಂಡಂತಿದೆ ಎಂದು ಅದು ಹೇಳಿದೆ. ಅಕ್ಟೋಬರ್ 2ರಂದು ಕೈಗಳಲ್ಲಿ ಖಡ್ಗ ಹಿಡಿದು ಬೀದಿಯಲ್ಲಿ ಓಡಾಡುತ್ತಿದ್ದವರನ್ನು ಬಂಧಿಸಿದ್ದರೆ ಅಕ್ಟೋಬರ್ 3ರ ಹಿಂಸಾಚಾರ ನಡೆಯುತ್ತಿರಲಿಲ್ಲ ಎಂದು ಸಿಪಿಐ(ಎಂ) ದುಂಗಾರ್ಪುರ ಜಿಲ್ಲಾ ಸಮಿತಿ ಹೇಳಿದೆ.

ಯೋಜಿತ ಗಲಭೆಗಳು

ವಾಸ್ತವವಾಗಿ ಅಕ್ಟೋಬರ್ 1 ರಂದು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಅಮೃತ್‌ಲಾಲ್ ಕಲಾಲ್ ಡಿಎಸ್‌ಪಿಯವರನ್ನು ಭೇಟಿ ಮಾಡಿ ಈ ಗಲಭೆ ನಡೆಯುವ ಸಂಭವವಿದೆ, ತಡೆ ಕ್ರಮಗಳನ್ನು ಕೈಗೊಳ್ಳಿ ಎಂದು ಪೋಲೀಸರಿಗೆ ಹೇಳಿದ್ದರು. ಆದರೆ ಗುಜರಾತ್ ಮಾದರಿಯಲ್ಲಿ ಆಡಳಿತ ಆರೆಸ್ಸೆಸ್-ಬಿಜೆಪಿ ಒತ್ತಡಕ್ಕೆ ಒಳಗಾಯಿತು, ಎಚ್ಚರಿಕೆಯನ್ನು ಉಪೇಕ್ಷಿಸಿತು, ಇವನ್ನೆಲ್ಲ ಯೋಜಿತ ರೀತಿಯಲ್ಲಿಯೇ ಮಾಡಲಾಗುತ್ತಿದೆ ಎಂಬುದು ಈ ನಗರದಲ್ಲಿ ಕಳೆದ ಕೆಲವು ದಿನಗಳಲ್ಲಿ ನಡೆದ ಘಟನೆಗಳಿಂದಲೇ ಸ್ಪಷ್ಟವಾಗುತ್ತದೆ.

ಸೆಪ್ಟೆಂಬರ್ 28ರಂದು ಘಾಂಟಿ ಮೊಹಲ್ಲಾದಲ್ಲಿ ಗಣೇಶನ ಮೂರ್ತಿಗೆ ಯಾರೋ ಬಣ್ಣ ಹಚ್ಚಿದರಂತೆ. ವಿಹೆಚ್‌ಪಿಯವರು ಜಗಿದ ವೀಳ್ಯದೆಲೆ ಉಗುಳಿ ಮೂರ್ತಿಯನ್ನು ಅಪವಿತ್ರಗೊಳಿಸಲಾಯಿತು ಎಂದು ಪ್ರಚಾರ ಮಾಡಿದರು. ಅದೇ ದಿನ ಮಹಾಕಾಲೇಶ್ವರ ದೇವಸ್ಥಾನದ ಮುಖ್ಯದ್ವಾರದಲ್ಲಿರುವ ಮೂರ್ತಿಯ ಮೂಗು ಮುರಿಯಲಾಗಿದೆ ಎಂದು ಅಲ್ಲಿನ ಮಹಂತ ಹೇಳಿದ. ಸೆಪ್ಟಂಬರ್ 29ರಂದು ಕೋಮುವಾದಿ ಸಂಘಟನೆಗಳು ಈ ಎರಡು ಘಟನೆಗಳ ಮೇಲೆ ಜನರನ್ನು ಉದ್ರೇಕಿಸಲು ಪ್ರಯತ್ನಿಸಿದರು. ಆದರೆ ಆಗ ಆಡಳಿತ ಸಮಯಕ್ಕೆ ಸರಿಯಾಗಿ ಮಧ್ಯಪ್ರವೇಶಿಸಿತು. ಶಾಂತಿ ಸಮಿತಿಯನ್ನು ರಚಿಸಲಾಯಿತು. ಅದ್ದರಿಂದ ಪರಿಸ್ಥಿತಿ ಹತೋಟಿಯಲ್ಲುಳಿಯಿತು.

ಶಾಂತಿ ಸಮಿತಿಯ ಸಭೆ ನಡೆಯುತ್ತಿರುವಾಗಲೇ ಸತೀ ಮಾತಾ ದೇವಸ್ಥಾನವನ್ನು ಅಪವಿತ್ರಗೊಳಿಸಲಾಗಿದೆ ಎಂಬ ಸುದ್ದಿ ಹರಡಲಾಯಿತು. ಎರಡೂ ಕೋಮುಗಳ ರೌಡಿ ಜನಗಳು ಪರಸ್ಪರ ಎದುರು ಬದುರಾಗಿ ನಿಂತರು. ಎಎಸ್‌ಪಿ ಮತ್ತು ತಹಸಿಲ್ದಾರರು ಕೂಡ ಇದ್ದ ಶಾಂತಿ ಸಮಿತಿ ಪಟ್ಟಣದಲ್ಲೆಲ್ಲಾ ಸುತ್ತಾಡಿ ಸಾಮರಸ್ಯ ಕಾಪಾಡುವಂತೆ ಮನವಿ ಮಾಡಿಕೊಳ್ಳುತ್ತಿದ್ದಾಗಲೆ ಭಜರಂಗ ದಳದ 15 ಕಾರ್ಯಕರ್ತರು ಖಡ್ಗಗಳನ್ನು, ಗದೆಗಳನ್ನು ಹಿಡಿದು ಸುತ್ತಾಡುತ್ತಿದ್ದರು. ಅಲ್ಪಸಂಖ್ಯಾತ ಸಮುದಾಯದವರು ಅವರನ್ನು ಬಂಧಿಸಬೇಕು ಎಂದು ಬೇಡಿಕೆಯಿಟ್ಟರು. ಆದರೆ ಆಡಳಿತ ಅದನ್ನು ಉಪೇಕ್ಷಿಸಿತು. ನಂತರ ಸ್ಥಳೀಯ ಬಿಜೆಪಿ ಮುಖಂಡರು ಈ ವ್ಯಕ್ತಿಗಳಿಂದ ಈ ಖಡ್ಗಗಳನ್ನು ಸ್ವೀಕರಿಸಿದರು. ಹೀಗೆ ಇವರಿಗೆ ಬಹಿರಂಗವಾಗಿಯೇ ಆಡಳಿತದ ಪ್ರೋತ್ಸಾಹವೂ ದೊರೆತಂತಾಯಿತು.

ಉದ್ರೇಕಕಾರಿ ಚಟುವಟಿಕೆ

ಅದೇ ದಿನ ಸಂಜೆ ಹಲವು ಸಂದೇಹಾಸ್ಪದ ವ್ಯಕ್ತಿಗಳು ಒಂದು ಜಾಗದಲ್ಲಿ ಜೀಪುಗಳಿಂದ ಬಂದಿಳಿಯುವುದು ಕಂಡು ಬಂತು. ಸ್ಥಳೀಯ ಸಿಪಿಐ(ಎಂ) ಮುಖಂಡರು ಇದನ್ನು ಜಿಲ್ಲಾ ಆಡಳಿತದ ಗಮನಕ್ಕೆ ತರಲು ಯತ್ನಿಸಿದರು. ಆದರೆ ಅಧಿಕಾರಿಗಳು ಯಾರೂ ಇದನ್ನು ಕೇಳಲು ಸಿದ್ಧರಿರಲಿಲ್ಲ. ಆದರೆ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿಯವರಿಗೆ ಡಿಎಸ್‌ಪಿ ಯವರ ಭೇಟಿಗೆ ಅವಕಾಶ ಸಿಕ್ಕಿತು. ಕೋಮುವಾದಿ ಶಕ್ತಿಗಳು ಪಟ್ಟಣದಲ್ಲಿ ಗಲಭೆ ಎಬ್ಬಿಸಲು ಯೋಜನೆ ಹಾಕಿದ್ದಾರೆ, ಅಕ್ಟೋಬರ್ 2ರಂದು ಸಶಸ್ತ್ರ ಮೆರವಣಿಗೆಯ ಯೋಜನೆಯನ್ನು ಕೂಡಾ ಹಾಕಿದಂತಿದೆ ಎಂದು ತಿಳಿಸಿದರು. ಅಲ್ಪಸಂಖ್ಯಾತರು ಭಯಭೀತರಾಗಿದ್ದರೆ, ಆಡಳಿತದಲ್ಲಿನ ಹಲವರು ಮುಸ್ಲಿಂ ಯವಜನರಿಗೆ ಒಂದು ಪಾಠ ಕಲಿಸಲಿ ಎಂಬ ಮನೋಭಾವ ಹೊಂದಿದಂತೆ ಕಾಣುತ್ತಿತ್ತು. ಆಡಳಿತ ಈ ಮನೋಸ್ಥಿತಿಯಿಂದ ಹೊರಬರಬೇಕು, ಮುಸ್ಲಿಂ ಹಿರಿಯರನ್ನು ಭೇಟಿ ಮಾಡಿ ಅವರಿಗೆ ರಕ್ಷಣೆಯ ಭರವಸೆ ನೀಡಬೇಕು ಎಂದು ಕೇಳಲಾಯಿತು.

ಡಿಎಸ್‌ಪಿಯವರೇನೋ ತಡೆ ಕ್ರಮಗಳನ್ನು ಕೈಗೊಳ್ಳುವುದಾಗಿ ಹೇಳಿದರು. ಆದರೆ ಅಕ್ಟೋಬರ್ 2ರಂದು(ಗಾಂಧಿ ಜಯಂತಿಯ ದಿನ) ಫತೇಗರ್ಹಿ ಎಂಬಲ್ಲಿ "ಹನುಮಾನ್ ಪ್ರತ್ಯಕ್ಷ ದಿನ" ಎಂಬ ಹೆಸರಿನಲ್ಲಿ ಕೆಲವರು ಒಟ್ಟು ಸೇರಿದರು. ಅದೊಂದು ಆ ಪಟ್ಟಣದಲ್ಲೇ ಎತ್ತರದ ಸ್ಥಳ. ಅಲ್ಲಿಂದ ಇಡೀ ದಿನ ಉದ್ರೇಕಕಾರಿ ಭಾಷಣಗಳು ಜೋರಾಗಿ ನಡೆದವು. ಪಟ್ಟಣದ ಹಲವು ಭಾಗಗಳಲ್ಲಿ ಇದು ಕೇಳಿಸುತ್ತಿತ್ತು. ಸೂರ್ಯಾಸ್ತವಾಗುತ್ತಿದ್ದಂತೆ ಈ ಮಂದಿ ನಗರದ ಕಡೆಗೆ ಉದ್ರೇಕಕಾರಿ ಘೋಷಣೆಗಳನ್ನು ಹಾಕುತ್ತಾ ನಡೆದರು. ದಾರಿಯಲ್ಲಿ ಚಾಟ್ ತಿನ್ನುತ್ತಿದ್ದ ಕೆಲವು ಮುಸ್ಲಿಮರನ್ನು ಓಡಿಸಿದರು. ಕೆಲವು ಮುಸ್ಲಿಮರಿಗೆ ಇದರಿಂದ ಸಿಟ್ಟೂ ಬಂತು.

ಈ ನಡುವೆ ವಿಹೆಚ್‌ಪಿಯವರು ಕೆಲವು ಮುಸ್ಲಿಂ ಯುವಕರು ಮೆರವಣಿಗೆಯ ಹಿಂಭಾಗದ ಮೇಲೆ ದಾಳಿ ಮಾಡಲಿದ್ದಾರೆ ಎಂದು ಸುದ್ದಿ ಹರಡಿಸಿದರು. ಕೆಲವು ಸಶಸ್ತ್ರ ಭಜರಂಗ ದಳ ಕಾರ್ಯಕರ್ತರು ಒಂದು ಮುಸ್ಲಿಮರು ಬಹುಸಂಖ್ಯೆಯಲ್ಲಿರುವ ಪ್ರದೇಶಕ್ಕೆ ಹೋಗಿ ತಾಕತ್ತಿದ್ದರೆ ಹೊರಬನ್ನಿ ಎಂದು ಸವಾಲು ಹಾಕಿದರು. ಇದರಿಂದ ನಡೆದ ಘರ್ಷಣೆಯಲ್ಲಿ ನಾಲ್ವರಿಗೆ ಗಾಯಗಳಾದವು. ಒಬ್ಬ ಭಜರಂಗ ದಳದ ಕಾರ್ಯಕರ್ತನನ್ನು ಉದಯಪುರಕ್ಕೆ ಚಿಕಿತ್ಸೆಗೆ ಕಳಿಸಲಾಯಿತು.

ಅದೇ ಗುಜರಾತ್ ಮಾದರಿ

ನಂತರ ನಡೆಯಿತು ವಿಹೆಚ್‌ಪಿ-ಭಜರಂಗ ದಳ ಬಂದ್- ಮರುದಿನ ಅಂದರೆ ಅಕ್ಟೋಬರ್ 3 ರಂದು. ಸುಮಾರು 50 ಲಕ್ಷ ಮೌಲ್ಯದ ಆಸ್ತಿಪಾಸ್ತಿಗಳು ನಾಶವಾದವು. ಶಾಸ್ತ್ರಿ ಕಾಲನಿ ಎಂಬಲ್ಲಿ ಇದ್ದ ಡಾ. ಖುರೇಶಿಯೆಂಬವರ ದಂತ ಚಿಕಿತ್ಸಾಲಯವನ್ನು ಧ್ವಂಸ ಮಾಡಲಾಯಿತು. ಈ ಪಟ್ಟಣದ ಸುತ್ತಲಿರುವ ಗುಡ್ಡಗಳಲ್ಲಿರುವ ಬುಡಕಟ್ಟು ಜನಗಳನ್ನು ವಿಹೆಚ್‌ಪಿ ಮಂದಿ ಕಲೆಹಾಕುತ್ತಿದ್ದಾರೆ ಎಂಬ ಸುದ್ದಿಯೂ ಹರಡಿದೆ.

ಇಲ್ಲಿ ಆತಂಕ ಮೂಡಿಸುವ ಸಂಗತಿಯೆಂದರೆ ಆಡಳಿತ ಗುಜರಾತ್ ಮಾದರಿಯಲ್ಲೇ ವರ್ತಿಸುತ್ತಿದೆ. ಇಂತಹ ಸನ್ನಿವೇಶದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಮಂಡಳಿ ಕೋಮು ಸಾಮರಸ್ಯವನ್ನು ಕಾಪಾಡಿಕೊಳ್ಳಬೇಕು, ಕೋಮುವಾದಿಗಳ ಆಟಗಳನ್ನು ವಿಫಲಗೊಳಿಸಬೇಕು ಎಂದು ಜನರಲ್ಲಿ ಮನವಿ ಮಾಡಿಕೊಂಡಿದೆ. ಅಕ್ಟೋಬರ್ 2-3ರ ಘಟನೆಗಳ ಬಗೆಗೆ ಉಚ್ಚಮಟ್ಟದ ತನಿಖೆಯಾಗಬೇಕು, ಅಪರಾಧಿಗಳನ್ನು ಶಿಕ್ಷಿಸಬೇಕು ಮತ್ತು ಆಸ್ತಿ ಕಳಕೊಂಡವರಿಗೆ ಪೂರ್ಣ ಪರಿಹಾರ ನೀಡಬೇಕು ಹಾಗೂ ಅಲ್ಪಸಂಖ್ಯಾತರಲ್ಲಿ ವಿಶ್ವಾಸ ಮೂಡಿಸಬೇಕು ಎಂದು ಅದು ಆಗ್ರಹಿಸಿದೆ. ಎಲ್ಲಾ ಜಾತ್ಯಾತೀತ ಶಕ್ತಿಗಳನ್ನು ಒಟ್ಟುಗೂಡಿಸಬೇಕು, ಎಲ್ಲಾ ಹಂತಗಳಲ್ಲಿ ಸೌಹಾರ್ದ ಸಮಿತಿಗಳನ್ನು ರಚಿಸಬೇಕು ಎಂದಿರುವ ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಈ ಬೇಡಿಕೆಗಳ ಈಡೇರಿಕೆಗಾಗಿ ಸರಕಾರದ ಮೇಲೆ ಒತ್ತಡ ತರಲು ಜಿಲ್ಲೆಯ ಎಲ್ಲಾ ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳ ಸಭೆ ನಡೆಸಲು ಮುಂದಾಗಿದೆ.



ಭೋಪಾಲ್: ಭಜರಂಗದಳದ ಆಯುಧ ಪೂಜೆ! ವಿಜಯ ದಶಮಿ ರ್‍ಯಾಲಿ! ಏರಿದ ಮತ್ತು!!

ದಕ್ಷಿಣ ಕನ್ನಡ ......

ಪುಟ 6 ರಿಂದ

ದುರದೃಷ್ಟ ಎಂದು ಹೇಳಿದರು.

ಇಲ್ಲಿರುವ ಶಿಕ್ಷಣ ಸಚಿವರಿಬ್ಬರೂ ಕಟ್ಟಾ ಆರೆಸ್ಸೆಸಿಗರು. ಇವರು ಇಡೀ ಶಿಕ್ಷಣವನ್ನು ಕೇಸರೀಕರಣ ಮಾಡಲು ಹೊರಟಿದ್ದಾರೆ. ತಮಗಾದ ಅನ್ಯಾಯವನ್ನು ಖಂಡಿಸಿ ಪ್ರತಿಭಟನೆ ಮಾಡಿದರೆ ಶಿಕ್ಷಣ ಸಂಸ್ಥೆಗಳಿಗೆ ನೋಟೀಸು ಕೊಡುತ್ತಾರೆ. ಕಳೆದ ಬಾರಿ ಮಂತ್ರಿಮಂಡಲ ವಿಸ್ತರಣೆ ಸಂದರ್ಭದಲ್ಲಿ ಮಂತ್ರಿ ಸ್ಥಾನ ಸಿಗದೇ ಇದ್ದಾಗ ಬಂದ್ ಮಾಡಿ ಬಸ್‌ಗಳಿಗೆ ಕಲ್ಲು ತೂರಿ ಪ್ರತಿಭಟಿಸಿದವರ ವಿರುದ್ಧ ಏನು ಕ್ರಮ ಕೈಗೊಂಡಿದ್ದೀರಿ ಎಂದು ಸರ್ಕಾರವನ್ನು ಪ್ರಶ್ನಿಸಿದರು. ಇಂದು ದೇಶ ಉಗ್ರವಾದಿಗಳ, ಮತಾಂಧರ ಸಾಮ್ರಾಜ್ಯ ಶಾಹಿಗಳ ಕೈಗೆ ಸಿಕ್ಕಿ ನಲುಗುತ್ತಿದೆ ಎಂದು ಅವರು, ಇಂದು ಮನೆಯಿಂದ ಹೊರಗೆ ಬಂದರೆ ಮತ್ತೆ ಸುರಕ್ಷಿತವಾಗಿ ಮನೆಗೆ ತಲುಪುವ ಧೈರ್ಯ ಇಲ್ಲ ಎಂದರು.

ರಾಜ್ಯಕ್ಕೆ ಭೇಟಿ ನೀಡಿದ ಎಲ್ಲಾ ಆಯೋಗಗಳು ಕ್ರೈಸ್ತರ ಮೇಲಿನ ದಾಳಿಗೆ ಸರ್ಕಾರವನ್ನೇ ಬೊಟ್ಟು ಮಾಡಿ ತೋರಿಸಿವೆ. ಆದರೆ ಇಂತಹ ದಾಳಿಗೆ ಪ್ರೇರಣೆ ನೀಡಿದ ಮಹೇಂದ್ರಕುಮಾರ್‌ನನ್ನು ಒಂದು ವಾರದ ನಂತರ ಬಂಧನ ನಡೆಸಿದ ಸರ್ಕಾರ, ದೌರ್ಜನ್ಯ ನಡೆಸಿದ ಪೋಲೀಸ್ ಅಧಿಕಾರಿಗಳ ಮೇಲೆ ಯಾವ ಕ್ರಮ ಜರುಗಿಸಿದೆ? ನಿಮಗೆ ನಿಜಯವಾಗಿಯೂ ನಾಚಿಕೆಯಾಗಿದ್ದರೆ ಇವರನ್ನು ಮನೆಗೆ ಅಟ್ಟಿ ಎಂದು ಸರ್ಕಾರಕ್ಕೆ ಸವಾಲು ಹಾಕಿದರು.

ಎಸ್‌ಎಫ್‌ಐ 13ನೇ ಅಖಿಲ ಭಾರತ ಸಮ್ಮೇಳನ

ವಿದ್ಯಾರ್ಥಿ ಚಳುವಳಿಯ ಮೈಲುಗಲ್ಲು

ಬಿ.ರಾಜಶೇಖರಮೂರ್ತಿ

ಒಂದು ಬೃಹತ್ ವಿದ್ಯಾರ್ಥಿ ಚಳುವಳಿಯಾಗಿ, ವಿದ್ಯಾರ್ಥಿ ಸಂಘಟನೆಯಾಗಿ ಪುಟಿದೆದ್ದ ಎಸ್‌ಎಫ್‌ಐ ಸಂಘಟನೆ ಮತ್ತೊಮ್ಮೆ ತನ್ನ ಧ್ಯೇಯೋದ್ದೇಶಗಳನ್ನು ಕುರಿತು ಚಿಂತಿಸಿ ಪ್ರಗತಿಯನ್ನು ಕ್ರೋಢೀಕರಿಸಿಕೊಂಡು ಮುನ್ನಡೆಯುವ ದೃಷ್ಟಿಯಿಂದ ಎಸ್‌ಎಫ್‌ಐ 13ನೇ ಅಖಿಲ ಭಾರತ ಸಮ್ಮೇಳನ ಪಶ್ಚಿಮಬಂಗಾಳದ ರಾಜಧಾನಿ ಕೊಲ್ಕೊತ್ತಾದಲ್ಲಿ ಸೆ. 27-30 ರವರೆಗೆ ಜರುಗಿತು. ಜಾಗತೀಕರಣದ ಸಂದರ್ಭದಲ್ಲಿ ವ್ಯಾಪಕವಾಗಿ ಬೆಳೆಯುತ್ತಿರುವ ಅಸಮಾನ ವ್ಯವಸ್ಥೆಯಲ್ಲಿ, ವಿಜ್ಞಾನ-ತಂತ್ರಜ್ಞಾನ ಮತ್ತು ಜ್ಞಾನವೂ ಬಹುತೇಕ ಜನತೆಯಿಂದ ವಂಚಿತವಾಗುತ್ತಿರುವ ಸಂದರ್ಭವಿದು. ಗುಣಮಟ್ಟದ - ವೃತ್ತಿಪರ ಶಿಕ್ಷಣದ ಸೌಲಭ್ಯಗಳು ಶೇ. 80 ಕ್ಕಿಂತ ಹೆಚ್ಚಿರುವ ಬಡ ವಿದ್ಯಾರ್ಥಿಗಳಿಗೆ ತಲುಪುತ್ತಿಲ್ಲ. ರೈತ-ಕೃಷಿ-ಕೂಲಿಕಾರರು, ಅಸಂಘಟಿತ ಕಾರ್ಮಿಕರು ಆತ್ಮಹತ್ಯೆಯ ಸುಳಿಯಲ್ಲಿ ಸಿಲುಕಿದ್ದಾರೆ. ಇಂತಹ ಪರಿಸ್ಥಿತಿಗೆ ಕಾರಣಗಳನ್ನು ಅರ್ಥಮಾಡಿಕೊಂಡರೆ ಸಾಲದು. ಪ್ರಗತಿಪರ - ಕ್ರಾಂತಿಕಾರಕ ವಿದ್ಯಾರ್ಥಿ ಸಂಘಟನೆಯಾಗಿ ಈ ಅಸಮಾನ ವ್ಯವಸ್ಥೆಯ ಸಮಾಜದ ನಾಶಕ್ಕೆ ಪಣತೊಡಬೇಕಿದೆ. ಈ ಹಿನ್ನೆಲೆಯಲ್ಲಿ 13 ನೇ ಎಸ್‌ಎಫ್‌ಐನ ಅಖಿಲ ಭಾರತ ಸಮ್ಮೇಳನ ಪ್ರತಿನಿಧಿಗಳು ಚರ್ಚಿಸಲು ಕರೆ ನೀಡಿತ್ತು.

ಸಮಾಜದಲ್ಲಿನ ರಾಜಕೀಯ, ಆರ್ಥಿಕ, ಸಾಮಾಜಿಕ ಬದಲಾವಣೆಗಳು ವಿದ್ಯಾರ್ಥಿಗಳ ಸಮುದಾಯದ ಮನೋವೃತ್ತಿಯ ಮೇಲೆ ಪರಿಣಾಮ ಬೀರುತ್ತವೆ. ಸಾಮ್ರಾಜ್ಯಶಾಹಿ ಬಂಡವಾಳಶಾಹಿ-ಭೂಮಾಲಿಕ ಪಾಳೇಗಾರಿ ವ್ಯವಸ್ಥೆಯನ್ನು ಗಟ್ಟಿಗೊಳಿಸಲು ಉದ್ದೇಶಪೂರ್ವಕವಾಗಿ ಶಿಕ್ಷಣ - ಉದ್ಯೋಗದಲ್ಲಿ ತೀವ್ರ ಬಿಕ್ಕಟ್ಟನ್ನು ಪ್ರಾರಂಭಿಸಿ ಅತ್ಯಲ್ಪ ಅವಕಾಶವನ್ನು ಬಂಡವಾಳಶಾಹಿ ಸಮಾಜ ಸೃಷ್ಟಿಸುತ್ತದೆ. ಹೀಗಾಗಿ ವಿದ್ಯಾರ್ಥಿಗಳಲ್ಲಿ ಅನಾರೋಗ್ಯಕರ ಸ್ಪರ್ಧೆಗಳು, ಅವೈಜ್ಞಾನಿಕ ಆಯ್ಕೆಯ ವಿಧಾನಗಳು ವಿದ್ಯಾರ್ಥಿಗಳಲ್ಲಿ ಹತಾಶೆ ಮೂಡಿಸಿ ಆತ್ಮಹತ್ಯೆಯ ಹಾದಿಯನ್ನು ತುಳಿಯುವಂತೆ ಮಾಡುತ್ತವೆ. ಇಂತಹ ಅವಕಾಶವನ್ನು ಬಳಸಿಕೊಂಡು ಟ್ಯೂಶನ್ ಅಥವಾ ಮನೆ ಪಾಠದ ಹಾವಳಿಯು ದೊಡ್ಡ ದಂಧೆಯಾಗಿ ಬೆಳೆದು 10,000ಕೋಟಿಗಿಂತ ಹೆಚ್ಚುವಹಿವಾಟು ನಡೆಸುವ ಹಂತ ತಲುಪಿದೆ. ಇರುವ ಅತ್ಯಲ್ಪ ಅವಕಾಶಕ್ಕಾಗಿ ಪೋಷಕರು ಕೂಡ ಮಕ್ಕಳನ್ನು ಮನೆ ಪಾಠಗಳಿಗೆ ಕಳುಹಿಸಿ ಪ್ರವೇಶ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸುವಂತೆ ಪ್ರೇರೇಪಿಸಲಾಗುತ್ತಿದೆ. ಇದು ಶ್ರೀಮಂತ ಮತ್ತು ಮಧ್ಯಮವರ್ಗದ ವಿದ್ಯಾರ್ಥಿ - ಪೋಷಕರ ಪಾಡಾದರೆ ಬಹುತೇಕ ಬಡ ವಿದ್ಯಾರ್ಥಿಗಳು ಪಾರ್ಟ್ ಟೈಂ ಕೆಲಸಗಳಿಗೆ ಹೋಗಿ ಬರುವ ಆದಾಯದಿಂದ ತಮ್ಮ ಮನೆ ಮತ್ತು ತಮ್ಮ ಶಿಕ್ಷಣದ ವೆಚ್ಚವನ್ನು ಭರಿಸುವಂತಾಗುತ್ತಿದೆ. ಜಾಗತೀಕರಣದ ಕರಿನೆರಳು ಇಂಗ್ಲೀಷ್ ಭಾಷೆಯ ಮೇಲೆ ಭ್ರಮೆ ಸೃಷ್ಟಿಸಿ 'ಇಂಗ್ಲೀಷ್ ಬಲ್ಲವನಿಗೆ ಕೆಲಸ ಗ್ಯಾರಂಟಿ' ಎಂಬಂತಾಗಿ ಹುಚ್ಚು ಅಣಬೆಗಳಂತೆ ಹುಟ್ಟಿಕೊಂಡಿರುವ 'ಸ್ಪೋಕನ್ ಇಂಗ್ಲಿಷ್' ಮತ್ತು 'ಕಂಪ್ಯೂಟರ್ ಕೋರ್ಸ್'ನ ಖಾಸಗಿ ಶಿಕ್ಷಣ ಸಂಸ್ಥೆಗಳು ಅಮಾಯಕ ಮುಗ್ಧ ಬಡ ವಿದ್ಯಾರ್ಥಿಗಳಿಂದ ಹಣವನ್ನು ವಸೂಲಿ ಮಾಡುತ್ತಿವೆ.

ಇಂತಹ ಪರಿಸ್ಥಿತಿಯಲ್ಲಿ ಆಳುವ ಶಕ್ತಿಗಳು ಮಾಧ್ಯಮಗಳ ಮೂಲಕ ಸ್ಪರ್ಧಾತ್ಮಕ ರೀತಿಯಲ್ಲಿ ಅತ್ಯಲ್ಪ ಅವಕಾಶಗಳನ್ನು 'ಜ್ಞಾನ'ದಿಂದ ಮಾತ್ರ ಪಡೆಯಬೇಕು ಎಂದು ವಾದಿಸುತ್ತಿವೆ. ಇಂತಹ ಹೀನಾಯ ಸ್ಥಿತಿಗೆ ರಾಜಕೀಯ ನೀತಿಗಳೇ ಕಾರಣವೆಂಬುದು ಯಾವುದೇ ಕಾರಣಕ್ಕೂ ವಿದ್ಯಾರ್ಥಿ ಸಮುದಾಯಕ್ಕೆ ಗೊತ್ತಾಗದಂತಹ ಸೈದ್ಧಾಂತಿಕ ತಿಳುವಳಿಕೆಯನ್ನು ವಿದ್ಯಾರ್ಥಿ ಸಮುದಾಯದಲ್ಲಿ ತುಂಬಲಾಗುತ್ತಿದೆ. ಕೆಲ ಸ್ವಯಂ ಸೇವಾ ಸಂಸ್ಥೆಗಳು ವಿದ್ಯಾರ್ಥಿಗಳನ್ನು ಆಕರ್ಷಿಸಿ ರಾಜಕೀಯ, ಸಾಮಾಜಿಕ, ಆರ್ಥಿಕ ಪರಿಸ್ಥಿತಿಯ ವಾಸ್ತವತೆಯನ್ನು

ಪುಟ 13ಕ್ಕೆ





'ಉದ್ಯೋಗ ಸೃಷ್ಟಿಗಾಗಿ ಕೈಜೋಡಿಸುತ್ತೇವೆ'

ಇದು ವಿದ್ಯಾರ್ಥಿ ಸಮೂಹದ ಕೂಗು. ಎಲ್ಲಿ ಎಂದಿರಾ? ಎಸ್‌ಎಫ್‌ಐ ನ 13ನೇ ಅಖಿಲ ಭಾರತ ಸಮ್ಮೇಳನದ ಅಂಗವಾಗಿ ಕೊಲ್ಕೋತ್ತಾದಲ್ಲಿ ಆಯೋಜಿಸಿದ್ದ ಬೃಹತ್ ಬಹಿರಂಗ ಸಭೆಯಲ್ಲಿ ಕಾಂ. ಬುದ್ಧದೇವ ಭಟ್ಟಾಚಾರ್ಯರಿಗೆ ಬೆಂಬಲವಾಗಿ ಧ್ವನಿಗೂಡಿಸುತ್ತಾ ಹೇಳಿದ ಮಾತಿದು. ನಮಗೆ ಉದ್ಯೋಗ ಬೇಕು. ನೀವು ಸೃಷ್ಟಿಸುವ ಉದ್ಯೋಗಕ್ಕಾಗಿ ನಾವು ನಿಮ್ಮ ಜೊತೆಗಿದ್ದೇವೆ. ನೀವು ಮುಂದೆ ಹೋಗಿ ಎಂಬ ಬೆಂಬಲಘೋಷ ವಾಕ್ಯಗಳು ಮುಗಿಲು ಮುಟ್ಟುತ್ತಿದ್ದವು. ವಿದ್ಯಾರ್ಥಿಗಳ ಭಾರಿ ಬಹಿರಂಗ ಸಭೆಯನ್ನು ಉದ್ದೇಶಿಸಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯವರು ಮಾತನಾಡುತ್ತಾ ದೇಶದಲ್ಲೇ ಕೃಷಿ ರಂಗದಲ್ಲಿ ಮುಂದಿದ್ದೇವೆ. ಇನ್ನೂ ಕೃಷಿ ವಿಸ್ತರಿಸಲು - ಅಭಿವೃದ್ಧಿ ಪಡಿಸಲು ಭೂಮಿ ಇಲ್ಲ. ಹೊಸ ತಲೆಮಾರಿನ ವಿದ್ಯಾವಂತ ಯುವಕ - ಯುವತಿಯರಿಗೆ ಉದ್ಯೋಗ ನೀಡುವ ಜವಾಬ್ದಾರಿ ನಮ್ಮ ಮೇಲಿದೆ. ಕೃಷಿ, ಶಿಕ್ಷಣ, ಕೈಗಾರಿಕೆ, ಆರೋಗ್ಯ ಮುಂತಾದ ಕ್ಷೇತ್ರಗಳಲ್ಲಿ ಜನತೆಗೆ ರಾಜ್ಯ ಇನ್ನಷ್ಟು ಸಮೃದ್ಧವಾಗಿ ಬೆಳೆಯುವ ಹಂಬಲವಿದೆ. ಅಗತ್ಯವೂ ಇದೆ. ಹೀಗಾಗಿ ನಾವು ಜನತೆಗೆ ಆಶ್ವಾಸನೆಗೆ ನೀಡಿದಂತೆ



ನಮ್ಮ ಮುಂದೆ ಇರುವುದು ಕೈಗಾರಿಕೆಗಳನ್ನು ಸ್ಥಾಪಿಸುವ ಮುಖಾಂತರ ಉದ್ಯೋಗ ಸೃಷ್ಟಿಸಿ ಜನ ಜೀವನದ ಮಟ್ಟವನ್ನು ಸುಧಾರಿಸುವುದು - ಉತ್ತಮಪಡಿಸುವುದಾಗಿದೆ. ಜನಮನ ಗೆದ್ದು ಮುನ್ನಡೆಯುತ್ತಿರುವ ಎಡ ಪಕ್ಷಗಳ ಏಳ್ಗೆ ಸಹಿಸಲಾಗದ ತೃಣಮೂಲ ಕಾಂಗ್ರೆಸ್, ಬಿಜೆಪಿ ಸ್ವಘೋಷಿತ ಮಾವೋವಾದಿ ನಕ್ಸಲೀಯರು ಕುದಿಯುತ್ತಿದ್ದಾರೆ. ಜನತೆಯ ದಿಕ್ಕು ತಪ್ಪಿಸುತ್ತಿದ್ದಾರೆ. ಇಂತಹ ವಂಚನೆಗೆ ಕಿವಿಗೊಡಬೇಡಿಯೆಂದು ಭಾರಿ ಸಂಖ್ಯೆಯಲ್ಲಿ ನೆರೆದಿದ್ದ ವಿದ್ಯಾರ್ಥಿ ಸಮುದಾಯವನ್ನು ಉದ್ದೇಶಿಸಿ ಕಾಂ. ಬುದ್ಧದೇವ ಭಟ್ಟಾಚಾರ್ಯರವರು ಮಾತನಾಡಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಕಾಂ.ಸೀತಾರಾಂ ಯೆಚೂರಿಯವರು ಕೇಂದ್ರ ಸರ್ಕಾರ ಭಾರತ - ಅಮೆರಿಕಾ ಅಣು ಒಪ್ಪಂದ ಕುರಿತ ಅಪಾಯಗಳನ್ನು ವಿವರಿಸಿದರು. ವಿದ್ಯಾರ್ಥಿ ಸಮುದಾಯದ ಜವಾಬ್ದಾರಿಯನ್ನು ಒತ್ತಿಹೇಳಿದರು. ದೂರದ ಊರುಗಳಿಂದ - ಅಕ್ಕಪಕ್ಕದ ಕಾಲೇಜುಗಳಿಂದ ಬಂದ ವಿದ್ಯಾರ್ಥಿ ಸಮುದಾಯದ ಉತ್ಸುಕತೆ, ಬೌದ್ಧಿಕ ತಿಳುವಳಿಕೆ, ರಾಜಕೀಯ ಪರಿಜ್ಞಾನ, ಚುರುಕುತನ ಗಮನಾರ್ಹವಾಗಿತ್ತು.

ಸಾವಿರಾರು ಸಂಖ್ಯೆಯಲ್ಲಿ ಗುಂಪು-ಗುಂಪಾಗಿ ರ್‍ಯಾಲಿಗೆ ಆಗಮಿಸಿದ್ದ ವಿದ್ಯಾರ್ಥಿಗಳು ಕೇವಲ ಸ್ಥಳೀಯ ಶೈಕ್ಷಣಿಕ ಸಮಸ್ಯೆಗಳ ಅಥವಾ ರಾಷ್ಟ್ರದಲ್ಲಿ ಉದ್ಭವಿಸಿರುವ ಸಮಸ್ಯೆಗಳಿಗಷ್ಟೇ ಸೀಮಿತವಾಗಿರಲಿಲ್ಲ. ವಿಶ್ವ ವಿದ್ಯಾರ್ಥಿ ಸಮುದಾಯವೇ ಒಂದಾಗಿ ಶಿಕ್ಷಣದ ವ್ಯಾಪಾರೀಕರಣ - ಖಾಸಗೀಕರಣದ ವಿರುದ್ಧ ಹೋರಾಟಕ್ಕೆ ಮುಂದಾಗಿ, ಅಮೆರಿಕಾ ಸಾಮ್ರಾಜ್ಯಶಾಹಿಗೆ ಧಿಕ್ಕಾರ, ದುಡಿಯುವ ಜನತೆಯ ಐಕ್ಯತೆ ಚಿರಾಯುವಾಗಲಿ ಎಂದು ಕೂಗುತ್ತಿದ್ದರು.

ಕ್ಯೂಬಾದಿಂದ ಬಹಿರಂಗ ಸಭೆಯನ್ನು ಉದ್ದೇಶಿಸಿ ಶುಭ ಹಾರೈಸಿ ಮಾತನಾಡಲು ಆಗಮಿಸಿದ್ದ ಕಾಂ.ರೋಜ ಅಲ್ಸೆಗಾಂಡ್ರೋ ಫ್ರೆಜ್ರಾ ಮತ್ತಿತರ ಸಂಗಾತಿಗಳು ವಿದ್ಯಾರ್ಥಿಸಮುದಾಯದ ಒಗ್ಗಟ್ಟನ್ನು ನೋಡಿ ನಾವು ನಿಮ್ಮ ಜೊತೆ ಇದ್ದೇವೆಂದರು. 'ಅಮೆರಿಕಾದ ನೀತಿಗಳಿಗೆ ಸೆಡ್ಡು ಹೊಡೆಯಿರಿ, ಕ್ಯೂಬಾದ ಬೆಂಬಲಕ್ಕೆ ಎಸ್‌ಎಫ್‌ಐ ಸದಾ ಸಿದ್ಧ' ಎಂದು ಘೋಷಿಸಲಾಯಿತು. ಇದೇ ಸಂದರ್ಭದಲ್ಲಿ ಅಮೆರಿಕಾ ದೇಶ ಅಕ್ರಮವಾಗಿ ಬಂಧನದಲ್ಲಿರಿಸಿರುವ ಐವರು ಕ್ಯೂಬಾದ ನಾಯಕರನ್ನು ತಕ್ಷಣ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಲಾಯಿತು.

○

ಗಣಿ ಲೂಟಿ
ಹುಲಿ ಬಿಟ್ಟು ಇಲಿ ಹಿಡಿದರು

ಯು.ಬಸವರಾಜು

ಹೈಕೋರ್ಟ್ ರಾಜ್ಯದಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆ ತಡೆಯಲು ರಾಜ್ಯ ಸರ್ಕಾರಕ್ಕೆ ಆದೇಶಿಸಿತ್ತು. ಇದರಿಂದ ರಾಜ್ಯದ ಅದರಲ್ಲೂ ಬಳ್ಳಾರಿಯ ಜನತೆ ಏನಾದರೂ ಕ್ರಮವಾಗಿ ಅದರ ಹಾವಳಿಯಿಂದ ಸ್ವಲ್ಪವಾದರೂ ನೆಮ್ಮದಿ ಸಿಗುವುದೆಂದು ನಿರೀಕ್ಷಿಸಿದ್ದರು. ಆದರೆ....





ಕರ್ನಾಟಕ ರಾಜ್ಯ ಸರ್ಕಾರದೊಳಗಡೆ ಹಾಗೂ ರಾಜ್ಯದ ಭಾರತೀಯ ಜನತಾ ಪಕ್ಷದೊಳಗಡೆ ಬಳ್ಳಾರಿಯ ಜನಾರ್ಧರ ರೆಡ್ಡಿಯ ಪಕ್ಷವೇ ಪ್ರಮುಖ ಪಾತ್ರ ವಹಿಸುತ್ತಿರುವುದು ರಾಜ್ಯದ ಜನತೆಯ ಗಮನಕ್ಕಿದೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಒಂದು ಸ್ಥಾನ ಬಿಟ್ಟು ಉಳಿದ ಎಂಟು ಸ್ಥಾನಗಳನ್ನು ಬಳ್ಳಾರಿ ಜಿಲ್ಲೆಯಲ್ಲಿ ಬಿಜೆಪಿಯನ್ನು ಗೆಲ್ಲಿಸಿದುದು ರಾಜ್ಯದಾದ್ಯಂತ ಗೆದ್ದು ಪ್ರಥಮ ಸ್ಥಾನ ಪಡೆಯಲು ನೆರವು ನೀಡಿದುದು ಮಾತ್ರವಲ್ಲ ರಾಜ್ಯದಲ್ಲಿ ಬಿಜೆಪಿ ಅಧಿಕಾರ ಹಿಡಿಯಲು ಬೇಕಾದ ಮಾಂತ್ರಿಕ ಸಂಖ್ಯೆ ಗಳಿಸಲು ಪಕ್ಷೇತರ ಶಾಸಕರನ್ನು ಒಗ್ಗೂಡಿಸಿ ಸರ್ಕಾರ ರಚನೆಗೆ ಮುಂದಾದುದು ಎಲ್ಲವೂ ಬಳ್ಳಾರಿಯ ಜನಾರ್ಧನ ರೆಡ್ಡಿಯ ಅನಿಸಿಕೆ ಹಾಗೂ



ಯೋಜನೆಯಂತೆ ಮುನ್ನಡೆದು, ಇನ್ನೇನು ರಾಜ್ಯದ ಉಪಮುಖ್ಯಮಂತ್ರಿ ಸ್ಥಾನ ಕೈಗೆಟಕುವ ಹಂತಕ್ಕೆ ತಲುಪಿ, ದೂರವಾದರೂ ತಮ್ಮ ಸಹೋದರ ಹಾಗೂ ಜೊತೆಗಾರನ ಜೊತೆ ಸೇರಿ ಸಚಿವರಾದುದು, ಹಾಗೇ ಸರ್ಕಾರದ ಸ್ಥಿರತೆ ಮತ್ತು ಪಕ್ಷೇತರರ ಬೆದರಿಕೆಗೆ ತಡೆ ಒಡ್ಡಲು 'ಆಪರೇಷನ್ ಕಮಲ'ದ ರೂವಾರಿಗಳಾದುದು.... ಎಲ್ಲವೂ ಬಳ್ಳಾರಿ ಜನಾರ್ಧನ ರೆಡ್ಡಿಯವರ ಪಕ್ಷದ ಮುನ್ನಡೆಯನ್ನು ಸಾರುತ್ತಿದ್ದರೇ... ಬಳ್ಳಾರಿ ಜಿಲ್ಲೆಯಲ್ಲಿ ಈಚೆಗಿನ ಘಟನೆಗಳು ಅವರ ಮುನ್ನಡೆಗೆ ಹಿನ್ನಟಕಾಗಿ, ಜನಪ್ರಿಯತೆಗೆ ಅಡ್ಡಿಯಾಗಿವೆ.

ಜನಾರ್ಧನ ರೆಡ್ಡಿಯವರಿಗೆ ತಮ್ಮ ಮೇಲಿನ ಎರಡು ಆರೋಪಗಳಿಗೆ ರಾಜ್ಯದ ಜನತೆಗೆ ಉತ್ತರಿಸಬೇಕಾಗಿದೆ. ಅವರಒಡೆತನದಲ್ಲಿರುವ 'ಓಬಳಾಪುರಂ ಮೈನ್ಸ್ ಕಂಪನಿ'ಯ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿ ಕರ್ನಾಟಕದ ಪ್ರದೇಶದೊಳಗೆ ಆಂಧ್ರದ ಗಡಿಯನ್ನೂ ವಿಸ್ತರಿಸಿ, ಕರ್ನಾಟಕದ ಗಡಿಯನ್ನು ಒತ್ತುವರಿ ಮಾಡಲಾಗಿದೆಯೆಂಬ ಗುರುತರ ಆರೋಪ ಒಂದಾದರೇ, ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿದ ದೊಡ್ಡ ಗಣಿ ಪೊಲೀಸರನ್ನು ಅಧಿಕೃತತೆಯನ್ನು



ಬೇಡುತ್ತಲೇ ಅನಧಿಕೃತ ಗಣಿಗಾರಿಕೆಯಲ್ಲಿ ತೊಡಗಿದ್ದ ಪಾಪಾದ ರೈತರ ಮೇಲೆ ದಾಳಿ ನಡೆಸಿದರೆಂಬುದು ಮತ್ತೊಂದು ಆರೋಪ.

ಗುಡ್ಡ ಕಡಿದು ಇಲಿ ಹಿಡಿದರು....?

ಈಚೆಗೆ ರಾಜ್ಯದ ಹೈಕೋರ್ಟ್ ರಾಜ್ಯದಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆ ತಡೆಯಲು ರಾಜ್ಯ ಸರ್ಕಾರಕ್ಕೆ ಆದೇಶಿಸಿತ್ತು. ಇದರಿಂದ ರಾಜ್ಯದ ಅದರಲ್ಲೂ ಬಳ್ಳಾರಿಯ ಜನತೆ ಏನಾದರೂ ಕ್ರಮವಾಗಿ ಅದರ ಹಾವಳಿಯಿಂದ ಸ್ವಲ್ಪವಾದರೂ ನೆಮ್ಮದಿ ಸಿಗುವುದೆಂದು ನಿರೀಕ್ಷಿಸಿದ್ದರು. ಆರಂಭದಲ್ಲಿ ಸ್ವಲ್ಪ ವಿಳಂಬವಾದರೂ ಜಿಲ್ಲೆಯ ಅಧಿಕಾರಿಗಳ ಎರಡು ತಂಡಗಳನ್ನು ರಚಿಸಿ ಸಚಿವ ಶ್ರೀ ಜನಾರ್ಧನ ರೆಡ್ಡಿಯವರು ಅಕ್ರಮ ಗಣಿಗಾರಿಕೆ ತಡೆಯಲು ಕ್ರಮವಹಿಸಿದರು. ಇದರಂತೆ ಅಧಿಕಾರಿಗಳ ತಂಡ ಎರಡು ಮೂರು ದಿನಗಳ ಹಗಲು ರಾತ್ರಿಯೆನ್ನದೇ ಬೆಟ್ಟ ಗುಡ್ಡಗಾಡು, ಕಾಡು-ಮೇಡು ಅಲೆದು ಸುಮಾರು 5 ಲಕ್ಷಕ್ಕೂ ಅಧಿಕ ಟನ್‌ಗಳಷ್ಟು ಕಬ್ಬಿಣದ ಅದಿರನ್ನು ವಶಪಡಿಸಿಕೊಂಡುದು, ಪತ್ರಿಕೆಗಳ ಮೂಲಕನಾಡಿನ ಬೆಳಕಿಗೆ ಬಂದಿತು. ಈ ದಿನಗಳಲ್ಲಿ ಅಧಿಕ ವಾಹನಗಳ ವಹಿವಾಟು, ಸಾಗಾಟ ದೊಡ್ಡಪ್ರಮಾಣದಲ್ಲಿ ನಿರ್ಬಂಧಿಸಲ್ಪಟ್ಟಿತು. ಇದರಿಂದ ಜನತೆಗೆ ನಿರುಮ್ಮಳವೆನಿಸುದುದು ನಿಜವೇ. ನೋಡಿದರೆ ವಶಪಡಿಸಿಕೊಂಡ ಅದಿರು ಅಕ್ರಮ ಗಣಿಗಾರಿಕೆಯುದಲ್ಲ. ಅನಧಿಕೃತ ಗಣಿಗಾರಿಕೆಯದಾಗಿತ್ತು. ಗಣಿಗಾರಿಕೆಯ ಚಟುವಟಿಕೆ ವ್ಯಾಪಕಗೊಂಡು ನಡೆಯುತ್ತಿರುವಾಗ, ಬೆಟ್ಟದ ಬುಡದ ಅಜುಬಾಜಿನಲ್ಲಿರುವ ಕೃಷಿಯೋಗ್ಯ ಜಮೀನುಗಳು ವಿಪರೀತ ಕಬ್ಬಿಣದ ಅದಿರಿನ ವಹಿವಾಟಿನ ಧೂಳಿನಿಂದ ಕೃಷಿಗೆ ಅಯೋಗ್ಯವಾಗಿ ಬಂಜರಾಗಿವೆ. ಈ ಜಮೀನುಗಳಲ್ಲಿ ಸಾರ್ವಜನಿಕ ಸಂಸ್ಥೆ ಎಂಎಂಟಿಸಿ ಗುರುತಿಸಿದಂತೆ ಉಪಯುಕ್ತವಲ್ಲವೆಂದು ತಿರಸ್ಕರಿಸಲ್ಪಟ್ಟ ಕಡಿಮೆ ಗುಣಮಟ್ಟದ (30 ಶೇ. ನಿಂದ 45 ಶೇ.)ಸಿಗುವುದೆಂದು ತಿಳಿದ ರೈತರು, ಉತ್ಕೃಷ್ಟ ಗುಣಮಟ್ಟದ (60-65) ಅದಿರಿನ ಬೆಲೆ ಜಾಗತಿಕ ಮಾರುಕಟ್ಟೆಯಲ್ಲಿ ಪ್ರತಿ ಟನ್‌ಗೆ 8000ರೂ. ಬೆಲೆ ಬಾಳುತ್ತಿದ್ದು, ಅಂತಹ ದುಬಾರಿ ಅದಿರನ್ನು ಪಡೆದು ಮೆದು ಕಬ್ಬಿಣ ತಯಾರಿಸಲು ತೊಂದರೆ ಅನುಭವಿಸುತ್ತಿದ್ದ ಮೆದು ಕಬ್ಬಿಣದ ಕೈಗಾರಿಕೆಗಳು ಕಡಿಮೆ ಬೆಲೆಗೆ ಸಿಗುವ,



ಕಡಿಮೆ ಗುಣಮಟ್ಟದ ಅಷ್ಟೇನೂ ಉಪಯುಕ್ತವಲ್ಲದ ಈ ಅದಿರಿಗೆ ಬೇಡಿಕೆ ಮಂಡಿಸಿದಾಗ, ನಿರುಪಯುಕ್ತವೆಂದು ತಲೆಯ ಮೇಲೆ ಕೈಹೊತ್ತು ಕುಳಿತಿದ್ದ ರೈತರ ತಲೆಯೊಳಗೆ ಮಿಂಚಿನ ಸಂಚಾರವಾದಂತಾಗಿ ತಮ್ಮ ಪಟ್ಟಾ ಜಮೀನುಗಳಲ್ಲಿ 3 ಅಡಿ ಆಳದಲ್ಲಿ ಸಿಗುವ ಅದಿರನ್ನು ತೆಗೆಯಲು ಮುಂದಾದರು. ಇದಕ್ಕೂ ಸರ್ಕಾರದ ಪರವಾನಗಿ ಪಡೆಯಲು ನಿರಂತರ ಕೇಳುತ್ತಾ ಬಂದರು. ಹಣವಿಲ್ಲದ ಕೆಲ ಸಣ್ಣ ಮಧ್ಯಮವರ್ತಿ ವ್ಯಾಪಾರಿಗಳಿಗೆ ಗುತ್ತಿಗೆ ನೀಡಿ, ಜೀವನದಲ್ಲಿ ಚೈತನ್ಯ ಚಿಲುಮೆ ಕಂಡುಕೊಂಡರು. ಈ ನೆಲದಲ್ಲಿ ಉದ್ಯೋಗ ಮತ್ತು ಲಾಭವನ್ನು ಕಂಡುಕೊಂಡ ವಿದ್ಯಾವಂತ ಯುವಕರು ಲಕ್ಷಾಂತರ, ಕೆಲವರು ಕೋಟಿ ಹಣವನ್ನು ಸಾಲ ಮಾಡಿ ಹೂಡಿ, ಅದಿರು ಹೊರ ತೆಗೆಯಲು, ಸಾಗಾಟದ ವಹಿವಾಟಿನಲ್ಲಿ ತೊಡಗಿಸಿಕೊಂಡರು. ಈ ವಹಿವಾಟಿನಲ್ಲಿ ತೊಡಗಿಕೊಂಡ ರೈತರು, ಕಾರ್ಮಿಕರು, ನಿರುದ್ಯೋಗಿಯುವಕರು ಸಣ್ಣ ವ್ಯಾಪಾರಿಗಳು ಸಾವಿರಾರು ಸಂಖ್ಯೆಯಲ್ಲಿ ತೊಡಗಿದವರು ಸಂಘಟಿತರಾಗಿ ಪರವಾನಗಿಗಾಗಿ ಕಳೆದ 4-5 ವರ್ಷಗಳಿಂದ ಹೋರಾಡುತ್ತಲೇ ಬಂದಿದ್ದರೂ. ಈ ನಡುವೆ ಕೆಲವರಿಗೆ ಕೆಲವು ಕಾಲ ಪರವಾನಗಿ ನೀಡಿದ್ದು ಇತ್ತು.

ಒಟ್ಟಾರೆ ಹತ್ತಾರು ಸಾವಿರ ರೈತರು, ಕೂಲಿಕಾರರು ನಿರುದ್ಯೋಗಿ ಯುವಕರು ಸಣ್ಣ ವ್ಯಾಪಾರಿಗರಿಗೆ ಉದ್ಯೋಗ ನೀಡುವ ಸಾವಿರಾರು ಕಾರ್ಮಿಕ ಕುಟುಂಬಗಳಿಗೆ ಆಧಾರವಾಗಿದ್ದ ಕಬ್ಬಿಣ ಮೆದುಕಬ್ಬಿಣ ಉತ್ಪನ್ನದ ಕೈಗಾರಿಕೆಗಳ ಉಸಿರಾಟಕ್ಕೆ ಕಾರಣವಾಗಿದ್ದುದು ಏನಾದರೂ ಗಣಿಗಾರಿಕೆಯಲ್ಲಿ ಇದ್ದರೇ ಇದೊಂದು ಅನಧಿಕೃತ ಗಣಿಗಾರಿಕೆ ಅಥವಾ ಪಟ್ಟಾ ಜಮೀನು ಗಳಲ್ಲಿನ ಗಣಿಗಾರಿಕೆ ಮಾತ್ರವೇ ಎಂದು ಘಂಟಾಘೋಷವಾಗಿ ಹೇಳಬಹುದಾಗಿತ್ತು.

ವಿಶೇಷವೆಂದರೆ, ಈ ರೀತಿಯ ವ್ಯವಹಾರದಲ್ಲಿ ತೊಡಗಿಸಿಕೊಂಡ ಹೆಚ್ಚಿನವರು ಶೇ. 70 ಎನ್ನಿ, ಎಲ್ಲರೂ ಬಿಜೆಪಿಯ 2-3ನೇ ಹಂತದ ಮರಿ ನಾಯಕರುಗಳೇ, ಅವರ ಸಹವರ್ತಿಗಳೇ ಆಗಿದ್ದರು.

ಅಧಿಕಾರಿಗಳ ಎರಡು ತಂಡಗಳು ದಾಳಿ ನಡೆಸಿದ ಪ್ರಕರಣದಿಂದ ಒಂದೆಡೆ ಗಣಿಗಾರಿಕೆಯಿಂದ ಬಂಜರಾಗಿಸಿಕೊಂಡಿದ್ದ ಭೂಮಿಯ ರೈತರು ಮತ್ತೊಂದೆಡೆ ಅನಧಿಕೃತ ಗಣಿಗಾರಿಕೆಯಲ್ಲಿ ತೊಡಗಿಕೊಳ್ಳಲು ಸಾಲ ಮಾಡಿ ಲಕ್ಷಾಂತರ ಹಣ ಹಾಕಿದ್ದ ನಿರುದ್ಯೋಗಿ ಯುವಕರು ಹಾಗೂ ಮಧ್ಯವರ್ತಿಗಳು, ಸಣ್ಣ ವ್ಯಾಪಾರಿಗಳು ನರಳುವಂತಾಯಿತು. ತಮಗೆ ಪರವಾನಿಗೆ ಕೊಡಿಸಿ ಜನಾರ್ಧನ ರೆಡ್ಡಿಯವರು ನೆರವಾಗಬಹುದೆಂದು ಕೊಂಡಿದ್ದ ಈ ಜನತೆಗೆ ಅವರು ಸಂಘಟಿಸಿದ ಈ ದಾಳಿಯು ಅವರನ್ನು ಕ್ರೋಧಗೊಳ್ಳುವಂತೆ ಮಾಡಿತು.

ನಿಜವಾಗಿಯೂ ಭಾರಿ ಪ್ರಮಾಣದಲ್ಲಿ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿ ಸಂಪನ್ಮೂಲ ಲೂಟಿ ಮಾಡುತ್ತಾ, ಜಿಲ್ಲೆಗೆ ತೊಂದರೆ ನೀಡುತ್ತಿರುವ ದೊಡ್ಡ




ಗಣಿ ಮಾಲೀಕರ ಮೇಲೆ ದಾಳಿ ಮಾಡದೇ, ತಮ್ಮ ಉದ್ಯೋಗ ಮೇಲೆ, ಬದುಕಿನ ಮೇಲೆ ದಾಳಿ ನಡೆಸಿದುದು ಅವರು ಸಂಘಟಿತರಾಗಿ ಹೋರಾಟಕ್ಕಿಳಿಯುವಂತೆ ಮಾಡಿತು.

ಅಧಿಕಾರಿಗಳು ವಶಪಡಿಸಿಕೊಂಡು ತರಾತುರಿಯಲ್ಲಿ 60-70 ಕೋಟಿ ರೂ ಮೌಲ್ಯದ ಅದಿರನ್ನು ಕೇವಲ 25 ಕೋಟಿ ರೂ.ಗಳಿಗೆ ಹರಾಜು ಹಾಕಿದುದು, ಹರಾಜಿನ ಪ್ರಕ್ರಿಯೆಯು ಪಾರದರ್ಶಕವಾಗಿಲ್ಲದಿರುವುದು, ದಂಡ ಹಾಕಿ ತಮಗೇ ನೀಡಬೇಕೆಂದು ಕೋರಿದರೂ

ಪುಟ 15ಕ್ಕೆ



■ ಕೆ.ನೀಲಾ



ಎಲ್ಲೆಂದರಲ್ಲಿ ಬಾಂಬುಗಳ ಸಿಡಿತ, ದೇಶದ ತುಂಬೆಲ್ಲಾ ಚರ್ಚ್‌ಗಳ ಮೇಲೆ ದಾಳಿ, ತಮ್ಮದೇ ನೆಲದಲ್ಲಿ ಬದುಕನ್ನು ಕೈಯಲ್ಲಿ ಹಿಡಿದುಕೊಳ್ಳುವ ಭಯ. ಆದರೆ ನಮ್ಮ ನಡುವಿನ ಸ್ನೇಹ, ಸೌಹಾರ್ದವನ್ನು ಯಾರಿಂದಲೂ ಕೆಡವಲು ಸಾಧ್ಯವಿಲ್ಲ. ಮನುಷ್ಯತ್ವದ ಬಳ್ಳಿ ನಮ್ಮ ಸುತ್ತ ಬೆಳೆಯುತ್ತಲಿವೆ.

'ಮನುಷ್ಯತ್ವದ ಬಳ್ಳಿ ಬೆಳೆಯುತ್ತಲಿವೆ'

ಅಕ್ಟೋಬರ್ ಒಂದು. ರಾತ್ರಿ ಜಾರುವ ಹೊತ್ತಲ್ಲಿ ನಾವೆಲ್ಲ ಮುಗಿಲ ಕಡೆಗೆ ಮುಖ ಮಾಡಿದ್ದೇವು. ಚಂದಿರನ ತುಣುಕೊಂದು ಆಗಸದ ಅಂಗಳದಲ್ಲಿ ಬೆಳಕ ಚೆಲ್ಲಿತು. ಮನೆ ಎದುರಿನ ಶೋಯಬ್ 'ಓ ನಾಳೆ ಹಬ್ಬ' ಎಂದು ಕುಣಿದಾಡಿದ. ಹೌದು. ರಂಜಾನ್ ಹಬ್ಬವದು. ಸುರಕುಂಬಾ (ಖೀರ್)ದ ಸವಿ ಬಲ್ಲವರಿಗೆ ಗೊತ್ತು ಅದರ ಮಹಿಮೆ. ಶಕ್ತಿಯುತ ಒಣ ಹಣ್ಣುಗಳ ಚೂರುಗಳು ತುಪ್ಪದೊಂದಿಗೆ ಬೆರೆತು ಗಟ್ಟಿ ಹಾಲಿನ ಮೇಲೆ ತೇಲುತ್ತಿರುತ್ತವೆ. ನುಣುಪು ಶ್ಯಾವಿಗೆ ಎಸಳು ಹಿತವಾಗಿ ಬೆರೆತ ಸುರಕುಂಬಾದ ರುಚಿ ಬೇಕೆಂದರೆ ಮುಸಲ್ಮಾನ ಬಂಧುಗಳೊಂದಿಗೆ ಸಾಂಸ್ಕೃತಿಕ ಸೌಹಾರ್ದ ಹೆಣೆಯಲೇಬೇಕು. ಹಿಂದೂಗಳ ದೀಪಾವಳಿ ಮತ್ತು ಉತ್ತರಕರ್ನಾಟಕದ ಎಳ್ಳಮವಾಸ್ಯೆಯುಷ್ಟೇ ವೈವಿಧ್ಯತೆಯಿಂದ ಮತ್ತು ಆಕರ್ಷಣೆಯಿಂದ ಕೂಡಿದ ಸಂಭ್ರಮದ ಹಬ್ಬವಿದು. ಕ್ರಿಶ್ಚಿಯನ್ನರ ಕ್ರಿಸ್‌ಮಸ್‌ನಂತೆಯೂ. ಅಪಾಯ ಉಂಟು ಮಾಡುವ ಅವೈಜ್ಞಾನಿಕತೆಯಿಲ್ಲದ ಮತ್ತು ಮೌಢ್ಯತೆಯಿಲ್ಲದ ಹಬ್ಬಗಳು ಜನಬದುಕಿಗೆ ಖುಷಿ ಕೊಡುತ್ತವೆ. ಎಲ್ಲ ಧರ್ಮದೊಳಗಿನ ಮೂಲಭೂತವಾದಿಗಳು ಜನರ ಮನಸ್ಸುಗಳ ನಡುವೆ ಗೋಡೆಗಳೆಬ್ಬಿಸುವಾಗ ಜನಪದರ ಮೂಲದಿಂದ ಬಂದ ಮತ್ತು ಜೀವನ್ಮುಖಿಯಾದ ಹಬ್ಬಗಳು ಇಂದಿಗೂ ಆಚರಿಸಲ್ಪಡುತ್ತಿವೆ. ಮತ್ತು ಇಂತಹ ಸಾಂಸ್ಕೃತಿಕ ಸನಿಹ, ತರುವ ಪರಸ್ಪರ ಕೊಡು ಕೊಳ್ಳುವಿಕೆಗೆ ಸ್ಫೂರ್ತಿಯಾಗುವ ಹಬ್ಬಗಳು ಸೌಹಾರ್ದ ನೆಲೆಯಲ್ಲಿ ನಡೆದುಕೊಂಡು ಬಂದಿವೆ. ಕೃಷಿ ಪ್ರಧಾನ ಹಬ್ಬಗಳು ಇಂದಿಗೂ ನಮ್ಮಲ್ಲಿ ಸ್ನೇಹ ಬಾಂಧವ್ಯದ ಸ್ವರೂಪದಲ್ಲಿ ಜೀವಂತವಾಗಿವೆ. ಆದರೆ ಈ ಆಚರಣೆ ಮತ್ತು ನಂಬಿಕೆಗಳನ್ನು ತಮ್ಮ ದ್ವೇಷದ ಸಂಸ್ಕೃತಿ ಹಬ್ಬಿಸಲು ಕೋಮುವಾದಿ ಮೂಲಭೂತವಾದಿಗಳು ಅಸ್ತ್ರವಾಗಿಸಿಕೊಳ್ಳುತ್ತಿರುವ ಅಪಾಯವನ್ನು ಮನಗಾಣಬೇಕಿದೆ. ಆದ್ದರಿಂದಲೇ ಪರ್ಯಾಯ ಮಾನವೀಯ ಸಂಸ್ಕೃತಿಯನ್ನು ಪ್ರಜ್ಞಾಪೂರ್ವಕವಾಗಿ ಬೆಳೆಸಬೇಕಾಗುತ್ತದೆ.



ಮಹಿಳೆಯರ ಇಫ್ತಿಹಾರ ಕೂಟ

ಗೆಳತಿ ಲಕ್ಷ್ಮೀಯು ಸೊಂಡೂರಿನ ಜನವಾದಿ ಮತ್ತು ದೇವದಾಸಿ ಸಂಸ್ಥೆಯವರು ಆಯೋಜಿಸಿದ ವಿಶಿಷ್ಟ ಕಾರ್ಯಕ್ರಮದ ವರದಿ ಮಾಡಿದಳು. ರಂಜಾನ ದಿನಗಳಲ್ಲಿ ಮುಸ್ಲಿಂ ಮಹಿಳೆಯರಿಗಾಗಿ ಮುಸ್ಲೀಮೇತರ ಮಹಿಳೆಯರು ಸಾಯಂಕಾಲದ 'ಇಫ್ತಿಹಾರ ಕೂಟ' ಏರ್ಪಡಿಸಿದರು ಎಂದು. ಸುಮಾರು 300 ಮಹಿಳೆಯರು ಬಲು ಉಲ್ಲಾಸದಲ್ಲಿ ಭಾಗಿಯಾಗಿದ್ದು ಕೇಳಿ ನಮ್ಮೆದೆಯಲ್ಲಿ ಖುಷಿಯ ಮೊಗ್ಗರಳಿದ್ದು ಖರೆ. ಅಂಥದೇ ವರದಿಗಳು ಬೀದರ ಜಿಲ್ಲೆಯ ಹುಮನಾಬಾದ ತಾಲ್ಲೂಕಿನಿಂದ ಮೀನಾಕುಮಾರಿ ಮತ್ತು ಅಂಬುಬಾಯಿ ವರದಿ ಮಾಡಿದರು. ಸೌಹಾರ್ದತೆಗೆ ಹೆಸರಾದ ಬಿಜಾಪುರದಿಂದಲೂ ಇಂಥದೇ ಸುದ್ದಿ.

ಆತಂಕಗಳ ಮಧ್ಯೆ

ಒಂದೆಡೆ ಸಾಮ್ರಾಜ್ಯಶಾಹಿಗಳ ಪ್ರಚೋದನೆಯಿಂದ ಎಲ್ಲೆಂದರಲ್ಲಿ ಬಾಂಬುಗಳು ಸಿಡಿದು ಸಾವಿನ ಜೋಕಾಲಿಯಾಡುತ್ತಿವೆ. ಮತ್ತೊಂದೆಡೆ ಭಜರಂಗದಳ ಮತ್ತದರ ಅಂಗ ಸಂಸ್ಥೆಗಳು ದೇಶಾದ್ಯಂತ ಕ್ರಿಶ್ಚಿಯನ್ ಸಮುದಾಯದ ಮೇಲೆ ಬಹಿರಂಗ ಧಾಳಿ, ಕೊಲೆ, ಮಹಿಳೆಯರ ಮೇಲೆ ಬಲಾತ್ಕಾರ ನಡೆಸಿವೆ. ಚರ್ಚುಗಳನ್ನು ಪುಡಿಗುಟ್ಟಿ 'ತಾಖತ್ತಿದ್ದರೆ ನಿಷೇಧ ಮಾಡಿ' ಎಂದು ಸವಾಲೆಸೆದು ಅಟ್ಟಹಾಸಗೈಯ್ಯುತ್ತಿವೆ. ಇವೆಲ್ಲ ಫ್ಯಾಸಿಸ್ಟ್ ಲಕ್ಷಣಗಳಲ್ಲವೇನು? ಅಲ್ಪಸಂಖ್ಯಾತರು ಈ ವಿಶಾಲ ಭಾರತದ ತುಂಡು ನೆಲದಂಚಿನ ಶಿಬಿರಗಳಲ್ಲಿ ಹಿಡಿಯಷ್ಟಾಗಿ ಮುದುಡಿ ದಿನಗಳೆವ ಸ್ಥಿತಿ ಬಂದಿದೆ. ಅವರ ಕಣ್ಣಲ್ಲಿ ಭಯ ಮನದಲ್ಲಿ ತಲ್ಲಣ ಸ್ಥಾಯಿಯಾಗುತ್ತಿದೆ. ತಮ್ಮದೇ ನೆಲದಲ್ಲಿ ಅನಾಥರಾಗುವ ಆತಂಕದಿಂದ ಕುಸಿಯುತ್ತಿದ್ದಾರೆ. ರಕ್ಷಣೆಯ ಹೆಸರಿನ ಕುಟುಂಬದ ಚೌಕಟ್ಟಿನಲ್ಲಿಯೇ ಮಹಿಳೆಯರ ಅಸ್ತಿತ್ವ ಹೊಸಕಿ ಹಾಕಿದಂತೆ ದಲಿತ ಮತ್ತು ಅಲ್ಪಸಂಖ್ಯಾತರನ್ನು ಹಿಂಸಿಸಲಾಗುತ್ತಿದೆ.

ಮುಂಜಾನೆ ನಮ್ಮ ಪಕ್ಷದ ಹಿರಿಯ ಮುಖಂಡರಾಗಿದ್ದ ಕಾ. ಅಬ್ದುಲ್‌ಖಾದರ್ ಹನ್ನುಭಾಯಿಯವರ ಮಗ ರೆಹೆಮಾನ್‌ಭಾಯಿ ಫೋನು ಮಾಡಿದರು. 'ಬೆಹೆನ್ ನೀವೆಲ್ಲ ಮಧ್ಯಾಹ್ನದೂಟಕ್ಕೆ ಬರಬೇಕು' ಅವರ ಕಂಠದಲ್ಲಿ ತುಂಬ ಕಾಳಜಿಯಿತ್ತು. 'ನಿಮ್ಮ ಮನೆಯ ಸುರಕುಂಬಾ ಕುಡದೇ ಮುಂದಿನ ಮನೆಗೆ ಪಯಣ ಭೈಯ್ಯಾ' ಅಂದೆ. 'ಉಣ್ಣುವವರ ಹೆಸರು ಈ ಅನ್ನದ ಮೇಲೆ ಅಲ್ಲಾನ ಕೃಪೆಯಿಂದ ಬರೆಯಲ್ಪಟ್ಟಿದೆ' ಎಂದು ಬರೆದ 'ದಸ್ತರ್‌ಖಾನಾ'ದ ಮೇಲೆ ಅಡಿಗೆಯಿಟ್ಟು ರೆಹೆಮಾನ ತಾಯಿ ಮಮತೆಯಿಂದ ಬಡಿಸಿದರು. ಬೀಇ ಓದುತ್ತಿರುವ ಮೊಮ್ಮಗಳನ್ನು ಪ್ರೀತಿಯಿಂದ ಪರಿಚಯಿಸಿದರು.

ಹಿಂದಿನ ದಿನ ಸೋದರ ಮೆಹೆರಾಜನ ಹೆಂಡತಿ ವೈನಿ ಆಲಿಯಾ ಮಗಳಿಗೂ ನಮಗೂ ಹಬ್ಬದ ಉಡುಗೊರೆಯಾಗಿ ಬಟ್ಟೆಗಳನ್ನು ಕಳಿಸಿದ್ದಳು. 'ನನ್ನ ಮಾಮು ತಂದ ಡ್ರೆಸ್ಸು ರಂಜಾನ್‌ಗೆ' ಎಂದು ಮಗಳು ಎಲ್ಲರಿಗೂ ಸಾರುತ್ತಿದ್ದಳು. ಎದುರು ಮನೆಯ ನುಜ್ಹತ್ ಸುರಕುಂಬಾದೊಂದಿಗೆ ಮತ್ತೆಲ್ಲ ಅಡಿಗೆ ಕಳಿಸಿದಳು. ರಜಾಕ್‌ಭಯ್ಯಾ ಕ್ಯಾನು ತುಂಬಿ ಖೀರು ತಂದು ಈದ್ ಶುಭಾಶಯ ಹೇಳಿದನು.

ನಮ್ಮ ನಡುವಿನ ಸ್ನೇಹ ಮತ್ತು ಪ್ರೇಮದ ಸೌಧ ಕೆಡವಲು ಯಾರಿಂದಲೂ ಸಾಧ್ಯವಿಲ್ಲ ಅಲ್ಲವೇ? ಕೋಮುವಾದಿಗಳ ಅಟ್ಟಹಾಸಕ್ಕೆದಿರಾಗಿ ಮನುಷ್ಯತ್ವದ ಬಳ್ಳಿ ಬೆಳೆದ ಎಷ್ಟೊಂದು ಪ್ರಕರಣಗಳು ನಮ್ಮ ನಡುವಲ್ಲಿವೆ. ಸಿಂಧನೂರಿನ ಶೇಕ್ಷಾಖಾದ್ರಿ ಮತ್ತು ವಾಣಿ, ಬೇಲೂರಿನ ಸೌಭಾಗ್ಯ ಮತ್ತು ಅಂತೋಣಿಯಂತಹ ಸಂಗಾತಿಗಳು ಇಂದಿ[illegible] ಯಾವುದೇ ಧಾರ್ಮಿಕ ಕಂದಾಚಾರಗಳಿಲ್ಲದೆ ಪರ[illegible] ಪ್ರೀತಿಯೊಂದೇ ಅಂತಿಮ ಸತ್ಯವೆಂದು ಬದ[illegible] ಅರ್ಥಪೂರ್ಣ ಜೀವನ ಸಾಗಿಸುತ್ತಿರುವುದು ಹೆಮ್ಮೆ[illegible] ಸಂಗತಿಯಲ್ಲವೇ?

ಬದಲಾಗುತ್ತಿದ್ದ ಬಿಂದಿ - ಬುರ್ಖಾ

ನಾನಾಗ ಹತ್ತನೇ ಓದುತ್ತಿದ್ದೆ. ಗೆ[illegible] ರಹಿಮುನ್ನಿಸಾ ನಾನು ಒಂದೇಬೆಂಚಿನ ಮೇ[illegible] ಕೂಡುತ್ತಿದ್ದೆವು. ಅವಳಿಗೆ ನನ್ನ ಹಣೆಯ ಮೇ[illegible] ಕುಂಕುಮ ಮತ್ತು ನನಗೆ ಅವಳ ಬುರ್ಖಾ ಪರ[illegible] ಕುತೂಹಲ ಉಂಟು ಮಾಡಿದ್ದವು. ಸರಿ. ಎ[illegible] ಸಾರಿ ಶಾಲೆಗೆ ಬಂದ ಕೂಡಲೇ ನಾನು ಅ[illegible] ಬೂರ್ಖಾ ಧರಿಸಿದರೆ ಅವಳು ನನ್ನ ಬಿಂದಿ [illegible] ವಿಶಾಲ ಹಣೆಗಿಡುತ್ತಿದ್ದಳು. ನಮ್ಮ ನಡುವಿಗೆ ಆಟವೂ ಪರಸ್ಪರ ಸ್ನೇಹ ಸಂಬ[illegible] ಗಟ್ಟಿಗೊಳಿಸುತ್ತಿತ್ತು. ಇನ್ನೂ ಗಾಢ ನೇಹ ತ[illegible] ಹೆಣೆದು ಭಾವೈಕ್ಯ ಪರಂಪರೆ ಬೆಳೆಸಿದ ಅಸಂಖ[illegible] ಹೆಸರುಗಳು ಚರಿತ್ರೆಯಲ್ಲಿ ಸಿಗುತ್ತವೆ. ಅಂಥ[illegible] ಪಟ್ಟಿಯಲ್ಲಿ ಜಲಾಲ್‌ಸಾಬ್, ಮಡಿವಾಳ[illegible] ಖೈನೂರು ಕೃಷ್ಣಪ್ಪ ನಂಥವರ ಹೆಸರುಗಳು ಇವೆ[illegible]

ಆದಕ್ಕೇ ಜಲಾಲ್‌ಸಾಬ ಎಂಬ ತತ್ವಪದಕ[illegible] 'ಅಜ್ಞಾನೆಂಬದು ಅಮವಾಸಿ, ಸುಜ್ಞಾನೆಂಬ ಚಂದ್ರ[illegible] ಉದಿಸಿ, ರಹಿಮಾಮ್ ರಹಿಮಾಮ ಉಚ್ಚರ[illegible] ಪರಬ್ರಹ್ಮಕ ದೋಸ್ತರ ಹೌದೆನಿಸಿ' ಹಾಡು ಕ[illegible] 'ದೋಸ್ತಾನಿಕಿ' ಒಂದೇ ಅವರ ಎಂದ[illegible] ಬರೆದಿರಬಹುದೆನಿಸುತ್ತದೆ. ಈ ಅಕ್ಷಯ[illegible] ಮಾನವೀಯ ತೋಟದ ಸಂರಕ್ಷಣೆ ನಮ್ಮೆಲ್ಲರ ಹೊ[illegible] ಅಲ್ಲವೇ?

ಹ...ಹಾ...ಹಾ...

ದುರಂತವೂ ಅಲ್ಲ!

ಒಮ್ಮೆ ಬಿಲ್ ಬಿಲ್ ಕ್ಲಿಂಟನ್ ಅಧ್ಯಕ್ಷರಾಗಿದ್ದಾಗ ಸೀದಾ ಒಂದು ಸ್ಕೂಲಿಗೆ ಹೋದರಂತೆ ಇನ್ಸಪೆಕ್ಷನ್ ಮಾಡಕ್ಕೆ!

ತರಗತಿಗೆ ಹೋಗಿ ವಿದ್ಯಾರ್ಥಿಗಳಿಗೆ ಒಂದು ಪ್ರಶ್ನೆ ಕೇಳಿದರು: "ದುರಂತ" ವೆಂದರೆ ಏನು ಹೇಳಿ ನೋಡೋಣ ಎಂದು.

ಒಬ್ಬ ವಿದ್ಯಾರ್ಥಿ ಹೇಳಿದ: 'ನಮ್ಮ ಪಕ್ಕದ ಮನೆ ಹುಡುಗ ರಸ್ತೆಯಲ್ಲಿ ಹೋಗುವಾಗ ಕಾರಿಗೆ ಸಿಕ್ಕಿ ಸತ್ತುಹೋದರೆ, ಅದನ್ನು ದುರಂತ ಎನ್ನಬಹುದು'

ಆಗ ಕ್ಲಿಂಟನ್ ಹೇಳಿದರು: ಇಲ್ಲ ಇಲ್ಲ, ಅದು 'ಅಪಘಾತ' ಎಂದು.

ಇನ್ನೊಬ್ಬ ವಿದ್ಯಾರ್ಥಿನಿ ಹೇಳಿದಳು:' ನಮ್ಮ ಶಾಲೆಯ ಬಸ್ ನದಿಗೆ ಬಿದ್ದು, ಅದರಲ್ಲಿದ್ದ ವಿದ್ಯಾರ್ಥಿಗಳೆಲ್ಲ ಸತ್ತು ಹೋದರೆ ಅದನ್ನು ದುರಂತ ಎನ್ನಬಹುದು'.

ಆಗ 'ನೋ ನೋ , ಅದು ತುಂಬಲಾರದ ಬಾರೀ ನಷ್ಟ' ಎಂದರು ಕ್ಲಿಂಟನ್.

ವಿದ್ಯಾರ್ಥಿಗಳಿಗೆ ಏನು ಹೇಳಬೇಕೋ ತಿಳಿಯಲಿಲ್ಲ. ಸ್ವಲ್ಪ ಹೊತ್ತು ಸುಮ್ಮನೆ ಕುಳಿತರು. ಒಬ್ಬ ವಿದ್ಯಾರ್ಥಿ ಎದ್ದು ನಿಂತು ಹೇಳಿದ: 'ಸರ್', ನೀವು ಮತ್ತು ನಿಮ್ಮ ಪತ್ನಿ ವಿಮಾನದಲ್ಲಿ ಹೋಗುವಾಗ ಅದನ್ನು ಬಾಂಬಿನಿಂದ ಬ್ಲಾಸ್ಟ್ ಮಾಡಿ ನೀವಿಬ್ಬರೂ ಸತ್ತು ಹೋದರೆ' ಎಂದ.

ಕುತೂಹಲಗೊಂಡ ಕ್ಲಿಂಟನ್ 'ಅದು ಹೇಗೆ? ' ಎಂದು ಕೇಳಿದರು.

'ಸರ್ ಅದು ಅಪಘಾತವೂ ಅಲ್ಲ, ತುಂಬಲಾರದ ಭಾರೀ ನಷ್ಟವೂ ಅಲ್ಲ ಆದ್ದರಿಂದ' ಎಂದ.

ಆಗ ಅಲ್ಲಿದ್ದ, ಮಾಸ್ತರು, ಸುಮ್ನೆ ಕೂತ್ಕೊಳೋ ತಲೆ ಹರಟೆ, ಅದು ದುರಂತವೂ ಅಲ್ಲ, ಎಂದರಂತೆ. ○

ಕಾಂ. ಸೂರ್ಯನಾರಾಯಣ ರಾವ್ ಜನ್ಮದಿನೋತ್ಸವ ಸಮಿತಿಯಿಂದ ಆಯೋಜಿಸಲಾಗಿದ್ದ ಕಾಂ. ಪಿ.ರಾಮಮೂರ್ತಿ ಜನ್ಮಶತಮಾನೋತ್ಸವ ದಿನಾಚರಣೆ ಮೈಕೊ ನಾಗನಾಥಪುರ ಕಾರ್ಮಿಕ ತಂಡದಿಂದ ಪ್ರದರ್ಶಗೊಂಡ 'ಅಣು ಒಪ್ಪಂದ ಅದರ ದುಷ್ಪರಿಣಾಮಗಳ ಬಗ್ಗೆ 'ತೂಗುಕತ್ತಿಯ ಕೆಳಗೆ' ನಾಟಕದೊಂದಿಗೆ ಅಕ್ಟೋಬರ್ 5 ರಂದು ಬೆಂಗಳೂರಿನಲ್ಲಿ ನಡೆಯಿತು. ಮುಖ್ಯ ಅತಿಥಿಗಳಾಗಿ ಕಾಂ. ಎಂ.ಕೆ.ಪಂಧೆ ಮಾತನಾಡಿ ಶ್ರೇಷ್ಠ ನಾಯಕ ಪಿ.ರಾಮಮೂರ್ತಿ ಅವರು ಸಿಐಟಿಯು ಸಂಸ್ಥಾಪಕ ಕಾರ್ಯದರ್ಶಿಅಷ್ಟೇ ಅಲ್ಲ ಅವರು ದೇಶದ ಎಡ ಚಳುವಳಿಯನ್ನು ಕಟ್ಟಿ ಬೆಳೆಸಿದ ಕ್ರಾಂತಿಕಾರಿಯಾಗಿದ್ದರು ಎಂದರು.

ಸೆಪ್ಟೆಂಬರ್ 29 ಕಾಂ. ಪಿ.ಆರ್. ಜನ್ಮ ಶತಮಾನೋತ್ಸವ ದಿನ. ಅದರ ಹಿನ್ನೆಲೆಯಲ್ಲಿ ಒಂದು ವರ್ಷ ಅಧ್ಯಯನ ಶಿಬಿರಗಳು, ವಿಚಾರ ಸಂಕಿರಣಗಳು, ದೇಶದಾದ್ಯಂತ ನಡೆದಿವೆ. ವರ್ಗ ಹೋರಾಟಕ್ಕಾಗಿಯೇ ಕಾಂ. ಪಿ.ಆರ್. ಜೀವನವನ್ನು ಮುಡುಪಾಗಿಟ್ಟಿದ್ದರು. ಸಾಮಾನ್ಯವಾಗಿ ಯೋಚಿಸಲಾಗುವಂತೆ ಉತ್ತಮ ವೇತನ, ಬೋನಸ್, ತುಟ್ಟಿಭತ್ಯೆ ಇತರ ಸೌಲಭ್ಯಕ್ಕಾಗಿ ಹೋರಾಟವೇಕಾರ್ಮಿಕ ಸಂಘದ ಕರ್ತವ್ಯ. ಉತ್ತಮ ಸೌಲಭ್ಯಗಳಿಗಾಗಿ ಮಾತ್ರ ಹೋರಾಡಿದರೆ ಬಂಡವಾಳಶಾಹಿ ಶೋಷಣೆ ನಿಲ್ಲುವುದಿಲ್ಲ. ಬಂಡವಾಳಶಾಹಿ ಇರುವವರೆಗೆ ಮುಂದುವರೆಯುತ್ತದೆ. ನಮ್ಮ ಹೋರಾಟದಿಂದ ಶೋಷಣೆ ಕಡಿಮೆ ಮಾಡಬಹುದು, ಆದರೆ ನಿಲ್ಲಿಸಲಾಗುವುದಿಲ್ಲ. ಪಿ.ಆರ್. ಬೋಧಿಸುತ್ತಿದ್ದರು ಶೋಷಣಾ ವ್ಯವಸ್ಥೆಯಲ್ಲಿ ಕಾರ್ಮಿಕರ ಗುರಿ - ಶೋಷಣೆ ವಿರುದ್ಧ ಹೋರಾಟ, ಶೋಷಣೆ ಕೊನೆಗೊಳಿಸಲು ಬಂಡವಾಳಶಾಹಿ ವ್ಯವಸ್ಥೆಯ ಬದಲಾವಣೆ.

ಗಾಂಧಿ ಹೇಳುತ್ತಿದ್ದರು - "ಬಂಡವಾಳಿಗರು; ಕಾರ್ಮಿಕರು ರಥದ ಚಕ್ರಗಳಿದ್ದಂತೆ. ಸಮಾಜ ಮುನ್ನಡೆಸುವ ಧರ್ಮದರ್ಶಿಗಳಂತೆ ಬಂಡವಾಳಿಗರು ಕಾರ್ಮಿಕರನ್ನು ಉತ್ತಮ ರೀತಿಯಲ್ಲಿ ನೋಡಿಕೊಳ್ಳುತ್ತಾರೆ" ಆದರೆ ಬಂಡವಾಳಿಗರು ಕಾರ್ಮಿಕರನ್ನು ಶೋಷಿಸುತ್ತಾರೆ. ಇದರ ವಿರುದ್ಧ ವರ್ಗ ಹೋರಾಟ ಅನಿವಾರ್ಯ ಎಂಬುದೇ ಪಿ.ಆರ್. ರವರ ಅನುಭವದ ಮಾತಾಗಿತ್ತು.


ವಿದ್ಯಾರ್ಥಿ ಜೀವನ:

ಅವರು ವಿದ್ಯಾರ್ಥಿಯಾಗಿದ್ದಾಗಲೇ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗಿಯಾಗಿದ್ದರು. ಬ್ರಿಟಿಷ್ ಆಡಳಿತದ ವಿರುದ್ಧ ಹೋರಾಟದಲ್ಲಿದ್ದರು. ಬನಾರಸ್‌ಗೆ ತೆರಳಿ ದೇಶಪ್ರೇಮಿ ರಾಷ್ಟ್ರೀಯ ಶಾಲೆಯಲ್ಲಿ ವಿದ್ಯಾಭ್ಯಾಸ ಪಡೆದರು. ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಅಧ್ಯಯನ ಮಾಡಿದ್ದ ಅವರು ಕಾರ್ಮಿಕ ಸಂಘಗಳು ದಿನನಿತ್ಯದ ಸಮಸ್ಯೆಗಳಿಗಷ್ಟೇ ಮತ್ತು ಸುಧಾರಣೆಗಾಗಿ ಮಾತ್ರವೇ ಕೆಲಸ ಮಾಡದೆ ದೇಶದ ಸ್ವಾತಂತ್ರ್ಯ ಜನರೆಲ್ಲರಿಗಾಗಿ ಬೇಕು, ಬಂಡವಾಳಶಾಹಿ ಶೋಷಣೆ ರಹಿತ ಸ್ವಾತಂತ್ರ್ಯಕ್ಕಾಗಿ ಕಾರ್ಮಿಕರು ಹೋರಾಡಬೇಕೆಂದರು.

ಹಿಂದಿಯಲ್ಲೂ ಮಾತನಾಡುತ್ತಿದ್ದ ಅವರು ಸಿಐಟಿಯುಸಿ ಮುಖಂಡಾಗಿ ಇಡೀ ದೇಶವನ್ನು ಸುತ್ತಿ ಚಳುವಳಿ ಕಟ್ಟಿ ಬೆಳೆಸಿದರು.

ವರ್ಗ ಸಹಕಾರದ ಧೋರಣೆಯ ಗೊಂದಲ, ಸೈದ್ಧಾಂತಿಕವಾಗಿ ಪರಿಷ್ಕರಣವಾದದ ಮಬ್ಬು ಆವರಿಸಿದ್ದ ಕಾಲದಲ್ಲಿ ದೇಶದ ಕಾರ್ಮಿಕ ಚಳುವಳಿಗೆ ವರ್ಗ ಸಂಘರ್ಷದ ಪ್ರಖರ ಆಯುಧವನ್ನು ಸಾಣೆ ಹಿಡಿದುಕೊಟ್ಟವರಲ್ಲಿ ಕಾಂ. ಪಿ.ಆರ್. ಒಬ್ಬ ಪ್ರಮುಖರು

'ವರ್ಗ ಹೋರಾಟ ಅನಿವಾರ್ಯ' ಎಂದ ಬಂಡಾಯಗಾರ



ಕಾಮ್ರೇಡ್ ಪಿ. ರಾಮಮೂರ್ತಿ

ಡಾಂಗೆ ನೀತಿ ವಿರುದ್ಧ ವರ್ಗ ಹೋರಾಟ:

1958 ರಲ್ಲಿ ಪ್ರಕಟಿಸಿದ ಎಸ್.ಎ.ಡಾಂಗೆಯವರ ಎರಡು ಕಂಬ ನೀತಿ - ದೇಶದ ಹಿತ ಕಾರ್ಮಿಕರ ಹಿತ, ವಾಸ್ತವವಾಗಿ ದೇಶದ ಹಿತ ಎಂದದು ಹೇಳುವಾಗ ದೇಶದ ಬಂಡವಾಳಿಗ-ಭೂಮಾಲಿಕ ಹಿತವಾಗಿದ್ದು, ಅದು ಕಾರ್ಮಿಕ ವಿರೋಧಿಯಾಗಿದ್ದರಿಂದ ಪಿ.ಆರ್. ಈ ನೀತಿ ವಿರುದ್ಧ ದೇಶಿಯ ಮತ್ತು ವಿದೇಶಿ ಬಂಡವಾಳಶಾಹಿ ಮತ್ತು ಭೂಮಾಲಕರ ವಿರುದ್ಧ ಹೋರಾಡಿದರು.

ದುಡಿವ ಜನರ ಹಿತ - ದುಡಿವ ಜನರ ವಿಮೋಚನೆಗಾಗಿ ಮಾತ್ರ ಅಲ್ಲ, ಸಮಾಜವಾದಕ್ಕಾಗಿ ಸುಧಾರಣಾವಾದದ ವಿರುದ್ಧ ಹೋರಾಟ ಮಾಡಿದರು.

ಕಾರ್ಮಿಕ ಚಳುವಳಿಯಲ್ಲಿ ಭಿನ್ನಾಭಿಪ್ರಾಯ ಬೆಳೆಯುತ್ತಾ ಹೋಗಿ ವರ್ಗ ಹೋರಾಟದ ಅನಿವಾರ್ಯತೆಯನ್ನು ಪಿ.ಆರ್.ಹೇಳಿದರೆ ಡಾಂಗೆ ಗುಂಪು ಸುಧಾರಣಾವಾದಿ - ವರ್ಗ ಸಹಕಾರ, ಬಂಡವಾಳಿಗರ ಪರ ನೀತಿಗೆ ಅಂಟಿಕೊಂಡಿತು. ಬಂಡವಾಳಿಗರ ಜೊತೆ ಸಹಕಾರದಿಂದ ಕಾರ್ಮಿಕರ ಉನ್ನತಿ ಸಾಧ್ಯ ಎಂಬುದು ಡಾಂಗೆ ವಾದವಾಗಿತ್ತು. ವರ್ಗ ಹೋರಾಟದಿಂದ ಮಾತ್ರಕಾರ್ಮಿಕರ ಶೋಷಣೆ ಮುಕ್ತ ವ್ಯವಸ್ಥೆ ಸಾಧ್ಯ ಎಂಬುದು ಪಿ.ಆರ್., ಬಿಟಿಆರ್ ಮುಂತಾದ ಮುಖಂಡರ ಸೈದ್ಧಾಂತಿಕ ತಿಳುವಳಿಕೆಯಾಗಿತ್ತು



'ತೂಗುಕತ್ತಿಯ ಕೆಳಗೆ' ಬೀದಿ ನಾಟಕ
ಮೈಕೊ ನಾಗನಾಥಪುರ ಕಾರ್ಮಿಕರ ತಂಡದಿಂದ

ಸಿಪಿಎಂ ಉದಯ

1964 ರಲ್ಲಿ ಬಗೆಹರಿಸಲಾಗದ ಸೈದ್ಧಾಂತಿಕ ಭಿನ್ನಾಬಿಪ್ರಾಯದಿಂದ ಭಾರತ ಕಮ್ಯೂನಿಸ್ಟ್ ಪಕ್ಷ ವಿಭಜನೆಯಾಗಿ ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ರಚನೆಯಾಯಿತು. ಪಿ.ಆರ್. ಅವರು ಸಿಪಿಐ(ಎಂ)ಗೆ ನೇತೃತ್ವ ನೀಡಿದರು. ಪಕ್ಷ ವಿಭಜನೆ ನಂತರವೂ ಪಿಆರ್, ಎಂಆರ್‌ಪಿ ಮತ್ತು ಬಿಟಿಆರ್ ಅವರು ಎಐಟಿಯುಸಿ ಯಲ್ಲೇ ಆರು ವರ್ಷ ಕೆಲಸ ಮಾಡಿದರು. ಸೈದ್ಧಾಂತಿಕ ಭಿನ್ನತೆಗಳಿಂದಾಗಿ 1970ರಲ್ಲಿ ಸಿಐಟಿಯು ಉದಯಿಸಲೇಬೇಕಾಯಿತು: ಐಕ್ಯತೆ ಮತ್ತು ಹೋರಾಟ ಸಿಐಟಿಯುನ ನೀತಿ, ಸೈದ್ಧಾಂತಿಕ ವಿಚಾರ ಮೀರಿಯೂ ಪಿಆರ್ ಅವರು ನಿರಂತರವಾಗಿ ಕಾರ್ಮಿಕ ವರ್ಗದ ಐಕ್ಯತೆಗಾಗಿ ಹೋರಾಡಿದರು.

1973 ರಲ್ಲಿ ಕಾರ್ಮಿಕ ಸಂಘಟನೆಗಳ ಸಂಯುಕ್ತ ಸಮಿತಿ(ಯುಸಿಟಿಯು), ಐಎನ್‌ಟಿಯುಸಿ, ಹೆಚ್‌ಎಂಎಸ್, ಎಐಟಿಯುಸಿ ಸೇರಿ ಇದ್ದ ಸಮಿತಿಗೆ ಅಂದಿನ ಕಾರ್ಮಿಕ ಮಂತ್ರಿ ನೇತೃತ್ವ - 1975 ರಲ್ಲಿ ತುರ್ತು ಪರಿಸ್ಥಿತಿ ಕಾಲದಲ್ಲಿ ಈ ಮೂರು ಸಂಘಟನೆಗಳ ಬೆಂಬಲದೊಂದಿಗೆ ಬೋನಸ್ ಕಾಯಿದೆ ತಿದ್ದುಪಡಿ ಮಾಡಿ, ಬೋನಸ್ ಶೇ. 8.33 ನಿಂದ ಶೇ. 4 ಕ್ಕೆ ಇಳಿಸಲಾಯಿತು. ಬಿಟಿಆರ್ ಮತ್ತು ಪಿಆರ್ ಮುಂತಾದ ಮುಖಂಡರ ನೇತೃತ್ವದ ಹೋರಾಟಗಳಿಂದ ಮತ್ತೆ ಶೇ. 8.33 ಬೋನಸ್ ಅನ್ನು ಪಡೆಯಲು ಕಾರ್ಮಿಕ ವರ್ಗಕ್ಕೆ ಸಾಧ್ಯವಾಯಿತು.

ಐಕ್ಯತೆ:

ನಿಜವಾದ ಕಾರ್ಮಿಕವರ್ಗದ ಐಕ್ಯತೆ ಸಾಧಿಸಿದ್ದು ಸಿಐಟಿಯು ಸ್ಥಾಪನೆಯಾದ ನಂತರ. 1981 ರಲ್ಲಿ ಐಎನ್‌ಟಿಯುಸಿ ಹೊರತುಪಡಿಸಿ ಎಲ್ಲಾ ಕಾರ್ಮಿಕ ಸಂಘಟನೆಗಳ ಸಾಮಾನ್ಯ ವೇದಿಕೆ - ಎನ್‌ಸಿಸಿ ಮುಖಾಂತರ ಬಿಟಿಆರ್, ಪಿಆರ್ ಪ್ರಮುಖ ಪಾತ್ರದೊಂದಿಗೆ ಕಾರ್ಮಿಕ ವರ್ಗದ ಮೊಟ್ಟಮೊದಲ ದೇಶವ್ಯಾಪಿ ಮುಷ್ಕರವನ್ನು ಯಶಸ್ವಿ ಮಾಡಿದ ಸಾಧನೆ. ಪಿಆರ್ - ಬಿಟಿಆರ್ ಅಣಿನೆರೆಸಿ ಸಾರ್ವಜನಿಕ ಕ್ಷೇತ್ರದ ಸಂಘಟನೆ - ಪಿಎಸ್‌ಯು ಕಟ್ಟಿದರು. ನಿರಂತರ ಚಳುವಳಿ ಮೂಲಕ ಬೆಂಗಳೂರಿನ ಸಾರ್ವಜನಿಕ ವಲಯದ ಕಾರ್ಖಾನೆಗಳ ಮುಷ್ಕರ ನಡೆಸಲಾಯಿತು. ನಂತರಹಲವು ಕಡೆ ಮುಷ್ಕರ ನಡೆಯಿತು. 1985 ರಲ್ಲಿ ಸಿಪಿಎಸ್‌ಟಿಯು ರಾಷ್ಟ್ರಮಟ್ಟದ ಸಾರ್ವಜನಿಕ ವಲಯದ ಕಾರ್ಮಿಕ ಸಂಘಟನೆ ಸ್ಥಾಪಿಸಲಾಯಿತು.

ರಾಜಕಾರಣಿಯಾಗಿ ಪಿಆರ್

ಪಿಆರ್ ಬರಿ ಕಾರ್ಮಿಕ ನಾಯಕರಷ್ಟೇ ಆಗಿರಲಿಲ್ಲ. ಅವರು 1952ರಲ್ಲಿ ಜೈಲಿನಲ್ಲಿರುವಾಗಲೇ ಮದ್ರಾಸ್ ಪ್ರಾವಿನ್ಸ್‌ಗೆ ಆಯ್ಕೆಯಾಗಿ ಅಲ್ಲಿ ತಮಿಳಿನಲ್ಲಿ ಮಾತನಾಡಿದ ಮೊದಲಿಗರು. ಎರಡು ಬಾರಿರಾಜ್ಯಸಭೆಯ ಸದಸ್ಯರಾಗಿದ್ದ ಅವರು ಒಂದುಸಾರಿ ಲೋಕಸಭೆಗೆ ಆಯ್ಕೆಯಾಗಿದ್ದರು. ಅವರು ಲೋಕಸಭೆಯ ಒಳಗೆ ಮತ್ತು ಹೊರಗೆ ವ್ಯವಸ್ಥೆಯ ವಿರುದ್ಧ ಹೋರಾಟ ಮಾಡಿದರು.

ಮಾರ್ಗದರ್ಶನ ಮತ್ತು ನಮಗಿರುವ ಸವಾಲು:

ಪಿಆರ್, ಬಿಟಿಆರ್ ನಮ್ಮೊಂದಿಗಿಲ್ಲ. ಅವರ ಬೋಧನೆ, ಮಾರ್ಗದರ್ಶನ - ಸಾಧನೆ ನಮಗೆಲ್ಲ ಮಹತ್ವದ್ದು ಎಂಬ ಅಭಿಪ್ರಾಯ ಸಮಾರಂಭದಲ್ಲಿ ಮೂಡಿಬಂತು. ಈ ಸಂದರ್ಭದಲ್ಲಿ ಅಣು ಒಪ್ಪಂದದ ನಾಟಕ ಪ್ರದರ್ಶನವಾಯಿತು.

ಹೈಡ್ ಕಾಯ್ದೆ ಮತ್ತು 123 ಒಪ್ಪಂದ ಅಮೆರಿಕಾದ ಸೆನೆಟ್‌ನಲ್ಲಿ ಅಂಗೀಕಾರಆಗಿದೆ. ಭಾರತದ ಸಂಸತ್‌ನಲ್ಲಿ ಆಗಿಲ್ಲ. ಭರವಸೆಯನ್ನು ಕೇಂದ್ರ ಸರ್ಕಾರ ಈಡೇರಿಸಿಲ್ಲ. ಭಾರತ ಸರ್ಕಾರ ಹೇಳಿದ್ದು "123 ಒಪ್ಪಂದ ಮಾತ್ರನಾವು ಒಪ್ಪಿದ್ದೇವೆ. ಹೈಡ್ ಕಾಯ್ದೆಗೆ ಸಂಬಂಧವಿಲ್ಲ". ಅಮೆರಿಕಾ ವಿದೇಶಾಂಗ ಕಾರ್ಯದರ್ಶಿ ಹೇಳುತ್ತಿದ್ದಾರೆ "ಎರಡನ್ನು ಒಪ್ಪಲಾಗಿದೆ. ಅವು ಒಂದಕ್ಕೊಂದು ಸಂಬಂಧಿಸಿವೆ" ಇದು ಭಾರತ ಸರ್ಕಾರ ಜನತೆಗೆ ಬಗೆದ ದ್ರೋಹ. ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದೆ. ಅಲ್ಪಸಂಖ್ಯಾತರ ಮೇಲೆ ಕೋಮುವಾದಿ ದಾಳಿಗಳನ್ನು ನಡೆಸಲಾಗುತ್ತಿದೆ. ದೇಶಮಟ್ಟದ ಆರ್ಥಿಕ ದಾಳಿ ವಿರುದ್ಧ ಹೋರಾಡಲು ಮುನ್ನಡೆಯೋಣ.

ಬೆಂಗಳೂರಿನೊಟ್ಟಿಗೆ ಸಂಬಂಧ

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಿಐಟಿಯು ಪ್ರಧಾನಕಾರ್ಯದರ್ಶಿ ವಿ.ಜೆ.ಕೆ.ನಾಯರ್ ಮಾತನಾಡಿ ಕಾಂ. ಪಿಆರ್ ಬೆಂಗಳೂರಿನೊಟ್ಟಿಗೆ ನಿಕಟ ಸಂಬಂಧವಿಟ್ಟುಕೊಂಡವರು. ಸಾರ್ವಜನಿಕ ವಲಯದ ಕಾರ್ಮಿಕ ಸಂಘಕ್ಕೆ 1978 ರಿಂದಲೇ ಮಾರ್ಗದರ್ಶನ ಕೊಡುತ್ತಿದ್ದರು. ಅವರ ನೇತೃತ್ವದ ಹೋರಾಟ(ಮುಷ್ಕರ) 1980-82 ರಲ್ಲಿ ನಡೆಯಿತು.

ಸಿಪಿಐಎಂ, ಸಿಪಿಐ, ಕ್ರಾಂತಿರಂಗ, ಕಾಂಗ್ರೆಸ್-ಯು ಜಂಟಿಯಾಗಿ ನಡೆಸಿದ ನರಗುಂದ ಹೋರಾಟದ ರೂಪುರೇಷೆಯೊಂದಿಗೆ ನೇತೃತ್ವವನ್ನು ಪಿಆರ್ ವಹಿಸಿದ್ದರು.

ಹಿರಿಯ ಸಂಗಾತಿಗಳನ್ನು ಹೊಗಳೋದು ಸುಲಭ. ಅವರ ಆಶಯ ಪ್ರಯೋಗಕ್ಕೆ ತರೋದು ಕಷ್ಟ. ಪ್ರಾಯೋಗಿಕವಾಗಲು ಪ್ರಯತ್ನಿಸೋಣ ಎಂದರು.

ಮೀನಾಕ್ಷಿ ಸುಂದರಂ, ಕೆ.ಪ್ರಕಾಶ್, ಎಸ್.ಪ್ರಸನ್ನಕುಮಾರ್, ಎಂ.ಕೆ.ಪಂಧೆ, ವಿ.ಜೆ.ಕೆ.ನಾಯರ್, ಕೆ.ಎನ್.ಉಮೇಶ್, ಹೆಚ್.ಎನ್.ಗೋಪಾಲಗೌಡ ಉಪಸ್ಥಿತರಿದ್ದ ಸಭೆಗೆ ಸ್ವಾಗತವನ್ನು ವಿ.ಜೆ.ಪ್ರಕಾಶ್ ಮಾಡಿದರು. ವಂದನಾರ್ಪಣೆಯನ್ನು ಮುನಿರಾಜು ಮಾಡಿದರು.

■ ಹನುಮಂತ ರಾವ್ ಹವಲ್ದಾರ್

ಸೌಹಾರ್ದ ಚಿಂತನ ವೇದಿಕೆ ಗುಲ್ಬರ್ಗಾ

ಕೋಮುವಾದಿಗಳೇ ನಿಮಗೆ ಎಚ್ಚರಿಕೆ, ಜಾತಿವಾದಿಗಳೇ ನಿಮಗೆ ಎಚ್ಚರಿಕೆ, ಧರ್ಮದ ಹೆಸರಿನಲ್ಲಿ ದೇಶವನ್ನು ಒಡೆಯಲು ಬಿಡುವುದಿಲ್ಲ. ಕರ್ನಾಟಕದ ಧರ್ಮ ಸಮನ್ವಯ ಪರಂಪರೆಯನ್ನು ನಾಶಪಡಿಸಲು ಬಿಡುವುದಿಲ್ಲ, ಬಿಡುವುದಿಲ್ಲ ಎಂಬ ಘೋಷಣೆಗಳು ಪುಂಖಾನುಪುಂಖವಾಗಿ ಒಕ್ಕೊರಲಿನಿಂದ ಗುಲ್ಬರ್ಗಾದ ಬೀದಿಯಲ್ಲಿ ಅನುರಣಿಸಿದವು. ಹೌದು ಗುಲ್ಬರ್ಗಾ ನಗರದ ಪ್ರಜ್ಞಾವಂತ ನಾಗರೀಕರು ಕರ್ನಾಟಕದಲ್ಲಿ ನಡೆಯುತ್ತಿರುವ ಸರ್ಕಾರಿ ಪ್ರೇರಿತ ಚರ್ಚ್‌ಗಳ ಮೇಲಿನ ದಾಳಿಯನ್ನು ಖಂಡಿಸಿ ಪ್ರತಿಭಟನೆ ಮತ್ತು ಸೌಹಾರ್ದ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಿದ ಸಂದರ್ಭದಲ್ಲಿ ಈ ತೆರನ ಘೋಷಣೆಗಳು ಕೇಳಿಬಂದವು.

27.09.08 ರಂದು ಸಾಯಂಕಾಲ 5.00 ಗಂಟೆಗೆ ಕನ್ನಡ ಭವನದಿಂದ ಹೊರಟಿದ್ದ ಪ್ರತಿಭಟನಾ ರ‍್ಯಾಲಿಯಲ್ಲಿ ಬುದ್ಧಿ ಜೀವಿಗಳು, ವಿದ್ಯಾರ್ಥಿಗಳು, ಉಪನ್ಯಾಸಕರು, ವಕೀಲರು, ಸಮಾಜಸೇವಕರು, ವೈದ್ಯರು, ಮಠಾಧೀಶ್ವರು, ಕ್ರೈಸ್ತ ಪಾದ್ರಿಗಳು, ಹೀಗೆ ಎಲ್ಲ ವರ್ಗದ ಪ್ರಜ್ಞಾವಂತರೂ ಭಾಗವಹಿಸಿದ್ದರು. ಅವರೆಲ್ಲರೂ ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳಿ ಮನವಿ ಪತ್ರವೊಂದನ್ನು ರಾಜ್ಯಪಾಲರಿಗೆ ಕಳಿಸುವಂತೆ ವಿನಂತಿಸಿಕೊಂಡರು. ಅಲ್ಲಿಂದ ತೆರಳಿ ಕನ್ನಡ ಭವನದಲ್ಲಿ ವಿಸ್ತೃತ ಸಂವಾದವನ್ನು ನಡೆಸಿದರು. ಕೆ.ನೀಲಾ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂವಾದದಲ್ಲಿ ಡಾ:ಮೀನಾಕ್ಷಿಬಾಳಿ ಯವರು ಕೋಮು ಸೌಹಾರ್ದತೆಯ ಅವಶ್ಯಕತೆ ಮತ್ತು ಅನಿವಾರ್ಯತೆಯನ್ನು ವಿವರಿಸುತ್ತಾ ಗುಲ್ಬರ್ಗಾದ ಸೌಹಾರ್ದ ಚಿಂತನಾ ವೇದಿಕೆಯು ನಾಡಿನಲ್ಲಿ ಆತಂಕದ ಕ್ಷಣಗಳು ಸೃಷ್ಟಿಯಾದಾಗ, ಕೋಮುವಾದಿಗಳ ಅಟ್ಟಹಾಸ ಅತಿಯಾದಾಗಲೆಲ್ಲ ಅವರನ್ನು ಪ್ರತಿಭಟಿಸುವ ಛಾತಿ ತೋರುತ್ತ ಬಂದಿದೆ ಎಂಬುದನ್ನು ಸಾದರಪಡಿಸಿದರು.

ಇದೇ ಸಂದರ್ಭದಲ್ಲಿ ಆಳಂದ ಶಿವಲಿಂಗೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ ಕ್ರೈಸ್ತರ ಮೇಲೆ ನಡೆದ ಹಲ್ಲೆ ಅಮಾನವೀಯ ಮತ್ತು ಕ್ರೌರ್ಯದ ಪರಮಾಧಿ. ಇದನ್ನು ಎಲ್ಲ ಧರ್ಮ ನಿಷ್ಠ ಮುಖಂಡರು ಖಂಡಿಸಲೇ ಬೇಕು ಎಂದರು. ಇನ್ನೋರ್ವ ಸ್ವಾಮೀಜಿ ಶ್ರೀ ಮಹಾಂತ ಶಿವಾಚಾರ್ಯ ಸುಲಫಲಮಠ ಇವರು ತುಂಬಾ ಸ್ಪಷ್ಟವಾಗಿ ವಿಹೆಚ್‌ಪಿ, ಭಜರಂಗದಳ, ಶ್ರೀರಾಮಸೇನಾ ಸಂಘಟನೆಗಳನ್ನು ಮುಟ್ಟುಗೋಲು ಹಾಕಬೇಕು. ಈ ದಿಶೆಯಲ್ಲಿ ಕೋಮುವಾದವನ್ನು ಖಂಡಿಸಲೇಬೇಕು ಎಂದರು. ಸೇಂಟ್ ಮೇರಿಸ್ ಸಂಸ್ಥೆಯ ಫಾದರ್ ಅವರು ಮಾತನಾಡುತ್ತಾ ಶಾಂತಿ, ಸೌಹಾರ್ದತೆಗೆ ಹೆಸರಾದ, ಧಾರ್ಮಿಕ ಪ್ರಬುದ್ಧತೆ ಹೊಂದಿದ ಕರ್ನಾಟಕದಂಥ ನಾಡಿನಲ್ಲಿ ಈ ರೀತಿ ಚರ್ಚ್‌ಗಳ ಮೇಲೆ ದಾಳಿ ನಡೆದಿರುವುದು ಆಶ್ಚರ್ಯವನ್ನುಂಟು ಮಾಡುತ್ತದೆ ಎಂದರು. ಇದು ಕೇವಲ ಕ್ರೈಸ್ತರ ಮೇಲೆ ನಡೆದ ದಾಳಿಯಲ್ಲ. ದೇಶದ ಐಕ್ಯತೆ, ಅಖಂಡತೆ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಧಕ್ಕೆ ತರುವ ಸಂಗತಿಯಾಗಿದೆ. ಈ ದಿಸೆಯಲ್ಲಿ ಸರ್ಕಾರ ತನ್ನ ಜವಾಬ್ದಾರಿಯನ್ನು ಅರಿತುಕೊಂಡು ಎಚ್ಚರಿಕೆಯಿಂದ ವರ್ತಿಸಬೇಕು. ಸರ್ಕಾರ ಮನಸ್ಸು ಮಾಡಿದರೆ ಈ ಬಗೆಯ ಹಲ್ಲೆಗಳನ್ನು ತಡೆಗಟ್ಟುವುದು ದೊಡ್ಡದೇನಲ್ಲ ಎಂದು ಅವರು ನೊಂದು ನುಡಿದರು.

ಇದೇ ವೇದಿಕೆಯಿಂದ ಈಶ್ವರಯ್ಯಮಠ, ರೇವಣಸಿದ್ದ ಅಫಜಲಾಪುರ, ಮೆಹರಾಜ್ ಪಟೇಲ, ಮಹಾಂತೇಶ ನವಲಕರ್, ಫಾದರ್ ವಿಕ್ಟರ್, ಸಿಸ್ಟರ್‌ಲಿಂಡಾ ರೈಮನ್, ಶ್ರೀಶೈಲ ಘೂಳಿ ಮುಂತಾದವರು ಮಾತನಾಡಿ ಚರ್ಚ್‌ಗಳ ಮೇಲೆ ದಾಳಿಯನ್ನು ಖಂಡಿಸುವುದಲ್ಲೇ, ಕರ್ಮಠ ಹಿಂದುತ್ವದ ಅಮಾನವೀಯ ಮುಖವನ್ನು ಬಯಲಿಗೆಳೆದರು. ನೀಲಾ.ಕೆ. ಅವರು ಅಧ್ಯಕ್ಷೀಯ ನುಡಿಗಳನ್ನಾಡುತ್ತ ಎಲ್ಲ ಧರ್ಮಗಳು ತಮ್ಮ ತಮ್ಮ ಚೌಕಟ್ಟಿನೊಳಗೆ ಪ್ರವರ್ತಿಸಬೇಕೇ ಹೊರತು ಅಧಿಕಾರ ರಾಜಕಾರಣಕ್ಕೆ ಕುಮ್ಮಕ್ಕು ಕೊಡಬಾರದು. ಯಾವತ್ತಿದ್ದರೂ ಧರ್ಮಗಳು ಅಫೀಮ್‌ನಂತಾಗಬಾರದು. ಕರ್ನಾಟಕವು ಶರಣ, ಸಂತ, ಅವಧೂತ, ಆರೂಢ, ಲೋಕಾಯತ, ಶಾಕ್ತ ಎಲ್ಲ ದಾರ್ಶನಿಕ ಧಾರೆಗಳನ್ನು ಅರಗಿಸಿಕೊಂಡು ಪರಧರ್ಮ ಸಹಿಷ್ಣುತೆಯನ್ನು ಪೋಷಿಸಿಕೊಂಡು ಬಂದಿದೆ. ಸಂಘ ಪರಿವಾರಗಳು ಇಂಥ ಸೌಹಾರ್ದ ಪರಂಪರೆಗೆ ಮಸಿ ಬಳಿಯುವ ಕೆಲಸ ಮಾಡಬಾರದು ಎಂದು ಎಚ್ಚರಿಕೆ ನೀಡಿದರು. ಶಿವಶರಣ ಮುಳೆಗಾಂವ ಕಾರ್ಯಕ್ರಮ ನಿರೂಪಿಸಿದರು. ಶಾಂತಿ ಘೋಷಣೆಗಳೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಸೆಪ್ಟೆಂಬರ್ 27, ಭಗತ್‌ಸಿಂಗ್ ಜನ್ಮದಿನಾಚರಣೆ

ಹುತಾತ್ಮ ಭಗತ್ ಸಿಂಗ್ ಜನ್ಮ ದಿನಾಚರಣೆ ಅಂಗವಾಗಿ ಬೆಂಗಳೂರು ಜಿಲ್ಲೆಯಲ್ಲಿ ಮೇಣದ ಬತ್ತಿ ಮೆರವಣಿಗೆ ಹಾಗೂ ಪ್ರತಿಜ್ಞಾ ಸ್ವೀಕಾರ ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಶಾಂತಿನಗರ, ವಿನಾಯಕ ನಗರ, ಪ್ರದೇಶದಲ್ಲಿ ಧ್ವಜಾರೋಹಣ ಕಾರ್ಯಕ್ರಮದ ಮುಖಾಂತರ ಪ್ರಾರಂಭವಾಯಿತು. ಮುಖ್ಯ ಅತಿಥಿಗಳಾದ ಎಸ್.ವೈ. ಗುರುಶಾಂತ್, ಜನಶಕ್ತಿ ಪತ್ರಿಕೆ ಸಂಪಾದಕರು, ಭಾಗವಹಿಸಿ ಸ್ವಾತಂತ್ರ್ಯಕ್ಕಾಗಿ ನಗುನಗುತ ನೇಣು ಗಂಬ ಏರಿದ ಇತಿಹಾಸವನ್ನು ತಿಳಿಸಿದರು. ಜಲಿಯನ್ ವಾಲಾಬಾಗ್‌ನ ಜನರ ಮಾರಣಹೋಮ, ಲಾಲಾ ಲಜಪತ್‌ರಾಯ್‌ರ ಜೊತೆಗೂಡಿ ಸೈಮನ್ ಗೊಬ್ಯಾಕ್ ಹೋರಾಟವನ್ನು ವಿವರಿಸಿದರು. ಇಂದಿನ ಯುವಜನರ ಸಿನಿಮಾ ನಟ, ನಟಿ, ರಾಜಕೀಯ ಮುಖಂಡರ ಜನ್ಮದಿನವನ್ನು ಆಚರಿಸುವುದು ವಾಡಿಕೆ ಇರುವಾಗ ಡಿವೈಎಫ್‌ಐ ಸಂಘಟನೆ ಸದಸ್ಯರು ಭಗತ್‌ಸಿಂಗ್ ಜನ್ಮದಿನಾಚರಣೆಯನ್ನು ಆಚರಿಸುತ್ತಿರುವುದನ್ನು ಅಭಿನಂದಿಸಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷರು ನಾಗರಾಜ್, ಪ್ರದೇಶ ಮುಖಂಡರು ಈಶ್ವರ್, ಬಾಲು, ವೆಂಕಟೇಶ್, ಜಯ, ಸರಸ್ವತಿ, ಅಯ್ಯಪ್ಪ, ಶಂಭು, ವರಲಕ್ಷ್ಮಿ ಹನುಮಂತು ಇನ್ನೂ ಅನೇಕರು ಭಾಗವಹಿಸಿದ್ದರು.

ಚಿನ್ನಯ್ಯನ ಪಾಳ್ಯ: ಸಾಮಾನ್ಯ ಯುವಜನರು ಭಗತ್‌ಸಿಂಗ್ ಜನ್ಮದಿನಾಚರಣೆ ಆಚರಣೆ ಮಾಡಿದ್ದಾರೆ. ಯಾವುದೇ ಪ್ರಗತಿಪರ ಸಂಘಟನೆ ಸಂಪರ್ಕ ಇಲ್ಲ. ಬುದ್ದಿಜೀವಿಗಳು ಮತ್ತು ಸಾಹಿತಿಗಳ ಮಾರ್ಗದರ್ಶನ ಇಲ್ಲ. ಆದರೂ ವಿಶೇಷವಾಗಿ ಭಗತ್‌ಸಿಂಗ್ ಜನ್ಮದಿನವನ್ನು ಆಚರಿಸಲಾಗಿದೆ.

ಈ ಕಾರ್ಯಕ್ರಮದಲ್ಲಿ ಡಿವೈಎಫ್‌ಐ ಜಿಲ್ಲಾಧ್ಯಕ್ಷರು ನಾಗರಾಜ್, ಭಾಗವಹಿಸಿ ಸಿನಿಮಾ ನಟ ನಟಿಯರ ಹಾಗೂ ರಾಜಕೀಯ ಮುಖಂಡರ ಅಭಿಮಾನಿಗಳಾಗಿರುವ ಯುವಜನರು ಅವರ ಜನ್ಮದಿನ ಆಚರಿಸುವ ಈ ದಿನಗಳಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರಾದ ಭಗತ್‌ಸಿಂಗ್‌ರವರ ಜನ್ಮದಿನವನ್ನು ಆಚರಿಸುತ್ತಿರುವುದು ನಿಜವಾಗಿಯೂ ಅಭಿನಂದಿಸುವ ಕಾರ್ಯ ಎಂದರು. ಡಿವೈಎಫ್‌ಐ ಸಂಘಟನೆಯು ಭಗತ್‌ಸಿಂಗ್‌ರವರ ಆಶಯಗಳನ್ನು ನೆರವೇರಿಸುವ ದಾರಿಯಲ್ಲಿ ಸಾಗುತ್ತಿದೆ ಎಂದರು.

ಶ್ರೀರಾಂಪುರ: ಈ ಪ್ರದೇಶದಲ್ಲಿ ಧ್ವಜಾರೋಹಣ ಹಾಗೂ ಸಿಹಿ ಹಂಚಿಕೆ ಕಾರ್ಯಕ್ರಮ ನಡೆಸಲಾಗಿದೆ. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಸಹ ಕಾರ್ಯದರ್ಶಿಯಾದ ಹೆಚ್.ಎಸ್. ಧನರಾಜ್ ಭಾಗವಹಿಸಿದ್ದು, ಸ್ಥಳೀಯ ಮುಖಂಡರಾದ ವೆಂಕಟೇಶ್, ರಂಗಸ್ವಾಮಿ, ವಿನೋದ್, ಸ್ವರೂಪ, ಮಧು, ಸಿಪಿಎಂ ಮುಖಂಡರಾದ ವೀರಮಣಿ, ಪಾರ್ಥಿಬನ್ ಭಾಗವಹಿಸಿದ್ದರು.

ಸ್ವಾತಂತ್ರ್ಯ ಸಂರಕ್ಷಣಾ ಯುವಜಾಥಾ

ದೇಶದ ಸ್ವಾತಂತ್ರ್ಯ, ಸಾರ್ವಭೌಮತೆಯನ್ನು ನಾಗರಿಕ ಪರಮಾಣು ಒಪ್ಪಂದ ಮೂಲಕ ಅಮೆರಿಕಾಗೆ ಒತ್ತೆಯಿಡುವ ಯುಪಿಎ ಸರ್ಕಾರದ ವಿರುದ್ಧ, ಬೆಲೆ ಏರಿಕೆ ಹಾಗೂ ಕೋಮುಗಲಭೆಗಳನ್ನು ತಡೆಗಟ್ಟಲು ವಿಫಲವಾಗಿರುವ ಕೇಂದ್ರ ಸರ್ಕಾರದ ನೀತಿ ಖಂಡಿಸಿ ಜನಜಾಗೃತಿ ಮೂಡಿಸುವ ಹಿನ್ನೆಲೆಯಲ್ಲಿ ಡಿವೈಎಫ್‌ಐ ಅಖಿಲ ಭಾರತ ಮಟ್ಟದ ಏಳು ಸ್ವಾತಂತ್ರ್ಯ ಸಂರಕ್ಷಣಾ ಜಾಥಾಗಳನ್ನು ಸಂಘಟಿಸಿದೆ. ಅದು ಅಕ್ಟೋಬರ್ 10 ರಂದು ಹೈದ್ರಾಬಾದ್‌ನಲ್ಲಿ ಉದ್ಘಾಟನೆಗೊಂಡಿದೆ. ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯರಾದ ಬಿ.ವಿ.ರಾಘವುಲು ಜಾಥಾ ಉದ್ಘಾಟಿಸಿದ್ದಾರೆ. ಡಿವೈಎಫ್‌ಐ ಅಖಿಲಭಾರತ ಅಧ್ಯಕ್ಷರಾದ ಪಿ.ಶ್ರೀರಾಮಕೃಷ್ಣನ್, ತಮಿಳುನಾಡು ಅಧ್ಯಕ್ಷರಾದ ಕಣ್ಣನ್, ಕೇರಳ ಅಧ್ಯಕ್ಷರಾದ ಪಿ.ವಿ.ರಾಜೇಶ್, ಕರ್ನಾಟಕದ ಕಾರ್ಯದರ್ಶಿ ಎನ್.ಎಲ್.ಭರತ್‌ರಾಜ್, ಆಂಧ್ರಪ್ರದೇಶದ ಕಾರ್ಯದರ್ಶಿ ಬಾಲಕಾಶಿ, ಅಧ್ಯಕ್ಷ ಪ್ರಸಾದ್ ಮುಂತಾದವರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ದಕ್ಷಿಣ ಭಾರತ ಒಂದು ಜಾಥಾ ಅಕ್ಟೋಬರ್ 15 ರಂದು ಕೆಜಿಎಫ್ ಮೂಲಕ ಕರ್ನಾಟಕದ ಗಡಿ ಪ್ರವೇಶಿಸಲಿದೆ. ಇಲ್ಲಿಂದ ಕೋಲಾರ, ಚಿಂತಾಮಣಿ, ಬಾಗೇಪಲ್ಲಿ ಮೂಲಕ ರಾಜ್ಯದ ರಾಜಧಾನಿ ಬೆಂಗಳೂರಿಗೆ ಆಗಮಿಸುವುದು. ಜಾಥಾವನ್ನು ಯಶಸ್ವಿಯಾಗಿ ಬರಮಾಡಿಕೊಳ್ಳುವ ಹಿನ್ನೆಲೆಯಲ್ಲಿ ಹಲವು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಬೈಕ್ ರ‍್ಯಾಲಿಯ ಮೂಲಕ ಜಾಥಾವನ್ನು ಸ್ವಾಗತಿಸಿ ಕರೆತಂದು ನಗರದ ಟೌನ್‌ಹಾಲ್ ಎದುರು ಸ್ವಾಗತ ಸಮಾರಂಭ ಏರ್ಪಡಿಸಲಾಗಿದೆ. ಈ ಕಾರ್ಯಕ್ರಮಗಳಿಗೆ ನಾಡಿನ ಹಿರಿಯ ಸಾಹಿತಿಗಳು, ಬುದ್ಧಿಜೀವಿಗಳು, ನಾಟಕಕಾರರು, ಕಲಾವಿದರು, ಸ್ವಾತಂತ್ರ್ಯ ಹೋರಾಟಗಾರರು ಹಾಗೂ ವಿವಿಧ ಸಾಮಾಜಿಕ ಸಂಘಟನೆಗಳ ಮುಖಂಡರು ಭಾಗವಹಿಸಲಿದ್ದಾರೆ. ಮತ್ತೆ ಇಲ್ಲಿಂದ ಮಂಡ್ಯ, ಮೈಸೂರು, ಕೊಡಗು, ಮಂಗಳೂರು ಜಿಲ್ಲೆಗಳಲ್ಲಿ ಸಂಚರಿಸಲಿದ್ದು ನಂತರ ಕೇರಳಕ್ಕೆ ತೆರಳಲಿದೆ. ಜಾಥಾದಲ್ಲಿ ಅಖಿಲ ಭಾರತ ಅಧ್ಯಕ್ಷರಾದ ಸಿ.ಶ್ರೀರಾಮಕೃಷ್ಣನ್ ಸೇರಿದಂತೆ ಹಲವು ಮುಖಂಡರು ಬರಲಿದ್ದಾರೆ. ಅಕ್ಟೋಬರ್ 21 ರಂದು ಕೇರಳದ ವಯಲಾರ್‌ನಲ್ಲಿ ಜಾಥಾ ಸಮಾರೋಪಗೊಳ್ಳಲಿದೆ. ನಂತರ ಈ ಏಳೂ ಜಾಥಾಗಳ ಸಮಾರೋಪ ನವೆಂಬರ್ 3 ಡಿವೈಎಫ್‌ಐ ಸ್ಥಾಪನಾ ದಿನದಂದು ದೆಹಲಿಯಲ್ಲಿ ನಡೆಯಲಿದೆ. ಈ ಸಂದರ್ಭದಲ್ಲಿ ಬೃಹತ್ ಯುವಜನರ ರ‍್ಯಾಲಿಯನ್ನು ಹಮ್ಮಿಕೊಳ್ಳಲಾಗಿದೆ. ○

ಚಂದ್ರಯಾನ - 1 .....

ಪುಟ 16 ರಿಂದ

ದೇಶಗಳು 'ಅತ್ಯಲ್ಪ ಶಕ್ತಿಯ ಅಣು ಪ್ರತಿಫಲನ ವಿಶ್ಲೇಷಕ ಉಪಕರಣವನ್ನು ಕೊಡಲು ಒಪ್ಪಿಕೊಂಡರೆ, ಬಲ್ಗೇರಿಯಾದ ವಿಜ್ಞಾನಿಗಳು ವಿಕಿರಣ ಮಾತ್ರಾ ವೀಕ್ಷಕಗಳನ್ನು ಅಳವಡಿಸಲಿವೆ.

ಬೆಂಗಳೂರು ಸಮೀಪದ ಹಳ್ಳಿಯಲ್ಲಿ ಆಂಟೆನಾಗಳು

ಬೆಂಗಳೂರಿನಿಂದ ಸುಮಾರು 40ಕಿ.ಮೀ ದೂರದಲ್ಲಿರುವ ಬ್ಯಾಳಲು ಗ್ರಾಮದಲ್ಲಿ 32 ಮೀಟರ್ ಮತ್ತು 18 ಮೀಟರ್ ವ್ಯಾಸವುಳ್ಳ ಎರಡು ಬೃಹತ್ ಡಿಶ್ ಆಂಟೆನಾಗಳನ್ನು ನಿರ್ಮಿಸಿದ್ದು ಚಂದ್ರಯಾನ-1 ಉಪಗ್ರಹವು ಪಯಣವನ್ನು ಅನುಸರಿಸುತ್ತ, ಅದರ ಆರೋಗ್ಯದ ಕುರಿತಂತೆ ಆದೇಶಗಳನ್ನು ರವಾನಿಸುತ್ತವೆ ಮತ್ತು ಮಾಹಿತಿಗಳನ್ನು ಸ್ವೀಕರಿಸುತ್ತವೆ.

ಭಾರತೀಯ ರಾಕೆಟ್ಟುಗಳ ಉಡಾವಣಾ ಸಾಮರ್ಥ್ಯ

ಇಸ್ರೋ ಈಗಾಗಲೇ ಪಿ.ಎಸ್.ಎಲ್.ವಿ ಮತ್ತು ಜಿ.ಎಸ್.ಎಲ್.ವಿ ರಾಕೆಟ್ ವಾಹನಗಳನ್ನು ವಿನ್ಯಾಸಗೊಳಿಸಿ ಉಪಗ್ರಹ ಉಡಾವಣೆಗಾಗಿ ಬಳಸುತ್ತಿಲಿದೆ. ಪಿ.ಎಸ್.ಎಲ್.ವಿ ಒಂದು ಟನ್ನಿಗಿಂತ ಹೆಚ್ಚು ಭಾರದ ಉಪಗ್ರಹವನ್ನು 240-36,000 ಕಿ.ಮೀ ನಂಥ ದೀರ್ಘವೃತ್ತಾಕಾರದ ಕಕ್ಷೆಗೆ ತೂರಬಲ್ಲದಾಗಿದೆ. ಅಂಥ ಒಂದು ಉಪಗ್ರಹವು ಚಂದ್ರನಿಂದ 100 ಕಿ.ಮೀ ದೂರದ ಕಕ್ಷೆಗೆ ಸೇರಿದಾಗ ಅದರ ತೂಕ 525 ಕೆಜಿಯಷ್ಟಿರುತ್ತದೆ. ಅಂತೆಯೇ ಜಿ.ಎಸ್.ಎಲ್.ವಿ ಸುಮಾರು 2ಟನ್ ತೂಕದ ಉಪಗ್ರಹವನ್ನು 180-36,000 ಕಿ.ಮೀ ನಷು ದೀರ್ಘ ವೃತ್ತಾಕಾರದ ಕಕ್ಷೆಗೆ ತೂರಬಲ್ಲದ್ದಾಗಿದ್ದು ಸುಮಾರು ಒಂದು ಟನ್ ಭಾರವುಳ್ಳ ಉಪಗ್ರಹ ಚಂದ್ರನ ಕಕ್ಷೆಗೆ ಸೇರಬಲ್ಲದು. ○

ಎಸ್‌ಎಫ್‌ಐ 13ನೇ ರಾಷ್ಟ್ರ ಸಮ್ಮೇಳನ.....

ಪುಟ 8 ರಿಂದ

ರಿಯದಂತೆ ತಡೆ ಹಿಡಿಯುತ್ತಿವೆ. ಇತ್ತೀಚೆಗೆ ಭ್ಯವಾಗುತ್ತಿರುವ ಮೊಬೈಲ್, ಈಮೇಲ್, ಂಟರ್‌ನೆಟ್ ಮುಖಾಂತರವೂ ವಿದ್ಯಾರ್ಥಿಗಳನ್ನು ದಾರಿ ತಪ್ಪಿಸುವ ಹುನ್ನಾರ ನಡೆಯುತ್ತಿದೆ.ಇದರಿಂದ ಪಾಶ್ಚಿಮಾತ್ಯ ಸಂಸ್ಕೃತಿಯ ವಿಕೃತ ಅಂಶಗಳ ಪ್ರಭಾವಕ್ಕೆ ಒಳಗಾಗುವ ಅಪಾಯವಿದೆ. ಜೊತೆಗೆ ಜಾತಿವಾದಿ-ಕೋಮುವಾದಿ ಮುಂತಾದ ಛಿದ್ರಕಾರಿ ಶಕ್ತಿಗಳ ಪ್ರಭಾವಕ್ಕೆ ಒಳಗಾಗುವ ಸಂಭವವೂ ಇದೆ. ಇಷ್ಟೆಲ್ಲಾ ವಿದ್ಯಾರ್ಥಿಗಳ ಮಧ್ಯದ ಬೆಳವಣಿಗೆಯಾದರೆ, ಶಿಕ್ಷಣ ಕ್ಷೇತ್ರದಲ್ಲಿ ವ್ಯಾಪಕವಾದ ದಿರುಕು ಬೃಹದಾಕಾರವಾಗಿ ಬೆಳೆದಿದೆ. ಒಂದೆಡೆ ಶ್ರೀಮಂತ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಮೀಸಲಾದರೆ ಬಡ ವಿದ್ಯಾರ್ಥಿಗಳಿಗೆ ಕಳಪೆಮಟ್ಟದ ಶಿಕ್ಷಣವೂ ಸಿಗದಂತಹ ಪರಿಸ್ಥಿತಿ ಬಂದೊದಗಿದೆ.

ಯುಪಿಎ ಸರ್ಕಾರದ ವಿಶ್ವಾಸದ್ರೋಹ

ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಜಿಡಿಪಿಯಲ್ಲಿ ಶೇ. 6 ರಷ್ಟನ್ನು ಶಿಕ್ಷಣಕ್ಕೆ ಮೀಸಲಿಡುತ್ತೇವೆ, ಶಿಕ್ಷಣ ಕೋಮುವಾದೀಕರಣ ತಡೆಹಿಡಿಯುತ್ತೇವೆ, ಬಡ ವಿದ್ಯಾರ್ಥಿಗಳಿಗೂ ವೃತ್ತಿ ಶಿಕ್ಷಣ ಖಾತರಿ ಪಡಿಸುತ್ತೇವೆಂದು ಹೇಳಿದ್ದ ಕೇಂದ್ರ ಸರ್ಕಾರ ಬಡ, ಹಿಂದುಳಿದ - ದಲಿತ ವಿದ್ಯಾರ್ಥಿಗಳಿಗೆ ವಿಶ್ವಾಸದ್ರೋಹ ಬಗೆದಿದೆ. ತನ್ನ ಬಜೆಟ್‌ನಲ್ಲಿ ಕೂಡ ಸರ್ಕಾರಿ ಶಾಲಾ-ಕಾಲೇಜು-ವಿ.ವಿ.ಗಳಿಗೆ ಆದ್ಯತೆ ನೀಡದೆ ಖಾಸಗಿ ವಿದೇಶಿ ವಿ.ವಿ.ಗಳಿಗೆ ಪ್ರಾಧಾನ್ಯತೆ ನೀಡಲಾಗಿದೆ. ಶಿಕ್ಷಣ ಹಕ್ಕು ಮಸೂದೆ 2005 ನ್ನು ಜಾರಿಗೆ ತರಲು ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶಿಸದೆ ಕಾಂಗ್ರೆಸ್ ಪಕ್ಷ ಮಹಾವಂಚನೆಯನ್ನು ಮುಂದುವರೆಸಿಕೊಂಡು ಬಂದಿದೆ. ಶಿಕ್ಷಣವನ್ನು ಖಾಸಗೀಕರಣ ಮಾಡಲಾಗುತ್ತಿದೆ. ಹೀಗಾಗಿಯೇ ವಿದೇಶಿ ನೇರ ಬಂಡವಾಳವನ್ನು ಶಿಕ್ಷಣ ಕ್ಷೇತ್ರದಲ್ಲಿ ಜಾರಿಗೆ ತರಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ಉನ್ನತ ಶಿಕ್ಷಣದಲ್ಲಿ ಸಮಗ್ರವಾಗಿ ಮೀಸಲಾತಿಯನ್ನು ಜಾರಿಗೆ ತರಲಾಗದೆ ಪಟ್ಟಭದ್ರ ಶಕ್ತಿಗಳ ಜೊತೆ ಕೈಜೋಡಿಸಿದೆ. 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಖಾಸಗಿಯವರಿಗೆ ಶಿಕ್ಷಣ ಕ್ಷೇತ್ರದಲ್ಲಿ ಮುಕ್ತ ಪ್ರವೇಶಿಸಲು ವ್ಯಾಪಕ ಅವಕಾಶ ನೀಡಲಾಗಿದೆ.

ಇಂತಹ ದೇಶ ವಿರೋಧಿ ನೀತಿಗಳನ್ನು ಜಾರಿಗೆ ತರುತ್ತಿರುವ ಸಂದರ್ಭದಲ್ಲಿ ನಡೆದ 13ನೇ ಎಸ್‌ಎಫ್‌ಐ ಅಖಿಲ ಭಾರತ ಸಮ್ಮೇಳನದಲ್ಲಿ ತನ್ನ ಮೂರು ವರ್ಷಗಳ ಹಿಂದಿನ ಮಧ್ಯಪ್ರವೇಶ - ಸಾಧನೆ - ಸವಾಲುಗಳನ್ನು ಮನನ ಮಾಡಿಕೊಳ್ಳಲಾಯಿತು. ಕಳೆದ 12ನೇ ಸಮ್ಮೇಳನದಲ್ಲಿ ಗುರುತಿಸಿಕೊಂಡಿದ್ದಂತೆ ಆದ್ಯತೆವಾರು ಸಂಘಟನೆಯ ಕೆಲಸ, ಸ್ಪಷ್ಟ ಗುರಿಯೊಂದಿಗೆ ಸಂಘಟನೆಯನ್ನು ಬಲಿಷ್ಠಗೊಳಿಸುವುದು, ಜಾತಿ ತಾರತಮ್ಯದ ವಿರುದ್ಧ ಹೋರಾಟ, ಸಂಘಟನಾ ಸೈದ್ಧಾಂತಿಕ ತಿಳುವಳಿಕೆಯನ್ನು ಪ್ರಮುಖ ಕಾರ್ಯಕರ್ತರಲ್ಲಿ ಹೆಚ್ಚಿಸುವುದು ಮುಂತಾದ ಗುರಿಗಳನ್ನು ಸಾಧಿಸಲು ಸಾಧ್ಯವಾಗಿದೆಯೇ - ಇಲ್ಲವೇ, ಸಾಧಕ ಬಾಧಕಗಳೇನು? ಎಂಬುದನ್ನು ವಿಮರ್ಶೆ- ಸ್ವಯಂ ವಿಮರ್ಶೆಯೊಂದಿಗೆ ಅವಲೋಕಿಸಲಾಯಿತು.



ಎಸ್ಎಫ್ಐ ಮಾಜಿ ನಾಯಕರ ಸಮಾಗಮ

ಮುಖ್ಯವಾಗಿ ಪ್ರಸಕ್ತ ಉಲ್ಬಣಿಸಿರುವ ಶೈಕ್ಷಣಿಕ ಸಮಸ್ಯೆಗಳ ಪರಿಹಾರಕ್ಕಾಗಿ 'ಸರ್ವರಿಗೂ ಸಮಾನ ಗುಣಮಟ್ಟದ ಶಿಕ್ಷಣಕ್ಕಾಗಿ, ಸರ್ವ ಸಮಾನತೆಗಾಗಿ, ಸಾಮಾಜಿಕ ನ್ಯಾಯಕ್ಕಾಗಿ, ಶೈಕ್ಷಣಿಕ ಬೇಡಿಕೆಗಳ ಆಧಾರದಲ್ಲಿ ಆಯೋಜಿಸಿದ್ದ ರಾಷ್ಟ್ರಮಟ್ಟದ ಜಾಥಾ, ಪ್ರಸಕ್ತ ವಿದ್ಯಮಾನದಲ್ಲಿ ಎಸ್‌ಎಫ್‌ಐ ಸಂವಿಧಾನ ಕಾರ್ಯಕ್ರಮದಂತೆ ಸಂಘಟನೆಯ ವಿಧಾನಗಳನ್ನು ಅಳವಡಿಸಿಕೊಳ್ಳಲು ನಡೆದ ಸಂಘಟನಾ ಸಮಾವೇಶ ನಡೆಸಿ, ಸಂಘಟನಾ ದಾಖಲೆಯನ್ನು ಅಂಗೀರಿಸಿದ್ದು. ಸಂಘಟನೆಯು ಕಲೆಯೂ ಹೌದು, ವಿಜ್ಞಾನವೂ ಹೌದು ಎಂಬುದನ್ನು ಮನಗಾಣಲು ಸಾಧ್ಯವಾಗಿದ್ದು, ಅದೇ ರೀತಿಯಲ್ಲಿ ವಿದ್ಯಾರ್ಥಿನಿಯರ ರಾಷ್ಟ್ರೀಯ ಸಮಾವೇಶ, ಶೈಕ್ಷಣಿಕ ರಾಷ್ಟ್ರೀಯ ಸಮಾವೇಶ, ಓಬಿಸಿ ವಿದ್ಯಾರ್ಥಿಗಳಿಗೆ ಶೇ. 27 ಮೀಸಲಾತಿಗಾಗಿ ವ್ಯಾಪಕ ಬೆಂಬಲ ಮತ್ತು ರಾಷ್ಟ್ರಾದ್ಯಂತ ಹೋರಾಟ. ಶೈಕ್ಷಣಿಕ ರಂಗದ ಬಿಕ್ಕಟ್ಟು ಮತ್ತು ಪರ್ಯಾಯ ಕುರಿತು ಹಲವಾರು ಪ್ರಕಟಣೆಗಳು. ಅಮೆರಿಕಾ ಅಧ್ಯಕ್ಷ ಜಾರ್ಜ್ ಬುಶ್ ಭಾರತ ಆಗಮನದ ವಿರುದ್ಧ ರಾಷ್ಟ್ರಾದ್ಯಂತ ಪ್ರತಿಭಟನೆ, ಭಾರತ - ಅಮೆರಿಕಾ ಅಣು ಒಪ್ಪಂದದ ವಿರುದ್ಧ ವ್ಯಾಪಕ ಪ್ರತಿಭಟನೆ. ಕೇಂದ್ರ ಸರ್ಕಾರದ ದಲಿತ ವಿದ್ಯಾರ್ಥಿ ವಿರೋಧಿ ನೀತಿಗಳ ವಿರುದ್ಧ ಧರಣಿ, ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಲು ಕೇಂದ್ರೀಯ ಶಾಸನಕ್ಕಾಗಿ ಆಗ್ರಹಿಸಿ ಪಾರ್ಲಿಮೆಂಟ್ ಚಲೋ ಮುಂತಾದ ಐತಿಹಾಸಿಕ ಚಳುವಳಿಗಳನ್ನು ಕಳೆದ ಮೂರು ವರ್ಷಗಳಲ್ಲಿ ನಡೆಸಲು ಸಾಧ್ಯವಾಗಿದೆ. ಇಂತಹ ಪರಿಣಾಮಕಾರಿ ಚಳುವಳಿ - ಪ್ರಚಾರ - ಪ್ರಕ್ಷೋಭೆಗಳನ್ನು ರೂಪಿಸಿದ್ದರ ಪರಿಣಾಮವೇ ಇಂದು ಎಸ್‌ಎಫ್‌ಐ ಸಂಘಟನೆ ಬೃಹತ್ ಸಂಘಟನೆಯಾಗಿ ಹೊರಹೊಮ್ಮಿದೆ. ಕಳೆದ 12ನೇ ಸಮ್ಮೇಳನದಲ್ಲಿ 2005-06 ರಲ್ಲಿ 34,76,666 ಇದ್ದ ಸದಸ್ಯತ್ವ 2007-08 ರಲ್ಲಿ 43, 32, 999 ರಷ್ಟು ದಾಟಿದೆ.



ಎಸ್ಎಫ್ಐ ನೂತನ ರಾಷ್ಟ್ರಾಧ್ಯಕ್ಷ ಕಾಂ. ಬಿಜು

ವ್ಯಾಪಕವಾಗಿ ಸದಸ್ಯತ್ವದಲ್ಲಿ - ಚಳುವಳಿಯಲ್ಲಿ ಏರಿಕೆ ಕಂಡಿದ್ದರೂ ಇದೂ ದೇಶಾದ್ಯಂತ ಬೆಳವಣಿಗೆಯ ಸೂಚನೆಯಲ್ಲ ಎಂಬುದನ್ನು ಸಮ್ಮೇಳನ ಮನಗಂಡಿತು. ಬಲಿಷ್ಠ ರಾಜ್ಯಗಳಿಂದ ಮುಖ್ಯವಾಗಿ ಪಶ್ಚಿಮ ಬಂಗಾಳ, ಕೇರಳ, ತ್ರಿಪುರ, ಆಂಧ್ರಪ್ರದೇಶ ರಾಜ್ಯಗಳೇ ಶೇ. 87.03 ರಷ್ಟುಸದಸ್ಯತ್ವವನ್ನ ಹೊಂದಿವೆ. ಉಳಿದಂತೆ ಅಭಿವೃದ್ಧಿ ಹೊಂದುತ್ತಿರುವ ರಾಜ್ಯಗಳಾದ ತಮಿಳುನಾಡು, ಕರ್ನಾಟಕ, ರಾಜಸ್ತಾನ, ಹಿಮಾಚಲಪ್ರದೇಶ, ಮಹಾರಾಷ್ಟ್ರ, ಬಿಹಾರ್, ಅಸ್ಸಾಂ, ಹರಿಯಾಣ ಶೇ. 10.41 ರಷ್ಟು ಸದಸ್ಯತ್ವ ಹೊಂದಿವೆ. ಉಳಿದಂತೆ 11 ರಾಜ್ಯಗಳ ಸದಸ್ಯತ್ವ ಕೇವಲ ಶೇ. 1.74 ಮಾತ್ರ. ಇಂತಹ ವ್ಯತ್ಯಾಸವನ್ನು ಗಂಭೀರವಾಗಿ ಮನಗಂಡು ಹಿಂದಿ ಮಾತನಾಡುವ ರಾಜ್ಯಗಳಲ್ಲೂ ಸಂಘಟನೆಯನ್ನು ಬಲಪಡಿಸುವ ಅಗತ್ಯವನ್ನು ಸಮ್ಮೇಳನ ಮನಗಂಡಿತು. ಪ್ರಮುಖವಾಗಿ ಕಳೆದ ಮೂರು ವರ್ಷಗಳಲ್ಲಿ ನಡೆಸಿದ ಹೋರಾಟಗಳಲ್ಲಿ ಕಲಿತ ಪಾಠವೆಂದರೆ ದಲಿತ -ಬುಡಕಟ್ಟು ಮತ್ತು ಇತರೆ ಹಿಂದುಳಿದ ವಿದ್ಯಾರ್ಥಿಗಳ ಮಧ್ಯ ಸಂಘಟನೆಯನ್ನು ವಿಸ್ತರಿಸಲು ಸಾಧ್ಯವಾಗಿದ್ದು, ಮುಖ್ಯವಾಗಿ ಆಂಧ್ರಪ್ರದೇಶ, ತಮಿಳುನಾಡು, ಕರ್ನಾಟಕ ರಾಜ್ಯಗಳ ದಲಿತ-ಹಿಂದುಳಿದ ಹಾಸ್ಟೆಲ್ ವಿಚಾರಗಳನ್ನಷ್ಟೇ ಅಲ್ಲದೆ ಅಸ್ಪೃಶ್ಯತೆಯ ಆಚರಣೆ ದಲಿತ ವಿದ್ಯಾರ್ಥಿಗಳ ಮೇಲಾಗುತ್ತಿರುವ ಅಸ್ಪೃಶ್ಯ-ಜಾತಿ ತಾರತಮ್ಯಗಳ ವಿರುದ್ಧವೂ ವ್ಯಾಪಕ ಹೋರಾಟ ನಡೆಸಲಾಗಿದೆ. ಮುಂದೆಯೂ ಸಹ ಇತರೆ ರಾಜ್ಯ-ರಾಷ್ಟ್ರ ಮಟ್ಟದಲ್ಲಿ ದಮನಿತ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಆಧರಿಸಿ ಬಲಿಷ್ಠ ಚಳುವಳಿಯನ್ನು ರೂಪಿಸುವ ಅಗತ್ಯವಿದೆ ಎಂದು ಸಮ್ಮೇಳನ ನಿರ್ಣಯವನ್ನು ಅಂಗೀಕರಿಸಿತು.


ರಾಜ್ಯದಿಂದ ತೆರಳಿದ್ದ ಪ್ರತಿನಿಧಿಗಳ ತಂಡ

ಮುಂದಿನ ಸವಾಲು

1. ಸಂಘಟನೆಯನ್ನು ಶಿಕ್ಷಣ ಸಂಸ್ಥೆಯಾಧಾರಿತವಾಗಿ ಸ್ಥಳೀಯ ಬೇಡಿಕೆಗಳನ್ನು ಆದರಿಸಿ, ಹೊಸ ಆರ್ಥಿಕ ನೀತಿಗಳು, ಸರ್ಕಾರಗಳ ಧೋರಣೆಗಳನ್ನು ಮನದಟ್ಟು ಮಾಡುವಂತೆ ಸಂಘಟನೆಯನ್ನು ಬಲಪಡಿಸಲು ಆದ್ಯತೆ ನೀಡುವುದು.

2. ಆದ್ಯತೆವಾರು ಯೋಜಿತ ಚಟುವಟಿಕೆಗಳನ್ನು ಎಲ್ಲಾ ಹಂತಗಳಲ್ಲೂ ರೂಪಿಸುವುದು.

3. ವಿಶ್ವವಿದ್ಯಾಲಯಗಳನ್ನು ಗುರುತಿಸಿ ಸಂಘಟನೆಯನ್ನು ಬಲಪಡಿಸುವುದು.

4. ಕೋಮುವಾದ ಮತ್ತು ಸಾಮ್ರಾಜ್ಯಶಾಹಿಗಳ ವಿರುದ್ಧ ಬಲಿಷ್ಠ ಹೋರಾಟ

5. ಸಾಮಾಜಿಕ, ಆರ್ಥಿಕ ವಿಷಯಗಳ ಆಧಾರದಲ್ಲಿ ತುಳಿತಕ್ಕೊಳಗಾದ ವಿದ್ಯಾರ್ಥಿಗಳ ಮಧ್ಯೆ ಸಂಘಟನೆ ಬೆಳೆಸುವುದು.

6. ಇತರ ಸಮಾನಮನಸ್ಕ ಸಂಘಟನೆಗಳೊಂದಿಗೆ ಐಕ್ಯ ಹೋರಾಟ ರೂಪಿಸುವುದು ಹಾಗೂ ಶೈಕ್ಷಣಿಕ ಸಮುದಾಯವನ್ನು ನಮ್ಮ ವಿದ್ಯಾರ್ಥಿ ಸಂಘಟನೆಯೊಂದಿಗೆ ಬೆಸೆಯುವುದು.

ರಾಜ್ಯದಿಂದ ಪ್ರತಿನಿಧಿಗಳು, ಕೇಂದ್ರ ಸಮಿತಿಗೆ ಆಯ್ಕೆಯಾದ ವಿದ್ಯಾರ್ಥಿ ಮುಖಂಡರು.

ಎಸ್‌ಎಫ್‌ಐ ಅಖಿಲ ಭಾರತ ಉಪಾಧ್ಯಕ್ಷರಾಗಿದ್ದ ಬಿ.ರಾಜಶೇಖರ ಮೂರ್ತಿ, ಸಿಇಸಿ ಸದಸ್ಯರಾಗಿದ್ದ ಹೆಚ್.ಆರ್.ನವೀನ್ ಕುಮಾರ್, ಎಂ.ಪಿ.ಮುನಿ ವೆಂಕಟಪ್ಪ ನವರೊಂದಿಗೆ ರಾಜ್ಯದಿಂದ 22 ಪ್ರತಿನಿಧಿಗಳು, ಇಬ್ಬರು ವೀಕ್ಷಕರಾಗಿ ಒಟ್ಟು 24 ಜನ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ನೂತನವಾಗಿ ಆಯ್ಕೆಯಾದ ಕೇಂದ್ರ ಸಮಿತಿಯಲ್ಲಿ ರಾಜ್ಯದಿಂದ ಒಟ್ಟು ನಾಲ್ಕು ವಿದ್ಯಾರ್ಥಿ ಮುಖಂಡರು ಆಯ್ಕೆಯಾಗಿದ್ದು ಹೆಚ್.ಆರ್.ನವೀನ್ ಕುಮಾರ್ ರಾಜ್ಯ ಅಧ್ಯಕ್ಷರು, ಅನಂತನಾಯಕ್- ರಾಜ್ಯ ಕಾರ್ಯದರ್ಶಿ, ಹುಳ್ಳಿ ಉಮೇಶ್-ರಾಜ್ಯ ಉಪಾಧ್ಯಕ್ಷರು ಹಾಗೂ ವಿದ್ಯಾರ್ಥಿನಿ ಮುಖಂಡರಾದ ಹಾಸನದ ಉಷಾರವರು ಕೇಂದ್ರ ಕಾರ್ಯಕಾರಿ ಸಮಿತಿಗೆ ಆಯ್ಕೆಯಾಗಿದ್ದಾರೆ.

ವೈದ್ಯ ವೃತ್ತಿಗೆ ತಗಲಿರುವ ಶಾಪಗಳು

ಜನಾರೋಗ್ಯ



ಡಾ. ಪ್ರಕಾಶ್ ಸಿ ರಾವ್

ವೈದ್ಯವೃತ್ತಿ ನೂರಾರು ವರ್ಷಗಳಿಂದ ಜನರ ಆರೋಗ್ಯ ಸೇವೆ ಮಾಡುತ್ತಾ ಬಂದಿದೆ. ವೈದ್ಯ ವೃತ್ತಿಯಲ್ಲಿರುವವರು ಖಾಸಗಿ ವೈದ್ಯರೇ ಹೆಚ್ಚು ಸಂಖ್ಯೆಯಲ್ಲಿ. ವೈದ್ಯರೆಂದರೆ ದೇವರಿಗೆ ಸಮಾನ ಅನ್ನುವ ಮನೋಭಾವನೆ ಜನರಲ್ಲಿದೆ. ಆದರೆ ಇತ್ತೀಚಿಗಿನ ದಶಕಗಳಲ್ಲಿ ವೈದ್ಯವೃತ್ತಿ ವ್ಯಾಪಾರೀಕರಣಗೊಳ್ಳುತ್ತಿದೆ. ಜನರು ಈಗೀಗ ಅರ್ಥವಮಾಡಿಕೊಳ್ಳುತ್ತಿದ್ದಾರೆ. ಈ ವ್ಯಾಪಾರೀಕರಣದಿಂದಾಗಿ ವೈದ್ಯವೃತ್ತಿಯಲ್ಲಿ ಬದಲಾವಣೆಯಾಗುತ್ತಿದೆ. ಜನಸಾಮಾನ್ಯರಿಗೆ ದಿನನಿತ್ಯದ ಆರೋಗ್ಯ ಸಮಸ್ಯೆಗಳಿಗೆ ಸುಲಭವಾದ ಪರಿಹಾರ ಪಡೆಯಲು ಮೊದಲಿನಷ್ಟು ಸುಲಭವಾಗಿಲ್ಲ ಹಾಗೂ ದುಬಾರಿಯಾಗುತ್ತಿದೆ. ಈ ಬದಲಾವಣೆಯಿಂದ ವೈದ್ಯವೃತ್ತಿ ಏಳು ಶಾಪಗಳಿಗೆ ಗುರಿಯಾಗಿದೆ!

ಶಾಪ - 1 ಗೊಂದಲಮಯ ವೃತ್ತಿ

ಈ ವೃತ್ತಿಯಲ್ಲಿ ಜೀವ ಹಾಗೂ ಮರಣಗಳ ಮಧ್ಯೆಹೋರಾಟವಿರುತ್ತದೆ. ಆದರೂ ಈ ವೃತ್ತಿಯವರು ವಿಜ್ಞಾನ ಹಾಗೂ ಅಜ್ಞಾನದ ದುರ್ಬಳಕೆ ಮಾಡಿ, ಲಾಭ ಪಡೆಯಲು ಮುಂದಾಗಿದ್ದಾರೆ. ಜನರು ಯಾವುದೇ ಆರೋಗ್ಯ ಸಮಸ್ಯೆ ಬಂದಾಗ ತಮ್ಮ ಅಭ್ಯಾಸದ ಬಲದಿಂದ ತಮ್ಮ ವೈದ್ಯರಲ್ಲಿಗೆ ಹೋಗುತ್ತಾರೆ. ಕೆಲವು ಬಾರಿ ಸ್ನೇಹಿತರ, ಅಥವಾ ಇತರರ ಆದೇಶದಂತೆ ವೈದ್ಯರನ್ನು ಆರಿಸಿಕೊಂಡು ಮುಂದಾಗುತ್ತಾರೆ. ಕೆಲವರು ವೈದ್ಯರನ್ನು ಕಾಣದೇ ನೇರವಾಗಿ ಔಷಧಿ ಅಂಗಡಿಯಿಂದ ಔಷಧಿಯನ್ನು ತಂದು ಉಪಯೋಗಿಸುತ್ತಾರೆ. ಇನ್ನು ಕೆಲವರು ನೇರವಾಗಿ ಆಸ್ಪತ್ರೆ, ನರ್ಸಿಂಗ್ ಹೋಂ, ವಿಶೇಷ ಆಸ್ಪತ್ರೆ (ನಿಮ್ಹಾನ್ಸ್) ಮುಂತಾದವುಗಳಿಗೆ ಭೇಟಿ ನೀಡಿ ಚಿಕಿತ್ಸೆ ಪಡೆಯಲು ಮುಂದಾಗುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಕೆಲವರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿದರೆ, ಇನ್ನೂ ಕೆಲವರು ದೂರದ ಪಟ್ಟಣಗಳಲ್ಲಿದ್ದ ವೈದ್ಯರ ಹತ್ತಿರ ವಿಪರೀತ ಖರ್ಚು ಮಾಡಿಕೊಂಡು ಗುಣಹೊಂದುವ ಭರವಸೆಯಿಂದ ಹೋಗುತ್ತಾರೆ. 'ಅಲೋಪತಿ ಪದ್ಧತಿಯಲ್ಲಿ ಅಡ್ಡಪರಿಣಾಮಗಳು ಜಾಸ್ತಿ, ಆದ್ದರಿಂದ ನಾವು ಆಯುರ್ವೇದ ಔಷಧಿಯನ್ನೇ ಉಪಯೋಗಿಸುತ್ತೇವೆ' ಎಂದು ಮೂತ್ರಕೋಶದ ಕಲ್ಲು ಕರಗಿಸಲು 6 ತಿಂಗಳಿಂದ ಆಯುರ್ವೇದ ಚಿಕಿತ್ಸೆ ಪಡೆಯುವ ವ್ಯಕ್ತಿಗಳೂ ಕಾಣಸಿಗುತ್ತಾರೆ. ಸಂತಾನ ಭಾಗ್ಯವನ್ನು ವೃದ್ಧಿಸಲು ಹೋಮಿಯೋಪತಿ ವೈದ್ಯನ ಜಾಹಿರಾತಿನ ಮೇರೆಗೆ ದಿನನಿತ್ಯದ ಸಮಸ್ಯೆಗಳಿಗೆ ನನ್ನ ಚಿಕಿತ್ಸೆ ಪಡೆಯುವ ರೋಗಿ ಆಝೂಸ್ಪರ್ಮಿಯಾ (ವಿರ್ಯಾಣುಗಳು ಇಲ್ಲ) ಚಿಕಿತ್ಸೆಗೆ ಹೋಗಿದ್ದು ನನಗೆ ಆಶ್ಚರ್ಯ ಉಂಟು ಮಾಡಿತ್ತು.

ಇಂಗ್ಲೆಂಡ್, ಅಮೆರಿಕಾ, ಇಸ್ರೇಲ್, ಮಲೇಶಿಯಾ ಹಾಗೂ ಇತರೆ ಅನೇಕ ದೇಶಗಳಲ್ಲಿ ಜನರು ಪ್ರಥಮ ಹಂತದ ಚಿಕಿತ್ಸೆಗೆ ಕುಟುಂಬ ವೈದ್ಯರ ಅಥವಾ ಪ್ರಾಥಮಿಕ ಆರೋಗ್ಯ ವೈದ್ಯರ ಹತ್ತಿರ ಹೋಗುತ್ತಾರೆ. ಹಾಗೂ ಆ ವೈದ್ಯನ ಆದೇಶದಂತೆ ಇತರೆ ವೈದ್ಯ ಹತ್ತಿರ ಹೋಗುತ್ತಾರೆ. ಆದರೆ ನಮ್ಮ ದೇಶದಲ್ಲಿ ಈ ಕುಟುಂಬ ವೈದ್ಯನ ಪರಿಕಲ್ಪನೆ ಸ್ಪಷ್ಟವಾಗಿಲ್ಲ. ಯಾವ ವೈದ್ಯನ ಹತ್ತಿರ ಹೋಗಬೇಕು, ಯಾವಾಗ ಎಂಬುದಕ್ಕೆ ಯಾರಿಗೂ ಮಾರ್ಗದರ್ಶನವಿಲ್ಲ. ಈ ಆದೇಶ ನೀಡುವ ಪದ್ಧತಿ (Refferal System) ನಮ್ಮಲ್ಲಿಲ್ಲದಿರುದರಿಂದ ಈ ಗೊಂದಲ ಉಂಟಾಗಿದೆ. ಗೊಂದಲದಿಂದ ಪೈಪೋಟಿ ಇತ್ಯಾದಿ. ಇದರ ಬಗ್ಗೆ ಸರ್ಕಾರ ಯಾ... ಮಾರ್ಗದರ್ಶನವನ್ನು ನೀಡುತ್ತಿಲ್ಲ. ಕಾರಣ ... ಗೊಂದಲಕ್ಕೆ ಸರ್ಕಾರವೂ ಪ್ರತ್ಯಕ್ಷವಾಗಿ ಹಾಗ... ಪರೋಕ್ಷವಾಗಿ ಕಾರಣವಾಗಿದೆ. ಈ ಪದ್ಧತಿ ಜಾರಿ... ಬರದೇ ಇದ್ದುದಕ್ಕೆ ವೈದ್ಯ ವೃತ್ತಿಯೂಕಾರಣ... ಇದರಿಂದಾಗಿ ಜನರು ದುಬಾರಿ ಚಿಕಿತ್ಸೆಗಳನ್ನು ಅನಗತ್ಯ ಚಿಕಿತ್ಸೆಗಳನ್ನು ಪಡೆಯಬೇಕಾಗಿದೆ. ಆರೋ... ನೀತಿಯನ್ನು ರೂಪಿಸುವಾಗ ವೈದ್ಯ ವೃತ್ತಿ, ... ಬದಲಾವಣೆ ತರಲು ಸರ್ಕಾರದ ಮೇಲೆ ಒತ್ತ... ಹೇರಬೇಕು. ಜನರಿಗೆ ಕುಟುಂಬ ವೈದ್ಯ... ಪರಿಕಲ್ಪನೆಯನ್ನು ತಿಳಿಸಬೇಕು. ನಂತರ ಅವರ ರೋಗಿಯನ್ನು ಎಲ್ಲಿಗೆ ಹೋಗಬೇಕೆಂಬುದಕ್ಕೆ ಆದೇ... ನೀಡುವ ಪದ್ಧತಿ ಜಾರಿಗೆ ಬಂದರೆ, ಗೊಂದ... ನಿವಾರಣೆಯಾಗುತ್ತದೆ. ಈಗಲೂ ಜನಸಾಮಾನ್ಯರಿ... ಈಗಿರುವ ಪದ್ಧತಿಯಿಂದ ಆದ ಯಾ... ಗೊಂದಲವೂ ಕಂಡುಬರುತ್ತಿಲ್ಲ. ಆದರೆ ಅವರ ಮೌನವಾಗಿ ಬೆಲೆ ತೆರುತ್ತಿದ್ದಾರೆ. ಕುಟುಂಬ ವೈ... ಸರಿಪಡಿಸಬಹುದಾದ ಸಮಸ್ಯೆಗಳಿಗೆ ಸಮಯ ಹಾಗೂ ಹಣ ವೆಚ್ಚ ಮಾಡಿ ಆಸ್ಪತ್ರೆಗಳಿ... ಹೋಗುವುದು ಸ್ಪೆಷಲಿಸ್ಟ್ ಹತ್ತಿರ ಹೋಗುವುದ... ಸಾಮಾನ್ಯವಾಗಿದೆ.

○

ಎಸ್‌ಎಫ್‌ಐ 13ನೇ ರಾಷ್ಟ್ರ ಸಮ್ಮೇಳನ

'ಕಾಂಗ್ರೆಸ್‌ನಿಂದ ದೇಶದ ಸಾರ್ವಭೌಮತ್ವ ನಾಶ ಬಿಜೆಪಿಯಿಂದ ಬೌದ್ಧಿಕ ದಿವಾಳಿತನ'

ಪ್ರೊ. ಅಮಿಯಾ ಬಾಗಚಿ

ಬ್ರಿಟಿಷ್ ಸಾಮ್ರಾಜ್ಯಶಾಹಿಗಳಿಂದ ಮುಕ್ತಿ ಪಡೆದ ನಂತರದಲ್ಲಿ 1952 ರಲ್ಲಿ ಗಣರಾಜ್ಯಗಳನ್ನೊಳಗೊಂಡ ಭಾರತ ತನ್ನ ಸಂವಿಧಾನದಲ್ಲಿ ಸೌಹಾರ್ದ, ಜಾತ್ಯಾತೀತ, ಪ್ರಜಾಪ್ರಭುತ್ವ ಹಾಗೂ ಸಮಾಜವಾದಿ ನೆಲೆಯ ಆಶಯಗಳನ್ನು ಹೊಂದಿತ್ತು. ನಮ್ಮ ಭಾರತದ ಸಂವಿಧಾನ ಮೂಲ ಆಶಯದಲ್ಲಿ 'ಎಲ್ಲಾ ನಾಗರಿಕರಿಗೂ ಸಾಮಾಜಿಕ ನ್ಯಾಯ ಮತ್ತು ಸಮಾನ ಅವಕಾಶಗಳನ್ನು ಖಾತರಿಪಡಿಸುವ ಧ್ಯೇಯ ಹೊಂದಿದೆ. ಪರಸ್ಪರ ಎಲ್ಲಾ ನಾಗರಿಕರಿಗೂ ಗೌರವ ನೀಡುವ ಮುಖಾಂತರ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ನಮ್ಮ ಸಂವಿಧಾನದಲ್ಲಿ ಎತ್ತಿ ಹಿಡಿಯಲಾಗಿದೆ. ಇಂತಹ ಮಹತ್ತರ ಆಶಯವನ್ನು ಜಾರಿಗೆ ತರುವ ಬದಲಿಗೆ ಆಳುವ ಸರ್ಕಾರಗಳು ಸಾಮ್ರಾಜ್ಯಶಾಹಿ - ಬಂಡವಾಳಶಾಹಿ ಏಜೆಂಟರಾಗಿದ್ದಾರೆಂದು ಖ್ಯಾತ ಅರ್ಥಶಾಸ್ತ್ರಜ್ಞ, ಸಮಾಜ ವಿಜ್ಞಾನಿ ಹಾಗೂ ಶಿಕ್ಷಕರೂ ಆಗಿರುವ ಪ್ರೊ. ಅಮಿಯಾ ಬಾಗಚಿಯವರು ಹೇಳಿದರು. ಅವರು ಎಸ್‌ಎಫ್‌ಐ 13ನೇ ಅಖಿಲ ಭಾರತ ಸಮ್ಮೇಳನವನ್ನು ಸೆ. 27 ರಂದು ಕೊಲ್ಕೊತ್ತಾದಲ್ಲಿ ಉದ್ಘಾಟಿಸಿ ಈ ಮಾತುಗಳನ್ನು ಹೇಳಿದರು.

ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರ ಹೊರತುಪಡಿಸಿ ಇತರೆಡೆ ಪಾಳೆಗಾರಿ ವ್ಯವಸ್ಥೆಯ ಹಿಡಿತ, ಜಾತಿ ಪದ್ಧತಿ, ಅಸ್ಪೃಶ್ಯತೆ ಸಡಿಲವಾಗದೇ ಹಾಗೆ ಮುಂದುವರೆದಿದೆ. ಜೊತೆಗೆ ಬಂಡವಾಳಶಾಹಿ ಪದ್ಧತಿಯಿಂದ ಬಹುತೇಕ ಜನತೆ ಬಡತನ - ನಿರುದ್ಯೋಗದಿಂದ ಬಳಲುತ್ತಿದ್ದಾರೆ. ಕೆಲವೇ ಶ್ರೀಮಂತ ಕಂಪನಿಗಳು ಲಾಭಗಳಿಸುವಂತೆ ನೀತಿಗಳನ್ನು ಆಳುವ ಸರ್ಕಾರಗಳು ಜಾರಿಗೆ ತಂದು ತೆರಿಗೆ ವಿನಾಯ್ತಿಗಳನ್ನು ನೀಡುತ್ತಿವೆ. ದೇಶವನ್ನು ಅಭಿವೃದ್ಧಿ ಪಡಿಸಲು ಬುನಾದಿಯಾಗಿದ್ದ ಸಾರ್ವಜನಿಕ ಉದ್ದಿಮಗಳು ಬೆಳೆಯದಂತೆ ಬಂಡವಾಳಶಾಹಿಗಳು ತಡೆಯೊಡ್ಡಿವೆ. ಸಣ್ಣ ಕೈಗಾರಿಕೆ ಮತ್ತು ಕೃಷಿ ವಲಯಕ್ಕೆ ನೀಡುತ್ತಿದ್ದ ಬ್ಯಾಂಕ್ ಸಾಲಗಳನ್ನು ನಿಲ್ಲಿಸಲಾಗಿದೆ. ಸರ್ಕಾರಗಳ ಹೊಸ ಆರ್ಥಿಕನೀತಿಗಳಿಂದ ಕೃಷಿ ಮಾಡುವ ರೈತರಿಗೆ ಸಾಲನೀಡುವ ಬದಲಾಗಿ ದೊಡ್ಡ ದೊಡ್ಡ ಉದ್ಯಮಿಗಳು ನಡೆಸುವ ಕಾರ್ಖಾನೆಗಳಿಗೆ ಸಾಲವನ್ನು ಸರ್ಕಾರಗಳು ನೀಡಲು ಹೊರಟಿವೆ. ಇತ್ತೀಚಿನ ವರ್ಷಗಳಲ್ಲಿ ಸುಮಾರು 2 ಲಕ್ಷ ಅನ್ನದಾತ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಂತಹ ಗಂಭೀರ ಬೆಳವಣಿಗೆಗಳ ಬಗೆಗೆ ಆಳುವ ಸರ್ಕಾರಗಳು ಗಮನ ಕೇಂದ್ರೀಕರಿಸುತ್ತಿಲ್ಲವೆಂದು ಪ್ರೊ. ಅಮಿಯಾರವರು ಸರ್ಕಾರಗಳ ಬಂಡವಾಳಶಾಹಿ ಪರಧೋರಣೆಯನ್ನು ಖಂಡಿಸಿದರು.

ಶಿಕ್ಷಣ ಕ್ಷೇತ್ರವಂತೂ ಆಳುವ ಸರ್ಕಾರಗಳು ಸಂಪೂರ್ಣವಾಗಿ ಖಾಸಗಿ ಒಡೆತನಕ್ಕೆ ವಹಿಸಿಕೊಡುವ ಹುನ್ನಾರದಲ್ಲಿವೆ. ಬಜೆಟ್‌ನಲ್ಲಿ ಶಿಕ್ಷಣಕ್ಕೆ ಹಣ ಕಡಿತ ಮಾಡಲಾಗುತ್ತಿದೆ. ಜಿಡಿಪಿಯಲ್ಲಿ 1.5 ರಷ್ಟನ್ನು ಶಿಕ್ಷಣ ಕ್ಷೇತ್ರಕ್ಕೆ ಬಳಸುವ ಇಚ್ಛೆಯನ್ನು ಹೊಂದಿಲ್ಲ. ಆದರೂ ಹೊಸದಾಗಿ 1500 ವಿಶ್ವವಿದ್ಯಾಲಯಗಳನ್ನು ತೆರೆಯಲು ಅಂದಾಜಿಸಲಾಗಿದೆ. ಇದಕ್ಕೆಲ್ಲಾ ರಾಜ್ಯ ಸರ್ಕಾರಗಳೇ ಹಣ ಭರಿಸುವಂತೆ ಒತ್ತಡ ಹೇರಲಾಗುತ್ತಿದೆ. ಇನ್ನೊಂದೆಡೆ ಖಾಸಗಿ ಒಡೆತನಕ್ಕೆ ಅವಕಾಶ ನೀಡಲಾಗಿದೆ. ಹೀಗಾಗಿಯೇ ಅನೇಕ ಖಾಸಗಿ ಸ್ವಾಯತ್ತ ಖಾಸಗಿ ವಿ.ವಿ.ಗಳು ತಲೆ ಎತ್ತುತ್ತಿವೆ. ಬಹುತೇಕ ಶಾಲಾ ಕಾಲೇಜುಗಳಲ್ಲಿ ಅಗತ್ಯಕ್ಕೆ ಅನುಗುಣವಾಗಿ ಶಿಕ್ಷಕ-ಉಪನ್ಯಾಕರಿಲ್ಲ. ಅಗತ್ಯ ಶೈಕ್ಷಣಿಕ ಸೌಲಭ್ಯಗಳೂ ಇಲ್ಲ. ಹೀಗಾಗಿ ಬಡ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಇಲ್ಲದಂತಾಗಿದೆ. ಇಂತಹ ದುಸ್ಥಿತಿ ನಮ್ಮ ದೇಶದಲ್ಲಿದ್ದರೆ, ಯುರೋಪ್, ಅಮೆರಿಕಾದಂತಹ ದೇಶಗಳಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಸರ್ಕಾರಗಳೇ ಹೆಚ್ಚಿನ ಅನುದಾನ ನೀಡುತ್ತಿವೆ. ವಿದ್ಯಾರ್ಥಿಗಳಿಗೆ ಅಗತ್ಯ ಸೌಕರ್ಯಗಳ ಜೊತೆಗೆ ಶಿಷ್ಯ ವೇತನವನ್ನು ಸಮಗ್ರವಾಗಿ ನೀಡಲಾಗುತ್ತಿದೆ. ಇದೇ ಸಂದರ್ಭದಲ್ಲಿ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುವ ಹಲವು ಶಿಕ್ಷಕರ ಬೇಜವಾಬ್ದಾರಿಯನ್ನು ಟೀಕಿಸಿದರು. ಇಂದಿನ ಪರಿಸ್ಥಿತಿಯಲ್ಲಿ ಶಿಕ್ಷಕರಲ್ಲಿ ದಕ್ಷತೆ ಇಲ್ಲದಾಗಿ, ಹಣದ ದುರಾಸೆಯಿಂದ ಖಾಸಗಿ ಟೂಶನ್‌ಗಳನ್ನು ನಡೆಸುತ್ತಿದ್ದಾರೆ. ಶಿಕ್ಷಕರು ತಮ್ಮ ಜವಾಬ್ದಾರಿ ಅರಿತು ಕೆಲಸ ನಿರ್ವಹಿಸಬೇಕು. ಎಸ್‌ಎಫ್‌ಐನಂತಹ ಕ್ರಾಂತಿಕಾರಿ, ಜವಾಬ್ದಾರಿಯುತ ಸಂಘಟನೆ ಇಂತಹ ವಿಷಯಗಳಲ್ಲಿ ಮಧ್ಯ ಪ್ರವೇಶಿಸಬೇಕೆಂದರು.

ಪ್ರೊ. ಬಾಗಚಿಯವರು ಮುಖ್ಯವಾಗಿ ಎಸ್‌ಎಫ್‌ಐ ಸಂಘಟನೆ ಕೇವಲ ಶೈಕ್ಷಣಿಕ ಸಮಸ್ಯೆಗಳ ವಿರುದ್ಧ ಹೋರಾಡುವುದಲ್ಲ ಬದಲಿಗೆ ಪರ್ಯಾಯ ವ್ಯವಸ್ಥೆಯ ಉದಯಕ್ಕೆ ನಡೆಯುವ ಹೋರಾಟದಲ್ಲಿ ಜೊತೆಗೂಡಬೇಕು. ಅಸಮಾನ ವ್ಯವಸ್ಥೆಯ ವಿರುದ್ಧ ಸಮಾನ ವ್ಯವಸ್ಥೆಗಾಗಿ ಹೋರಾಡಬೇಕೆಂದು ಉದ್ಘಾಟನಾ ಸಮಾರಂಭದಲ್ಲಿ ಎಸ್‌ಎಫ್‌ಐ ಪ್ರತಿನಿಧಿಗಳಿಗೆ ಒತ್ತಿ ಹೇಳಿದರು.

○

ಗಣಿ ಲೂಟಿ....

ಟ 9 ರಿಂದ

ಡದಿರುವುದು ಅವರನ್ನು ಇನ್ನಷ್ಟು ಕೆರಳಿಸಿತು. ಹರಾಜಿನಲ್ಲಿ ಅದಿರನ್ನು ಪಡೆದ ಕಂಪನಿಯ ಹಿಂದೆ ಚಿವ ಜನಾರ್ಧನ ರೆಡ್ಡಿಯವರ ಾಡವಿದೆಯೆಂದು, ಅದರಿಂದಲೇ ಕಡಿಮೆ ಬೆಲೆಗೆ ವರೇ ಕಂಪನಿ ಮೂಲಕ ಪಡೆದಿದ್ದಾರೆಂಬುದು ಚಾರಗೊಂಡು ಅವರನ್ನು ಹೋರಾಟದ ಕಣಕ್ಕೆ ಳೆದೊಯ್ಯಿತು. ಸಂಡೂರು, ಹೊಸಪೇಟೆ ದಿಗಳಲ್ಲಿ ಈ ಅಸಮಾಧಾನವು ಸಾವಿರಾರು ನಿಯಾಗಿ ಸ್ಫೋಟಿಸಿತು. ವಾರ - 10 ದಿನಗಳು ತಿಭಟನಾ ರ್‍ಯಾಲಿ, ಪ್ರತಿಕೃತಿ ದಹನ, ರಸ್ತೆ ತಡೆ, ತ್ರಿಕಾಗೋಷ್ಠಿ ಹಾಗೂ ಬಂದ್ ಗಳಾಗಿ ರಿವರ್ತನೆಗೊಂಡವು. ಹೋರಾಟದ ಮುಂಚೂಣಿಯಲ್ಲಿರುವ ನಾಯಕರನ್ನು ರ್ಪಡಿಸುವ ಎಲ್ಲಾ ಲಾಭಿಗಳು ವಿಫಲಗೊಂಡವು. ಜೊತೆಗೆ ಸರ್ಕಾರ ಮಣಿದು ಅದಿರನ್ನು ಂಬಂಧಿಸಿದವರಿಗೆ ನೀಡಲು ಹಾಗೂ ಪರವಾನಿಗೆ ಡುವ ಒತ್ತಾಯಕ್ಕೊಳಗಾಯಿತು.

ದು, ಅಕ್ರಮ ಗಣಿಗಾರಿಕೆ ಎಂದರೆ ಾವುದು?

ಯಾವುದು ಅಕ್ರಮ ಗಣಿಗಾರಿಕೆ ಎಂದು ಮಾನ್ಯ ಬಳ್ಳಾರಿಯ ನಾಗರಿಕರನ್ನು ಕೇಳಿ ಅವರು ತ್ತರಿಸಿಯಾನು!

ಬಹುಶಃ ಎಲ್ಲರಿಗೆ ಗೊತ್ತಿದೆ ಳ್ಳಾರಿಯಲ್ಲಿರುವುದು ಎರಡು ಕಾಲಗಳು. ೇಚಿಯವರು ಹೇಳಿರುವಂತೆ) ಬೇಸಿಗೆ ಕಾಲ, ಉರಿ ಸಿಗೆ ಕಾಲ. ಅಂದರೆ ಬಳ್ಳಾರಿ ಮೂಲತಃ ಬಿಸಿಲ ಡು. ಇಲ್ಲಿ ಬೇರೆಡೆಯಂತೆ ದೊಡ್ಡ ಮರಗಳ ಕಾಡು ಹಳ ಕಡಿಮೆ. ಇಲ್ಲಿರುವುದು ಕುರುಚಲು ಕಾಡು ಾತ್ರವೇ. ವಿಪರಿತ ಬಿಸಿಲಿನಿಂದ ಮಣ್ಣೆಲ್ಲ ಡಿಗೊಂಡು ಧೂಳಾಗಿ ಜನತೆಗೆ ಅಸ್ತಮಾದ ಭಾರಿ ಡ್ಡ ಕಾಣಿಗೆ ನೀಡುವ ಪ್ರದೇಶವಿದು. ಸುಮಾರು ರ್ಷಗಳ ಹಿಂದೆಯೇ ವಿಜ್ಞಾನಿಗಳು ತ್ತರಿಸಿದ್ದಾರೆ. ಕಾಡನ್ನು ಬೆಳೆಸದಿದ್ದರೆ ಕೆಲವೇ ರ್ಷಗಳಲ್ಲಿ ಬಳ್ಳಾರಿ ಜಿಲ್ಲೆ ರಳುಗಾಡಾಗಲಿದೆಯೆಂದು ಆತಂಕಪಟ್ಟಿದ್ದಾರೆ. ಡು ಬೆಳೆಸಲಿಲ್ಲ. ನೀರಾವರಿ ವಿಸ್ತಾರಗೊಳ್ಳಲಿಲ್ಲ.

ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿದ್ದಭಾರಿ ಗಳು ನಡೆಸುವ ಭಾರಿ ವಹಿವಾಟಿನಿಂದ ಪ್ರತಿದಿನ ಕೋಟಿಗೂ ಅಧಿಕ ಬೆಲೆ ಬಾಳುವ ಅದಿರು ತನವಾಗುತ್ತಿದೆ. ಇದನ್ನು ಸಾಗಿಸಲು ಹೊರಟ ಾಣಿಕೆ ವಾಹನಗಳಿಂದ ಒಂದೆಡೆ ಜಿಲ್ಲೆಯ ಎಲ್ಲಾ ದ್ದಾರಿ, ಸಾಮಾನ್ಯ ದಾರಿಗಳು ಗುಳಿಗಳಾಗಿವೆ. ಗಳ ರಸ್ತೆ ಓಡುವ ಭಾರಿ ವಾಹನಗಳು ಇಕ್ಕೆಲಗಳ ಗಳಿಗೆ ಪುಕ್ಕಟೆ ಕೆಂಧೂಳಿನ ಪೌಡರ್ ಮೆತ್ತುತ್ತಿವೆ. ಮಾರು 25 ಕ್ಕೂಹೆಚ್ಚು ಹಳ್ಳಿಗಳನ್ನು ಈ ಣದಿಂದ ಸ್ಥಳಾಂತರಿಸಬೇಕಾಗಿದೆ. ಈ ಳಿನಿಂದ ಹತ್ತಾರು ಸಾವಿರ ಎಕರೆ ಕೃಷಿ ಯೋಗ್ಯ ಮೀನು ಬಂಜರಾಗಿದೆ. ಅಂತರ್ಜಲ ಹೋಗಿದೆ. ಸಾವಿರಾರು ಪಂಪ್‌ಸೆಟ್‌ಗಳು ಪಯುಕ್ತವಾಗಿ ರೈತರಿಗೆ ಭಾರಿ ನಷ್ಟ ಉಂಟು ಡಿವೆ. ಜಿಲ್ಲೆಯಲ್ಲಿ ಪರಿಸರ ಮಾಲಿನ್ಯ ಯಂತ್ರಣ ಕೇಳಬೇಡಿ. ಉತ್ಕೃಷ್ಟ ಅದಿರಿರುವ ಸಾವಿರಾರು ಎಕರೆ ಸರ್ಕಾರಿ ಜಮೀನನ್ನು ಎಗ್ಗಿಲ್ಲದೇ, ಒತ್ತುವರಿ ಮಾಡಿಕೊಂಡು ಲೂಟಿ ಮಾಡುವ ಹಲವುದೊಡ್ಡ ಗಣಿ ಮಾಲೀಕರು, ಅವರು ಗಣಿಗಾರಿಕೆಗಾಗಿ ಲೀಜ್ ಪಡೆದ ಜಮೀನೆಷ್ಟು? ಅವರು ಲೀಜ್ ಪಡೆದ ಜಮೀನು ಎಲ್ಲಿದೆ? ಗಣಿಗಾರಿಕೆ ಮಾಡುವುದು ಯಾವ ಪ್ರದೇಶ? ಈ ಎಲ್ಲಾ ವಿಷಯಗಳು ಜಿಲ್ಲೆಯ ಅಧಿಕಾರಿಗಳಿಗೆ, ಸರ್ಕಾರಕ್ಕೆ ಗೊತ್ತಿಲ್ಲವೇ? ಗೊತ್ತಿದೆ. ಏನು ಪ್ರಯೋಜನ? ಕ್ರಮವಹಿಸಬೇಕಾದವರೆ ಅವರು? ಅದಕ್ಕಾಗಿಯೇ ಅಲ್ಲವೇ ಕರ್ನಾಟಕ ಅದರಲ್ಲೂ ಬಳ್ಳಾರಿ ಜಿಲ್ಲೆ ಭ್ರಷ್ಟಾಚಾರದಲ್ಲಿ ಪ್ರಥಮ ಸ್ಥಾನ ಗಳಿಸಿರುವುದು. ಮಾಫಿಯಾ ಚಟುವಟಿಕೆಯಲ್ಲಿ ಮುಂದಿರುವುದು. ಅರಣ್ಯ ಇಲಾಖೆ, ಪೋಲೀಸ್ ಇಲಾಖೆ, ಕಂದಾಯ ಇಲಾಖೆ, ಸಾರಿಗೆ ಇಲಾಖೆಗಳ ಆಯಕಟ್ಟಿನ ಜಾಗಗಳಿಗೆ ವರ್ಗಾವಣೆ ಮಾಡಿಸಿಕೊಳ್ಳಲು ಅದರಬೆಲೆ ಅರ್ಧ, ಮುಕ್ಕಾಲು, ಒಂದು ಕೋಟಿಗೇರಿದರೂ ದೊಡ್ಡ ಸಾಲಿರುವುದು. ಪ್ರಾಮಾಣಿಕ ಕೆಲಸ, ಅರಣ್ಯ ಸಂರಕ್ಷಣೆ, ಪರಿಸರ ಮಾಲಿನ್ಯ ನಿಯಂತ್ರಣ, ಸುಗಮ ರಸ್ತೆ, ನಾಗರಿಕ ಕಾನೂನು ಸುವ್ಯವಸ್ಥೆ ಎಂಬುದು ಎಲ್ಲಾ ಪುಸ್ತಕಗಳಲ್ಲಿ ಮಾತ್ರ.

ಇಷ್ಟೆಲ್ಲಾ ಅವಾಂತರಗಳಿಗೆ ಕಾರಣವಾದ ಅಕ್ರಮ ಗಣಿಗಾರಿಕೆಗೂ, ಅನಧಿಕೃತ ಗಣಿಗಾರಿಕೆಗೂ ಇರುವ ವ್ಯತ್ಯಾಸ ಸರಿಯಾಗಿ ತಿಳಿಯದಷ್ಟು ಅಧಿಕಾರಿಗಳು, ಸರ್ಕಾರ ಮಂತ್ರಿಗಳು ದಡ್ಡರೇ?

ಹೀಗಾಗಿ ಗುಡ್ಡ ಕಡಿದು ಹುಲಿಯನ್ನೇ ಹಿಡಿಯುವರು ಜನಾರ್ಧನ ರೆಡ್ಡಿಯವರು ಎಂದು ಆಶಿಸಿದ್ದ ಜನತೆಗೆ ಈ ಪ್ರಹಸನವು ಇಲಿ ಹಿಡಿದಂತೆ ಕಂಡು, ಸಚಿವ ರೆಡ್ಡಿಯವರ ನಾಟಕ ಬಯಲಾಗಿ ಅವರಿಗೆ ಮುಖಭಂಗ ಉಂಟು ಮಾಡಿದೆ.

ಕರ್ನಾಟಕದ ಗಡಿಯ ಅತಿಕ್ರಮಣ

ಬಂಡವಾಳಗಾರರು ತಮ್ಮೊಳಗೆ ಪೈಪೋಟಿ ನಡೆಸುವಾಗ ಪರಸ್ಪರರ ಮಾರುಕಟ್ಟೆ ಹಾಗೂ ಸಂಪನ್ಮೂಲಗಳ ಮೇಲೆ ದಾಳಿ ನಡೆಸುವುದು, ಬೆದರಿಸಿ ತಮ್ಮ ಹಕ್ಕುಗಳನ್ನು ಸ್ಥಾಪಿಸುವುದು, ಅವರ ಪ್ರದೇಶವನ್ನು ಇವರು ಆಕ್ರಮಿಸುವುದು, ಇವರ ಪ್ರದೇಶವನ್ನು ಅವರು ಅತಿಕ್ರಮಿಸುವುದು, ಹಣಬಲ, ತೋಳ್ಬಲ ಇದರ ಜೊತೆ ಅಧಿಕಾರ ಬಲ ಸೇರಿದವರು ಜಯಗಳಿಸಿ ದೊಡ್ಡ ಬಂಡವಾಳಶಾಹಿ, ಗುತ್ತೇದಾರಿಯಾಗಿ ಬೆಳೆಯುವುದು, ಬಂಡವಾಳ ಸಮಾಜದಲ್ಲಿ ಇದು ಸಹಜ ಪ್ರಕ್ರಿಯೆ ಆಗಿದೆ.

ಇಂತಹ ಮೈನವಿರೇಳಿಸುವ ಪೈಪೋಟಿ ಬಳ್ಳಾರಿ ಜಿಲ್ಲೆಯ ಗಣಿ ಮಾಲೀಕರಲ್ಲಿ ಕಾಣಬಹುದಾಗಿದೆ. ಒಬ್ಬರು ಸಂಗ್ರಹಿಸಿದ್ದ ಸುಮಾರು ಟನ್ ಅದಿರನ್ನು ಕಳ್ಳತನದಿಂದ ಸಾಗಿಸಲಾಗುತ್ತದೆ . ಎದುರು ಬಂದವನಿಲ್ಲಿ ಅನಾಥ ಹೆಣವಾಗಿದ್ದಾನೆ. ರಾತ್ರಿ ವೇಳೆ ಹಗಲಿಗಿಂತ ಪ್ರಖರವಾದ ವ್ಯವಹಾರ ನಡೆಯುತ್ತಿದೆ. ಕೆಲವೊಮ್ಮೆ ಭೀಕರ ರಣರಂಗವಾಗುತ್ತದೆ. ತೋಳ್ಬಲವಿರುವವನು ಕೇಳಿದಲ್ಲಿ ಕೇಳಿದಷ್ಟಕ್ಕೆ ನೀಡಬೇಕು.

ಹೀಗಾಗಿ ಹಲವು ಗಣಿ ಮಾಲಿಕರು ತಮ್ಮದೇ ಭದ್ರತಾ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಎದುರಿಸಲಾಗದ ಗಣಿ ಮಾಲೀಕರು ತಮ್ಮದೇ ಗಣಿಯನ್ನು ಅವರು ಕೇಳಿದ ಹಣಕ್ಕೆ ಲೀಜ್‌ಗೆ ನೀಡಿ ಕೈತೊಳೆದುಕೊಂಡರೆ ಸೋಲಪ್ಪದ ಕೆಲವರು ತನ್ನ ಮೇಲೆ ದಾಳಿ ನಡೆಸಲು ಮುಂದಾದವನನ್ನು ಎದುರಿಸಲು ತನ್ನ ಎದುರಾಳಿಗಿಂತ ಬಲಿಷ್ಟನಾದ ಮತ್ತೊಬ್ಬನಿಗೆ ಗಣಿಗಳನ್ನು ಲೀಜ್‌ಗೆ ನೀಡುವುದು ನಡೆದಿದೆ.

ಇದೆಲ್ಲಾ ಬಳ್ಳಾರಿ ಜಿಲ್ಲೆಗೆ, ಅದರಕಾನೂನು-ಸುವ್ಯವಸ್ಥೆಗೆ, ಪ್ರಜಾಸತ್ತಾತ್ಮಕ ಚಳುವಳಿಗೆ, ಪ್ರಜಾಸತ್ತೆಗೆ ಬೆದರಿಕೆಯಾಗಿದೆ. ದೇಶದ ವಿವಿಧ ಭಾಗಗಳಲ್ಲಿರುವ ಬಲಾಢ್ಯ ಮಾಫಿಯಾ ಶಕ್ತಿಗಳು ಈ ಪೈಪೋಟಿಯಿಂದಾಗಿ ದೂರದ ಬಿಹಾರದಿಂದಲೂ ಇತ್ತ ಸಾಗಿವೆ.

ಇಂತಹ ಪೈಪೋಟಿ ನಡೆದು ಅತಿಕ್ರಮಣಗಳು ನಡೆದಾಗಲೇ ಬಯಲಿಗೆ ಬಂದದ್ದು ಕರ್ನಾಟಕದ ಗಡಿಯ ಒತ್ತುವರಿ ವಿಚಾರ.

ಕರ್ನಾಟಕದ ರಾಜ್ಯದ ಪ್ರವಾಸೋದ್ಯಮ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಜನಾರ್ಧನ ರೆಡ್ಡಿಯವರು ಹಾಗೂ ಆಂಧ್ರಪ್ರದೇಶದ ಮುಖ್ಯಮಂತ್ರಿ ಶ್ರೀ ವೈ.ಎಸ್.ರಾಜಶೇಖರರೆಡ್ಡಿ ಕುಟುಂಬದ ಸದಸ್ಯರು ಪಾಲುದಾರರಾಗಿರುವ ಓಬಳಾಪುರಂ ಮೈನ್ಸ್ ಕಂಪನಿಯು ಕರ್ನಾಟಕ-ಆಂಧ್ರ ಗಡಿ ಭಾಗದ ಆಂಧ್ರಪ್ರದೇಶಕ್ಕೆ ಸೇರಿದ ಅರಣ್ಯ ಭೂಮಿಯಲ್ಲಿ ಪರವಾನಗಿ ಪಡೆದು ಗಣಿಗಾರಿಕೆ ನಡೆಸುತ್ತಿದೆ. ಈ ಕಂಪನಿಯು ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿದೆಯೆಂಬ ವಿಚಾರ ಕಳೆದ ಎರಡು ವರ್ಷದಿಂದ ಆಂಧ್ರಪ್ರದೇಶದ ವಿಧಾನಸಭೆಯ ಒಳಗಡೆ ಹಾಗೂ ಹೊರಗಡೆ ಭಾರಿ ಗದ್ದಲವಾಗಿ ಕರ್ನಾಟಕ, ಆಂಧ್ರ ಪ್ರದೇಶ ಮಾತ್ರವಲ್ಲ ದೇಶದ ಗಮನ ಸಳೆಯಿತು.


ಗಣಿ ಸ್ಫೋಟ

ಅದೇರೀತಿ ಇದೇ ಪ್ರದೇಶದ ಕರ್ನಾಟಕದ ಗಡಿಯ, ಕರ್ನಾಟಕದ ಪ್ರದೇಶದಲ್ಲಿ ಎಂಬಿಟಿ ಮತ್ತು ಟಿಎನ್‌ಆರ್ ಕಂಪನಿಗಳು ಪರವಾನಿಗಿ ಪಡೆದು ಗಣಿಗಾರಿಕೆಗೆ ತೊಡಗಿಕೊಂಡಿವೆ. ಈಚೆಗೆ ಓಬಳಾಪುರಂ ಮೈನ್ಸ್ ಹಾಗೂ ಟಿಎನ್‌ಆರ್ ಕಂಪನಿಗಳ ವಿವಾದವೊಂದು ಭುಗಿಲೆದ್ದಿತು. ಟಿಎನ್‌ಆರ್ ಕಂಪನಿ ಪತ್ರಿಕಾಗೋಷ್ಠಿ ನಡೆಸಿ ತಮ್ಮ ಹಾಗೂ ತಮ್ಮ ಕಂಪನಿಯ ಕೆಲಸಗಾರರ ಮೇಲೆ ಓಬಳಾಪುರಂ ಮೈನ್ಸ್ ಕಂಪನಿಯ ಸಿಬ್ಬಂದಿ ದಾಳಿ ನಡೆಸಿ, ತಮ್ಮ ಗಣಿ ಪ್ರದೇಶವನ್ನು ಒತ್ತುವರಿ ಮಾಡುತ್ತಿವೆಯೆಂದು, ಈ ಬಗ್ಗೆ ದೂರಿದರೂ ಅಧಿಕಾರಿಗಳು ತನಗೆ ಸಹಕರಿಸುತ್ತಿಲ್ಲವೆಂದು ಹಾಗೂ ಅತಿಕ್ರಮಣಕ್ಕಾಗಿ ಕರ್ನಾಟಕ - ಆಂಧ್ರ ಗಡಿಯ ಗುರುತು ಅಳಿಸಿಹಾಕಿ, ಕರ್ನಾಟಕ ಪ್ರದೇಶದೊಳಗೆ, ಆಂಧ್ರಪ್ರದೇಶದ ವಿಸ್ತಾರ ಪಡೆಯುವಂತೆ ಗಡಿಯನ್ನು ಕರ್ನಾಟಕ ಪ್ರದೇಶದೊಳಕ್ಕೆ ಒತ್ತುವರಿ ಮಾಡಲಾಗಿದೆಯೆಂದು, ಇದಕ್ಕಾಗಿ ದಾಖಲಾತಿಗಳನ್ನು ಬದಲಿಸುವ ಪ್ರಯತ್ನ ನಡೆದಿದೆಯೆಂದು ಗುರುತರ ಆರೋಪ ಹೊರಿಸಿದರು. ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಇದೊಂದು ಶಾಕಿಂಗ್ ವಿಚಾರವಾಗಿತ್ತು. ಕಾಂ. ಜಿ.ಎನ್.ನಾಗರಾಜ್ ನೇತೃತ್ವದಲ್ಲಿ ಸಿಪಿಐ(ಎಂ) ನಿಯೋಗ ಗಡಿ ಪ್ರದೇಶಕ್ಕೆ, ಬೆಟ್ಟದ ಮೇಲಕ್ಕೆ ಹೋಗಿಬಂದು ಗಡಿ ಅತಿಕ್ರಮಣವನ್ನು ಖಂಡಿಸಿತು. ಅದೇ ರೀತಿ ಮಾಜಿ ಸಚಿವ ದಿವಾಕರ ಬಾಬುರವರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ,ಖಂಡಿಸಿ ಪತ್ರಿಕಾಗೋಷ್ಠಿ ನಡೆಸಿದರು. ಈ ಭೇಟಿಗಳು ರಾಜ್ಯದ ಜನತೆಯ ಗಮನ ಸೆಳೆದವು.

ಬೆಟ್ಟದ ಮೇಲ್ತುದಿಯಲ್ಲಿ ಕರ್ನಾಟಕ - ಆಂಧ್ರ ಗಡಿಯಗಡಿರೇಖೆಯ ಗುರುತುಗಳನ್ನು ಮಾಡಲಾಗಿದೆ. ಈ ರೇಖೆಯನ್ನು ಸ್ಥೂಪದ ರೀತಿಯ ಕಟ್ಟಡಗಳನ್ನು ಅಲ್ಲಲ್ಲಿ ನಿಲ್ಲಿಸುವ ಮೂಲಕ ನಿರ್ಮಿಸಲಾಗಿದೆ. ಹಾಗೆ ನಿರ್ಮಿಸಲಾದ ಸ್ಥೂಪ ಕಟ್ಟಡವನ್ನು (ಮೇಲ್ತುದಿಯಲ್ಲಿರುವ) ನಾಶಪಡಿಸಿ(ನಾಶಪಡಿಸಿದ ಪ್ರದೇಶದಲ್ಲಿ ಈಗಲೂ ಅದಿರಿರುವ ಗುರುತು ಉಳಿದುಕೊಂಡಿದೆ) ಕರ್ನಾಟಕ ಪ್ರದೇಶದ ಬೆಟ್ಟದ ಕೆಳಭಾಗದಲ್ಲಿ ಸುಮಾರು 1 ಚ.ಕಿ.ಮೀ. ಪ್ರದೇಶವನ್ನು ಒತ್ತುವರಿ ಮಾಡಿ ಅಂತಹದೇ ಸ್ಥೂಪ ನಿರ್ಮಿಸಿ ಗಡಿ ಗುರುತನ್ನು ಬದಲಿಸಲಾಗಿದೆ.

ಹೀಗೆ ಮಾಡುವ ಮೂಲಕ 'ಓಬಳಾಪುರಂ ಮೈನ್ಸ್ ಕಂಪನಿ'ಯು ಅಕ್ರಮವಾಗಿ ಗಣಿ ಸಂಪನ್ಮೂಲವಿರುವ ಕರ್ನಾಟಕದ ಪ್ರದೇಶವನ್ನು ಒತ್ತುವರಿ ಮಾಡಿದೆಯಲ್ಲದೆ, ಕರ್ನಾಟಕದ ಭೂಪ್ರದೇಶವನ್ನು ಆಂಧ್ರ ಪ್ರದೇಶಕ್ಕೆ ಸೇರಿಸಲು ಗಡಿ ಗುರುತನ್ನು ಬದಲಿಸಲಾಗಿದೆಯೆಂಬ ಗುರುತರ ಆರೋಪವನ್ನು ಎದುರಿಸುತ್ತಿದೆ. ಇದರಿಂದಾಗಿ ಕರ್ನಾಟಕದ ಸಚಿವ ಜನಾರ್ಧನ ರೆಡ್ಡಿಯವರು ಉತ್ಕೃಷ್ಟ ಅದಿರಿನ ಸಂಪನ್ಮೂಲವಿರುವ ಕರ್ನಾಟಕ ಭೂ ಪ್ರದೇಶವನ್ನು ಆಂಧ್ರಪ್ರದೇಶಕ್ಕೆ ಸೇರ್ಪಡೆ ಮಾಡುವಲ್ಲಿ ತಮ್ಮನ್ನು ತೊಡಗಿಸಿಕೊಂಡು, ಅಧಿಕಾರ ದುರುಪಯೋಗ ಮಾಡಿದ್ದಾರೆಂಬ ಗಂಭೀರ ಆರೋಪ ಎದುರಿಸುವಂತಾಗಿದೆ.

ಸದರಿ ಕಂಪನಿಯಲ್ಲಿ ಶೇರುದಾರರಾಗಿರುವ ಮೂಲಕ - ಆಂಧ್ರಪ್ರದೇಶದ ಮುಖ್ಯಮಂತ್ರಿಯವರ ಕುಟುಂಬದ ಸದಸ್ಯರಾಗಿ ಅವರು ಗಡಿ ಒತ್ತುವರಿಯ ಆರೋಪದಲ್ಲಿ ಸಿಲುಕುವಂತಾಗಿದೆ.

ಅದೇನೇ ಇರಲಿ, ಗಡಿಯ ಅತಿಕ್ರಮಣದ ಸತ್ಯಾಸತ್ಯತೆಯನ್ನು ಕರ್ನಾಟಕದ ಜನತೆ ತಿಳಿಯಬೇಕಾಗಿದೆ. ಈ ಬಗ್ಗೆ ಪಾರದರ್ಶಕವಾಗಿ ನಿಷ್ಪಕ್ಷಪಾತವಾಗಿ, ಕೇಂದ್ರ ಸರ್ಕಾರದ ಭಾಗೀತನದಲ್ಲಿ ಉನ್ನತ ಮಟ್ಟದ ತನಿಖೆಗೆ ಒಟ್ಟು ಪ್ರಕರಣವನ್ನು ಒಳಪಡಿಸಬೇಕು. ಹಾಗೂ ಅದೇ ರೀತಿ ಕೇಂದ್ರ ಹಾಗೂ ಎರಡು ರಾಜ್ಯ ಸರ್ಕಾರಗಳು ಜಂಟಿಯಾಗಿ ಸರ್ವೆ ನಡೆಸಿ ಗಡಿ ವಿವಾದವಾಗದಂತೆ ಗಡಿ ಗುರುತುಗಳನ್ನು ಸರಿಯಾಗಿ ನಿರ್ಮಿಸಲು ಸಾಧ್ಯವಾಗಬೇಕು.

ಏನೇ ಆದರೂ ಬಳ್ಳಾರಿಯ ಜನಾರ್ಧನ ರೆಡ್ಡಿ ಪಕ್ಷಕ್ಕೆ ಈಚಿಗಿನ ಈ ಎರಡು ಪ್ರಕರಣಗಳು ಅವರ ಜನಪ್ರಿಯತೆಯನ್ನು ಕುಗ್ಗಿಸಿವೆಯೆಂದೇ ಹೇಳಬಹುದಾಗಿದೆ.

ಗುಲಾಬಿ ಟಾಕೀಸ್ : ಹೊಸಕಾಲದ ತಲ್ಲಣಗಳ ದಾಖಲೆ



ಬಂಡವಾಳ ತನ್ನಿರುವಿಕೆಯನ್ನು ಗಟ್ಟಿಗೊಳಿಸಿಕೊಳ್ಳಲು ಏನೆಲ್ಲವನ್ನೂ ನಾಜೂಕಾಗಿ ಬಳಸಿಕೊಳ್ಳುತ್ತಾ ಹೋಗುತ್ತದೆ, ಅದರ ಮಧ್ಯದಲ್ಲಿಯೇ ನಯವಾಗಿ ಕೋಮುವಾದ ಹೇಗೆ ಬೆಳೆಯುತ್ತದೆ. ಅರಿವಿದ್ದೋ, ಅರಿವಿಲ್ಲದೆಯೋ ಈ ಎರಡರ ಹಿಡಿತಕ್ಕೆ ಒಳಗಾದ ವ್ಯವಸ್ಥೆ ತನ್ನ ತನವನ್ನೇ ತೊರೆದು ಹೇಗೆ ದಿಗಂಬರವಾಗಿ ನಿಂತುಬಿಡುತ್ತದೆ ಎಂಬ ಸೂಕ್ಷ್ಮ ಒಳನೋಟವನ್ನು ನೀಡುವ ಗುಲಾಬಿಟಾಕೀಸ್ ಗಿರೀಶ್ ಕಾಸರವಳ್ಳಿಯವರ ಹೊಸ ಚಿತ್ರ.

ಸಾಮಾನ್ಯವಾಗಿ ಆಯ್ದುಕೊಳ್ಳುವ ಅಥವಾ ಆಯ್ದುಕೊಂಡ ಕಥೆಯನ್ನೇ ಸೂಕ್ಷ್ಮ ಮಹಿಳಾ ಸಂವೇದಿ ಚಿತ್ರವಾಗಿಸುವ ಕೌಶಲ್ಯ, ಕಾಳಜಿ ಕಾಸರವಳ್ಳಿಯವರದು. ಹಾಗೆಂದೇ ಪ್ರತಿಗಾಮಿ ಚಿಂತನೆಯ ಎಸ್.ಎಲ್.ಭೈರಪ್ಪನವರ ನಾಯಿ ನೆರಳು ಕೂಡಾ ತೀಕ್ಷ್ಣ ಮಹಿಳಾ ಪರ ಚಿಂತನೆಯ ಚಿತ್ರವಾಗಿ ಮೂಡಿಬಂದದ್ದು.

ಗುಲಾಬಿ ಟಾಕೀಸ್: ಸೂಲಗಿತ್ತಿಯಾಗಿ ಎಲ್ಲರಿಗೂ ಬೇಕಾದವಳಾಗಿ, ಇಡೀ ಪ್ರದೇಶದ ಅತ್ಯಗತ್ಯದ ವ್ಯಕ್ತಿಯಾಗಿ ತನ್ನ ಹೆಸರನ್ನು ತಾನೇ ಮರೆತ ಗುಲಾಬಿಯ ಮನೆ ಟಾಕೀಸಾಗಿ ಪರಿವರ್ತನೆಯಾಗಿದ್ದೇ ಬಂಡವಾಳಶಾಹಿ ವ್ಯವಸ್ಥೆ ತರುವ ಬದಲಾವಣೆಯ ಸಂಕೇತ. ಊರವರಿಗೆಲ್ಲ ಹೆರಿಗೆ ಮಾಡಿಸುವ ಆದರೆ ತನಗೆ ಮಕ್ಕಳಿಲ್ಲದ ಗುಲಾಬಿ, ಸವತಿಯ ಮಗುವಿನ ಬಗ್ಗೆ ತೋರುವ ಅಕ್ಕರೆ, ಅವಳಿಂದ ಸಿಗುವ ತಿರಸ್ಕಾರ, ಗಂಡನಿಗೆ ಬೇಡವಾದರೂ ಊರಿಗೆಲ್ಲ ಉಪಕಾರಿಯಾಗಿ ಬದುಕುವ ಗುಲಾಬಿ, ಹೆಣ್ಣಾಗಿ ಅನುಭವಿಸುವ ಯಾತನೆಯೂ ಚಿತ್ರದಲ್ಲಿದೆ. ತನ್ನ ನೋವಿಗೆ ಅಳುತ್ತಾ ಕೂರದ ಗುಲಾಬಿ ಬದುಕನ್ನು ಅನುಭವಿಸುವುದು ಸಿನಿಮಾ ನೋಡುವ ಮೂಲಕ, ಸಿನಿಮಾ ಟಾಕೀಸಿಗೆ ಹೋಗಿ ಕುಳಿತ ಗುಲಾಬಿಯನ್ನು ನಾಲ್ಕ ಜನ ಕಟ್ಟಿಹೊತ್ತು ತರಬೇಕೇ ಹೊರತು, ಬಡಪಟ್ಟಿಗೆ ಸಿನಿಮಾ ಬಿಟ್ಟು ಎದ್ದು ಬರುವ ಹೆಣ್ಣಲ್ಲ ಅವಳು.

ಶ್ರೀಮಂತರ ಮನೆಯ ಹುಡುಗಿ, ಹೆರಿಗೆ ನೋವಿಗೆ ಬರಲಾರೆನೆಂದ ಗುಲಾಬಿಯನ್ನು ಹೊತ್ತು ತಂದಿದ್ದೇನೋ ಆಯಿತು. ಆದರೆ ಬಲವಂತವಾಗಿ ಹೆರಿಗೆ ಮಾಡಿಸಲು ಸಾಧ್ಯವೇ? ಅವಳ ಮನೆಯಲ್ಲಿಯೇ ಪ್ರತಿದಿನ ಹೊಸ ಬಣ್ಣದ ಸಿನಿಮಾ ನೋಡುವ ಟಿ.ವಿ.ಕೊಡಿಸುವ ಭಾಷೆ ಮಾತು ಗುಲಾಬಿಯ ಮನೆಯನ್ನೂ ಗುಲಾಬಿ ಟಾಕೀಸಾಗಿ ಪರಿವರ್ತಿಸಿತು.

ಟಿ.ವಿ.ಯಂತಹ ವಸ್ತುವೊಂದು ತಮ್ಮ ಕೇರಿಗೇ ಬಂದಿದೆಯಾದರೂ 'ಉಚ್ಚ' ಕುಲದವರು ಗುಲಾಬಿಯ ಮನೆಗೆ ಹೋಗಿ ನೋಡುವುದು ಎಷ್ಟು ಸರಿ? ಹಾಗೆಂದೇ ಹೊಸತರಲ್ಲಿ ಹೊಸಿಲಾಚೆ ನಿಂತು ನೋಡಿದವರು ಕ್ರಮೇಣ ಲಕ್ಷ್ಮಣ ರೇಖೆ ಒಳಬರುವಂತಾಯಿತು. ಬಂಡವಾಳಶಾಹಿ ವ್ಯವಸ್ಥೆ ಒಂದು ಹಂತದವರೆಗಿನ ಗೋಡೆಗಳನ್ನು ಒಡೆಯುವುದರ ಸಂಕೇತ ಇದು. ಆದರೆ ಅದೇ ಬಂಡವಾಳ ಬೆಳೆಯುತ್ತಾ ತನ್ನುಳಿವಿಗಾಗಿ ಗೋಡೆಗಳನ್ನು ನಿರ್ಮಿಸುವ ಕೆಲಸವನ್ನೂ ಮಾಡುತ್ತದೆ ಎಂಬುದನ್ನು - ಕುಲಕಸುಬಾದ ಮೀನುಗಾರಿಕೆಗೆ ದೊಡ್ಡಬಂಡವಾಳಿಗರು,ವಿದೇಶಿ ಬಂಡವಾಳ ಆಕ್ರಮಿಸಿದಾಗ ಅಲ್ಲಿನ ಜನರ ಬದುಕೇ ಹೊಸಕಿ ಹಾಕಿದಂತಾಯ್ತೆಂಬುದನ್ನು ತಂದಿದ್ದೇ ಶ್ಲಾಘನೀಯ ಪ್ರಯತ್ನ.

ಕೊಂಪೆಯಂತಹ ಒಂದು ಸಣ್ಣ ಊರಿಗೆ ಬರುವ ಟಿ.ವಿ. ತರುವ ಬದಲಾವಣೆಯ ಮೂಲಕ ತವೊಂದಿಗೆ ಮಾತನಾಡುವ ಸಿನಿಮಾ ಜಾಗತೀಕರಣದ ಹೊಡೆತಕ್ಕೆ ತತ್ತರಿಸುತ್ತಿರುವ ಕರಾವಳಿ ಮೀನುಗಾರರತ್ತ ಹೊರಳಿ ನೋಡುವಂತೆ ಸೂಕ್ಷ್ಮವಾಗಿ ತಿಳಿಸುತ್ತದೆ. ಮಂಗಳೂರಿನ ಕಡಲ ತೀರದಲ್ಲಿ ಆಳ ಸಮುದ್ರದ ಮೀನುಗಾರಿಕೆ (Deep Sea Shipping)ಗೆ ಬಹುರಾಷ್ಟ್ರೀಯ ಕಂಪನಿಗಳಿಗೆ ಪರವಾನಗಿ ಸಿಕ್ಕಿರುವುದು ಇಲ್ಲಿ ಗಿರೀಶ್‌ಗೆ ವಸ್ತುವಾಗಿದೆ.

ನಮ್ಮ ನೆಲದಲ್ಲಿ ಅದೆಷ್ಟೋ ಗುಲ್‌ನಬಿಯವರು ಗುಲಾಬಿಯರಾಗಿ ಬದುಕುತ್ತಾರೆ. ಈ ಇತ್ತೀಚಿನ ದಿನಗಳಲ್ಲಿ ಮಾಧ್ಯಮಗಳಲ್ಲಿ ವರದಿಯಾದಂತೆ ಚರ್ಚ್‌ಗಳಲ್ಲಿ ಶಿವಪೂಜೆ, ಫಕೀರಪ್ಪ ದಂಪತಿಗಳಿಂದ ಮಹಾಲಕ್ಷ್ಮೀ ಪೂಜೆ ಇವುಗಳ ಈ ನೆಲದ ಮುಗ್ಧ ಜೀವನದ ಸೊಬಗು ನೀಡುವಂತಹವು. ಆದರೆ ಕೋಮುದ್ವೇಷದ ಕರಾಳ ಛಾಯೆ ಹೇಗೆ ಈ ಜೀವನವನ್ನೇ ನುಂಗಿ ಹಾಕಿ ಬಿಡುವುದೆಂಬ ಸಣ್ಣ ನೋಟ ಈ ಚಿತ್ರದಲ್ಲಿ ಕಾಣಸಿಗುತ್ತದೆ. ಗುಲಾಬಿಯ ನೆರವಿನಿಂದಲೇ ಅಮ್ಮನ ಹೊಟ್ಟೆಯಿಂದ ಭೂಮಿಗಿಳಿದ ಹುಡುಗ ಚಿಗುರು ಮೀಸೆಯ ಯುವಕನಾಗಿ ಧರ್ಮೋದ್ಧಾರಕನಾಗಿ ಬಂದು ಗುಲ್‌ನಬಿ ಜಾಗ ಖಾಲಿ ಮಾಡು ಎನ್ನುವಾಗ ಭಾರತದ ಇಂದಿನ ಸ್ಥಿತಿಗೆ ಹಿಡಿದ ಕನ್ನಡಿಯಂತಿತ್ತು.

ಉಸಿರುಕಟ್ಟುವ ತಾಣ ಗಂಡನಿಲ್ಲ 'ಗಂಡನ' ಮನೆಯಿಂದ ಸಿಕ್ಕಷ್ಟು ಹಣಕ್ಕೆ ಮೀನು ಮಾರಿ ಓಡಿ ಹೋದ ಬೆಸ್ತರ ಹುಡುಗಿ, ಇದ್ದಕ್ಕಿದ್ದಂತೆ ಮಾಯವಾದ ಗುಲ್‌ನಬಿಯ (ಗುಲಾಬಿ) ಗಂಡ. ಒಂದಕ್ಕೊಂದು ಸಂಬಂಧ ಕಲ್ಪಿಸಿ ಬೆಳೆಸುವ ಕೋಮುಗಲಭೆ. ಒರಿಸ್ಸಾದಲ್ಲಿ, ಕರ್ನಾಟಕದಲ್ಲಿ ಈ ಕ್ಷಣ ನಡೆಯುತ್ತಿರುವ ಘಟನಾವಳಿಗಳು ಇಂತಹುವೇ ಅಲ್ಲವೇ? ಕಪೋಲಕಲ್ಪಿತ ಸುದ್ದಿಗಳನ್ನೇ ಬಂಡವಾಳವಾಗಿಸಿಕೊಳ್ಳುವ ಕೋಮುವಾದಿಗಳು, ಅವರ ಚಟುವಟಿಕೆಗಳು ಮುಂತಾಗಿ ಸಿನಿಮಾ ಈ ಸೂಕ್ಷ್ಮತೆಗಳತ್ತ ಬೆಳಕು ಚೆಲ್ಲುತ್ತದೆ. ಆದರೆ ಸಣ್ಣ ಕೊರಗು, ಕಾವ್ಯವಾಗಿ ನಮ್ಮೊಳಗೇ ಪ್ರವಹಿಸದೇ, ಬಿಡಿ ಬಿಡಿ ಸಂಗತಿಗಳಾಗಿ, ಸಾಧ್ಯವಾದರೆ ಪೋಣಿಸಿಕೊಳ್ಳಿ ಎನ್ನುವ ನೆಲೆಯಲ್ಲಿ ಸಿನಿಮಾ ನಿಲ್ಲುತ್ತದೆ. ಜೊತೆಗೆ ನನದೊಂದು ಅಳಲು: ಗಿರೀಶರ ಚಿತ್ರಗಳಲ್ಲಿ ಜನಸಾಮಾನ್ಯರನ್ನು ತಲುಪುವ ಸರಳತೆಗೆ ಇನ್ನಷ್ಟು ಒತ್ತುಬೇಕು. ಕಲಾತ್ಮಕತೆಯನ್ನು ಉಳಿಸಿಕೊಳ್ಳುತ್ತಲೇ, ಕಮರ್ಷಿಯಲ್ ಆಗದೆಯೇ ಜನರಿಗೆ ತಲುಪುವ ಕಾವ್ಯವಾಗಿ ಮೂಡಿಬರಬೇಕು.

ಜಾಗತೀಕರಣವೆಂಬ ವಿಷವರ್ತುಲ ದೊಳಗೆ ಎಲ್ಲರೂ ಸಿಲುಕಿಕೊಳ್ಳುವುದನ್ನು ಚಿತ್ರಿಸುವ ಪ್ರಯತ್ನದ ಮೂಲಕ ಈ ಚಿತ್ರ ನಮ್ಮಲ್ಲಿ ಕೆಲವರಿಗಿರುವ ಕೋಮುವಾದವೇ ಬೇರೆ, ಜಾಗತೀಕರಣವೇ ಬೇರೆ. ನಾನು ಕೋಮುವಾದದ ವಿರುದ್ಧ ಆದರೆ ಈ ಸುಧಾರಣೆ-ಪದಾರಣೆ, ಆರ್ಥಿಕತೆ ನನಗರ್ಥವಾಗದ್ದು ಎಂಬ ಧೋರಣೆಗೆ ಈ ಸಿನಿಮಾ ಒಂದು ಉತ್ತರ.

ಚಂದ್ರಯಾನ - 1: ಚಂದ್ರನ ಅಂಗಳಕ್ಕೆ ಭಾರತದ ಉಪಗ್ರಹ



ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಯು ಇದೇ ತಿಂಗಳ 22ರಂದು 'ಚಂದ್ರಯಾನ-1' ಉಪಗ್ರಹವನ್ನು ಧ್ರುವೀಯ ಉಪಗ್ರಹ ಪ್ರಕ್ಷೇಪಕ (ಪಿ.ಎಸ್.ಎಲ್.ವಿ ಎಂಬ ರಾಕೆಟ್) ದ ಮೂಲಕ ಉಡಾವಣೆ ಮಾಡಲಿದೆ. ಚಂದ್ರಯಾನದ ಪ್ರಮುಖ ಉದ್ದೇಶ: ಚಂದ್ರನಲ್ಲಿರುವ ಖನಿಜಾಂಶಗಳು ಮತ್ತು ರಾಸಾಯನಿಕಗಳನ್ನು ನಕ್ಷೆ ಮಾಡುವುದು ಮತ್ತು ಚಂದ್ರನ ಉಗಮದ ಕುರಿತು ಕುರುಹು ನೀಡುವುದು.

ಚಂದ್ರನತ್ತ ಮಾನವನ ಕಣ್ಣೋಟ:

ದೂರದರ್ಶಕಗಳ ಮೂಲಕ ಚಂದ್ರನ ಬಗ್ಗೆ ಮಾಹಿತಿ ಕಲೆ ಹಾಕುವುದಕ್ಕೆ ಕ್ರಿ.ಶ. 1610ರಲ್ಲಿ ಪ್ರಪ್ರಥಮವಾಗಿ ಚಾಲನೆ ನೀಡಿದ್ದು ಇಟಲಿಯ ಸುಪ್ರಸಿದ್ಧ ವಿಜ್ಞಾನಿ ಗೆಲಿಲಿಯೋ. ನಂತರದಲ್ಲಿ ಕ್ರಿ.ಶ. 1957ರ ಅಕ್ಟೋಬರ್ 4ರಂದು ರಷ್ಯಾವು ಕೃತಕ ಉಪಗ್ರಹ ಸ್ಪುಟ್ನಿಕನ್ನು ಗಗನಕ್ಕೇರಿಸಿ ಬಾಹ್ಯಾಕಾಶ ಯುಗದ ನಾಂದಿ ಹೇಳಿತು. ಮುಂದಿನ ಕೆಲವರ್ಷಗಳವರೆಗೆ ರಷ್ಯಾ ಮತ್ತು ಅಮೇರಿಕಾಗಳು ಸಕ್ರಿಯವಾಗಿ ಚಂದ್ರಾನ್ವೇಷಣೆಯನ್ನು ಮುಂದುವರೆಸಿದವು. ಈಗಾಗಲೇ ಶಕ್ತಿಶಾಲಿ ದೂರದರ್ಶಕಗಳ ಸಹಾಯದಿಂದ, ಬಾಹ್ಯಾಕಾಶದ ಚಂದ್ರಯಾನದ ಯೋಜನೆಗಳಿಂದ ಮತ್ತು 12 ಜನ ಗಗನಯಾತ್ರಿಗಳು ಚಂದ್ರನ ಮೇಲೆ ಪಾದಾರ್ಪಣೆ ಮಾಡಿ ತಂದಿರುವ ನೂರಾರು ಕಿಲೋಗ್ರಾಂ ಚಂದ್ರದ್ರವ್ಯದಿಂದ ನಮಗೆ ಲಭ್ಯವಿರುವ ಜ್ಞಾನ ಅಪೂರ್ಣವೆಂದೇ ಹೇಳಬಹುದು. ಚಂದ್ರನ ಭೂಪೃಷ್ಠದ ಮೂಲಭೂತ ಮತ್ತು ನಿಖರವಾದ ವಿವರಗಳು ಇನ್ನೂ ಮರೀಚಿಕೆಯಾಗಿಯೇ ಉಳಿದಿವೆ. ಈ ಹಿನ್ನೆಲೆಯಲ್ಲಿ ನಮ್ಮ ದೇಶದ ಇಸ್ರೋ ಕೂಡ ಚಂದ್ರಯಾನ ಯೋಜನೆಯನ್ನು ಹಮ್ಮಿಕೊಂಡಿದೆ.

ಚಂದ್ರನತ್ತ ಪಯಣಿಸುವ ಚಂದ್ರಯಾನ-1:

ಚಂದ್ರಯಾನ-1 ಉಪಗ್ರಹದಲ್ಲಿ ನಮ್ಮ ದೇಶದ ಐದು ಮತ್ತು ವಿದೇಶಗಳಿಂದ ಪಡೆದಿರುವ 6 ಸೇರಿದಂತೆ ಒಟ್ಟು 11 ಉಪಕರಣಗಳಿವೆ. ಈ ಉಪಕರಣಗಳನ್ನು ಒಳಗೊಂಡ ಉಪಗ್ರಹವನ್ನು ಭೂಮಿಯಿಂದ ಸುಮಾರು 4 ಲಕ್ಷ ಕಿಲೋ ಮೀಟರ್ ದೂರದಲ್ಲಿರುವ ಚಂದ್ರನ ಕಕ್ಷೆಗೆ ರವಾನಿಸಲಾಗುವುದು. ಅಲ್ಲಿಂದ ಚಾಂದ್ರೀಯ ವರ್ಗಾವಣೆಯ ಪಥವನ್ನನುಸರಿಸಿ ಚಂದ್ರನ ಕಕ್ಷೆಗೆ ವರ್ಗಾಯಿಸಲಾಗುವುದು. ಚಂದ್ರನ ಸುತ್ತ ತಿರುಗುವ ಚಂದ್ರಯಾನ ಉಪಗ್ರಹ ಚಂದ್ರನಿಂದ 100 ಕಿ.ಮೀ ಅಂತರದಲ್ಲಿರುತ್ತದೆ. ಚಂದ್ರ ಕಕ್ಷೆಯಲ್ಲಿ ಸೇರಿದ ನಂತರ ವೈಜ್ಞಾನಿಕ ಉಪಕರಣಗಳು ತಮ್ಮ ಕಾರ್ಯವನ್ನು ಆರಂಭಿಸಿ ಛಾಯಾ ಚಿತ್ರ ಮಾಹಿತಿಗಳನ್ನು ಸಂಗ್ರಹಿಸುವುವು. ಚಂದ್ರಯಾನದಲ್ಲಿ ಅಳವಡಿಸಿದ ಚಂದ್ರ ಪೃಷ್ಠ ಸ್ಪರ್ಶಕವನ್ನು ಉಪಗ್ರಹದಿಂದ ಚಂದ್ರನ ಮೇಲ್ಮೈಗೆ ರವಾನಿಸಲಾಗುವುದು.

ಚಂದ್ರಯಾನದ ಉಪಗ್ರಹದಲ್ಲಿರುವ ಉಪಕರಣಗಳು:

ವೈಜ್ಞಾನಿಕ ಅನ್ವೇಷಣೆಗೆ ಸಹಾಯಕವಾಗಲು ಉಪಗ್ರಹದಲ್ಲಿ ಅಳವಡಿಸಲಿರುವ ಉಪಕರಣಗಳೆಂದರೆ: ಚಾಂದ್ರೀಯ ಭೂಸ್ವರೂಪ ಚಿತ್ರಿಸುವ ಛಾಯಾಗ್ರಾಹಕ, ಅತಿರಂಜಿತ ವರ್ಣೀಯ ಛಾಯಾಗ್ರಾಹಕ, ಅಲ್ಪಶಕ್ತಿಯ (1-10 ಕೆ.ಇ.ವಿ) ಸಮಾಂತರಿಕ ಕ್ಷ ಕಿರಣ ಮಾಪಕ, ಉನ್ನತ ಶಕ್ತಿಯ (1-100 ಕೆ.ಇ.ವಿ) ಕ್ಷ ಕಿರಣ ಮಾಪಕ, ಲೇಸರ್ ವ್ಯಾಪ್ತಿ ಮಾಪನ ಉಪಕರಣ.

ಅಲ್ಲದೆ, ಅಂತರ ರಾಷ್ಟ್ರೀಯ ವೈಜ್ಞಾನಿಕ ಸಮುದಾಯವು ಇಸ್ರೋ ದ ಕರೆಗೆ ಓಗೊಟ್ಟು ಚಂದ್ರಯಾನ-1 ಯೋಜನೆಯಲ್ಲಿ ಪಾಲ್ಗೊಳ್ಳುತ್ತಿವೆ. ಅಮೇರಿಕಾ ಸಂಯುಕ್ತ ಸಂಸ್ಥಾನದ ನಾಸಾ ಸಂಸ್ಥೆ 'ಛಾಯಾಚಿತ್ರಗಳನ್ನು ಸೆರೆಹಿಡಿಯುವ ಸೂಕ್ಷ್ಮಾಕಾರದ ರಡಾರ್ ಉಪಕರಣ' ಹಾಗೂ 'ಚಾಂದ್ರೀಯ ಖನಿಜಾಂಶ ನಕ್ಷಕ' ಎಂಬ ವೈಜ್ಞಾನಿಕ ಉಪಕರಣಗಳನ್ನು ಚಂದ್ರಯಾನ-1 ಉಪಗ್ರಹದಲ್ಲಿ ಅಳವಡಿಸಲಿದೆ. ಜರ್ಮನಿಯ ಮ್ಯಾಕ್ಸ್ ಪ್ಲಾಂಕ್ ಸಂಸ್ಥೆಯು 0.2 ರಿಂದ 2 ಮೈಕ್ರಾನ್ ತರಂಗಾಂತರದ ಕೆಳಕೆಂಪು ವರ್ಣೀಯ ಮಾಪಕವನ್ನು ಅಳವಡಿಸಲು ಉತ್ಸುಕತೆ ತೋರಿಸಿದೆ. ಅಂತೆಯೇ ಸ್ವೀಡನ್-ಸ್ವಿಟ್ಜರ್‌ಲ್ಯಾಂಡ್ ಹಾಗೂ ಜಪಾನ್

ಪುಟ 12 ನೋಡಿ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH